ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ರೆಸಾರ್ಟ್‌ನಲ್ಲಿ
ಮಾರಾಮಾರಿ
ರಾಜಕಾರಣ
ಆನಂದ್ ಸಿಂಗ್



ಸಂಪುಟ 13 | ಸಂಚಿಕೆ 5 | ಜನವರಿ 28–ಫೆಬ್ರವರಿ 3, 2019 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com



ಸಾಹಿತ್ಯ, ರಾಜಕೀಯ ಮತ್ತು ಚಳುವಳಿ



ಅನ್ನ ಮತ್ತು ಅಕ್ಷರ ದಾಸೋಹಗಳ ಕಾಯಕಯೋಗಿ



ದುಡಿಯುವ ಜನರ ಬಜೆಟ್ ನಿರೀಕ್ಷೆ



ರೈತರ ಸಾಲಮನ್ನಾಕ್ಕೆ ರಂಪಾಟ ಏಕೆ?



'ಮೆಕ್ಸಿಕೋ ಗೋಡೆ'ಯ ಗರ ಬಡಿದ ಅಮೆರಿಕ



'ಬಿಜೆಪಿ ಸೋಲಿಸಿ, ಸಂವಿಧಾನ ಉಳಿಸಿ' #DefeatBJPSaveConstitution

ವೆನೆಝುವೆಲಾದ ಮೇಲೆ ಅಮೆರಿಕನ್ ಸಾಮ್ರಾಜ್ಯಶಾಹಿಯ ಹೊಸ ಆಕ್ರಮಣ –ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ಅಮೆರಿಕ ಸಂಯುಕ್ತ ಸಂಸ್ಥಾನ ವೆನೆಝುವೆಲಾದ ವಿರೋಧಿ ಗುಂಪುಗಳ ಮುಖಂಡ ಯುವಾನ್ ಗುಯೆಡೊರನ್ನು ವೆನೆಝುವೆಲಾದ ಅಧ್ಯಕ್ಷ ಎಂದು ಮಾನ್ಯ ಮಾಡಿರುವುದು ವೆನೆಝುವೆಲಾ ಬೊಲಿವೇರಿಯನ್ ಗಣತಂತ್ರದ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ಇದು ಆ ದೇಶದಲ್ಲಿನ ಸಂವಿಧಾನಿಕ ವ್ಯವಸ್ಥೆಯನ್ನು ಬುಡಮೇಲು ಮಾಡುವ ಮತ್ತು ಕ್ಷಿಪ್ರಕ್ರಾಂತಿಗೆ ಉತ್ತೇಜನೆ ನೀಡುವ ಒಂದು ಪ್ರಯತ್ನ ಎಂದು ಅದು ಹೇಳಿದೆ.

ನಿಕೊಲಸ್ ಮಡುರೊ ಮೇ 20, 2018ರಂದು ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ವೆನೆಝುವೆಲಾ ಬೊಲಿವೇರಿಯನ್ ಗಣತಂತ್ರದ ಅಧ್ಯಕ್ಷರಾಗಿ ಕಾನೂನುಬದ್ಧವಾಗಿ ಚುನಾಯಿತರಾಗಿದ್ದಾರೆ. ಅವರ ಚುನಾವಣೆ ವೆನೆಝುವೆಲಾದ ಸಂವಿಧಾನ ಮಂಜೂರು ಮಾಡಿರುವಂತಹ ಜನತೆಯ ಇಚ್ಛೆಯ ಒಂದು ಅಭಿವ್ಯಕ್ತಿ. ಹಲವಾರು ದೇಶಗಳಿಂದ ಬಂದ ಚುನಾವಣಾ ವೀಕ್ಷಕರು ಈ ಚುನಾವಣೆಯ ಉಸ್ತುವಾರಿ ನೋಡಿದ್ದು ಅವರೆಲ್ಲ ಇದು ಮುಕ್ತ ಮತ್ತು ನ್ಯಾಯಯುತ ಚುನಾವಣೆ ಎಂದು ಅನುಮೋದಿಸಿದ್ದಾರೆ. ಅಮೆರಿಕ ವಿವಿಧ ವಿಧಾನಗಳಿಂದ, ಪ್ರಜಾಸತ್ತಾತ್ಮಕವಾಗಿ ಚುನಾಯಿತವಾಗಿರುವ ಸರಕಾರವನ್ನು ಅಸ್ಥಿರಗೊಳಿಸಲು ಪ್ರಯತ್ನಿಸುತ್ತಲೇ ಇದೆ. ಅಮಾನವೀಯ ಆರ್ಥಿಕ ನಿರ್ಬಂಧಗಳು, ಮತ್ತು ಮಿಲಿಟರಿ ಹಸ್ತಕ್ಷೇಪದ ಬೆದರಿಕೆಯೂ ಇದರಲ್ಲಿ ಸೇರಿದೆ. ಇವು ವಿಶ್ವಸಂಸ್ಥೆಯ ಸನ್ನದ್ದಿನ ಉಲ್ಲಂಘನೆಯ ಭಂಡ ಕೃತ್ಯಗಳು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಅಮೆರಿಕ ಸಂಯುಕ್ತ ಸಂಸ್ಥಾನವು ವೆನೆಝುವೆಲಾದ ಚುನಾಯಿತ ಸರಕಾರದ ವಿರುದ್ಧ ಬಂಡೇಳುವಂತೆ ಸಶಸ್ತ್ರ ಪಡೆಗಳಿಗೆ ಕರೆ ನೀಡಿದ್ದರೂ ವೆನೆಝುವೆಲಾದ ಜನತೆ ಮತ್ತು ಸಶಸ್ತ್ರ ಪಡೆಗಳು ಮಡುರೊ ಆಡಳಿತದ ಪರವಾಗಿ ನಿಂತಿವೆ.

ವೆನೆಝುವೆಲಾದ ಜನತೆ ತಮ್ಮ ದೇಶವನ್ನು ಅಸ್ಥಿರಗೊಳಿಸುವ ಅಮೆರಿಕಾದ ಎಲ್ಲ ಪ್ರಯತ್ನಗಳನ್ನು ಪ್ರತಿರೋಧಿಸುವುದನ್ನು ಮುಂದುವರೆಸುತ್ತಾರೆ, ಮತ್ತು ಇನ್ನೊಮ್ಮೆ ಬಲಪಂಥೀಯ ಶಕ್ತಿಗಳ ಕ್ಷಿಪ್ರಕ್ರಾಂತಿ ಪ್ರಯತ್ನವನ್ನು ಸಮಗ್ರವಾಗಿ ಸೋಲಿಸುತ್ತಾರೆ ಎಂಬ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿರುವ ಸಿಪಿಐ(ಎಂ) ವೆನೆಝುವೆಲಾದ ಮೇಲೆ ಅಮೆರಿಕನ್ ಸಾಮ್ರಾಜ್ಯಶಾಹಿಯ ಇತ್ತೀಚಿನ ಈ ಆಕ್ರಮಣದ ಕೃತ್ಯವನ್ನು ಬಲವಾಗಿ ಖಂಡಿಸಿದೆ ಮತ್ತು ಜಗತ್ತಿನಾದ್ಯಂತ ಎಲ್ಲ ಜನತಾಂತ್ರಿಕ ಮತ್ತು ಶಾಂತಿಪ್ರಿಯ ಜನಗಳು ಅಮೆರಿಕನ್ ಹಸ್ತಕ್ಷೇಪದ ವಿರುದ್ಧ ಮತ್ತು ಅವರ ಸಾರ್ವಭೌಮತೆಯ ರಕ್ಷಣೆಯಲ್ಲಿ ವೆನೆಝುವೆಲಾ ಜನತೆಯ ಹೋರಾಟಗಳೊಂದಿಗೆ ಸೌಹಾರ್ದ ಬೆಂಬಲಕ್ಕೆ ನಿಲ್ಲಬೇಕು ಎಂದು ಮನವಿ ಮಾಡಿದೆ.

ಯಾಂಕಿಗಳೇ ತೊಲಗಿ.....

ವೆನೆಝುವೆಲಾದ ಕಾನೂನುಬದ್ಧವಾಗಿ ಚುನಾಯಿತರಾಗಿರುವ ಅಧ್ಯಕ್ಷ ನಿಕೊಲಸ್ ಮಡುರೊ ಜನವರಿ 23ರಂದು ತನ್ನ ಅಧ್ಯಕ್ಷೀಯ ನಿವಾಸದ ಮುಂದೆ ನೆರೆದಿದ್ದ ಸಾವಿರಾರು ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡುತ್ತ "ಪದಚ್ಯುತಿಯ ಪ್ರಯತ್ನಗಳಿಗೆ ನಮ್ಮ ಧಿಕ್ಕಾರ, ಹಸ್ತಕ್ಷೇಪದ ಕೃತ್ಯಗಳಿಗೆ ಧಿಕ್ಕಾರ, ಸಾಮ್ರಾಜ್ಯಶಾಹಿಗೆ ಧಿಕ್ಕಾರ.. ಅಮೆರಿಕ ಸಂಯುಕ್ತ ಸಂಸ್ಥಾನಗಳ ಸಾಮ್ರಾಜ್ಯಶಾಹಿ ಸರಕಾರದೊಂದಿಗೆ ರಾಜತಾಂತ್ರಿಕ ಮತ್ತು ರಾಜಕೀಯ ಸಂಬಂಧಗಳನ್ನು ಮುರಿದುಕೊಳ್ಳಲು ನಿರ್ಧರಿಸಿದ್ದೇವೆ, ಅವರ ಸಿಬ್ಬಂದಿ 72 ಗಂಟೆಗೊಳಗೆ ವೆನೆಝುವೆಲಾ ಬಿಟ್ಟು ಹೊರಡಬೇಕು" ಎಂದು ಸಾರಿದ್ದಾರೆ.



ದುರ್ಬಲ ವಿಭಾಗಗಳ ಪರಿಕಲ್ಪನೆಯನ್ನೇ ಹಾಸ್ಯಾಸ್ಪದಗೊಳಿಸಿರುವ, ಪ್ರಜಾಪ್ರಭುತ್ವ-ವಿರೋಧಿ ನಡೆ-ಸಿಪಿಐ(ಎಂ)

ಕೇಂದ್ರ ಸರಕಾರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯದ ಮೂಲಕ ಇದುವರೆಗೆ ಮೀಸಲಾತಿ ಇರದ ಪ್ರವರ್ಗಗಳಲ್ಲಿನ ಆರ್ಥಿಕವಾಗಿ ದುರ್ಬಲವಾಗಿರುವ ವಿಭಾಗಗಳಿಗೆ 10% ಮೀಸಲಾತಿಯ ಮಾನದಂಡಗಳ ಅಧಿಸೂಚನೆಯನ್ನು ಪ್ರಕಟಿಸಿದೆ. ಈ ಆದೇಶದ ಪ್ರಕಾರ ಇದು ಕೇಂದ್ರ ಸರಕಾರದ ಸಿವಿಲ್ ಹುದ್ದೆಗಳು ಮತ್ತು ಸೇವೆಗಳಲ್ಲಿ ಮತ್ತು ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶಕ್ಕೆ ಅದ್ಯತೆಯ ಮೇಲೆ ಮೀಸಲಾತಿಯ ಸೌಲಭ್ಯಗಳಿಗಾಗಿ.

ಒಟ್ಟು ಎಂಟು ಲಕ್ಷ ರೂ. ಅಥವ ಅದಕ್ಕಿಂತ ಕಡಿಮೆ ವಾರ್ಷಿಕ ಆದಾಯದ ಕುಟುಂಬಗಳು ಈ ಮೀಸಲಾತಿಗೆ ಅರ್ಹವಾಗುತ್ತವೆ. ಇದಲ್ಲದೆ, ಈ ಕೆಳಗಿನ ಆಸ್ತಿಗಳಿರುವವರನ್ನು ಪರಿಗಣಿಸಲಾಗುವುದಿಲ್ಲ: 5 ಎಕ್ರೆ ಅಥವ ಹೆಚ್ಚು ಕೃಷಿ ಭೂಮಿ ಹೊಂದಿರುವವರು; ಒಂದು ಅಧಿಸೂಚಿತ ಮುನಿಸಿಪಾಲಿಟಿಯಲ್ಲಿ 100 ಚದರ ಗಜ ಅಥವ ಹೆಚ್ಚು, ಇದನ್ನು ಬಿಟ್ಟು ಇತರೆಡೆಗಳಲ್ಲಿ 200 ಚದರ ಗಜಕ್ಕಿಂತ ಹೆಚ್ಚಿನ ವಾಸದ ನಿವೇಶನ ಹೊಂದಿರುವವರು ಮೀಸಲಾತಿ ಸೌಲಭ್ಯಗಳಿಗೆ ಅರ್ಹರಾಗಿರುವುದಿಲ್ಲ.

ಈ ಮಾನದಂಡಗಳು ಆರ್ಥಿಕವಾಗಿ ದುರ್ಬಲ ವಿಭಾಗಗಳು ಎಂಬ ಪರಿಕಲ್ಪನೆಯನ್ನೇ ಹಾಸ್ಯಾಸ್ಪದಗೊಳಿಸಿವೆ ಎನ್ನುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಅವನ್ನು ವಿರೋಧಿಸಿದೆ. ಏಕೆಂದರೆ, ಈ ಸರಕಾರ 18,000ರೂ. ಕನಿಷ್ಟ ಕೂಲಿಯನ್ನು ಕೂಡ ಒಪ್ಪುತ್ತಿಲ್ಲ. ಆದರೆ ಇಲ್ಲಿ ಸುಮಾರು 70,000 ರೂ. ಮಾಸಿಕ ಆದಾಯ ಹೊಂದಿರುವವರನ್ನು ಮೀಸಲಾತಿಗೆ ಅರ್ಹರೆಂದು ಸೇರಿಸಿದೆ. ಈ ಮಾನದಂಡ ನಿಜವಾದ ದುರ್ಬಲ ವಿಭಾಗಗಳನ್ನು ಯಾವುದೇ ಸೌಲಭ್ಯದಿಂದ ವಂಚಿಸುತ್ತದೆ, ಏಕೆಂದರೆ ಉತ್ತಮ ಆದಾಯ ಹೊಂದಿರುವವರೇ ಇವನ್ನೆಲ್ಲ ಕಬಳಿಸುತ್ತಾರೆ. ಇದಲ್ಲದೆ ಇತರ ಹಿಂದುಳಿದ ವರ್ಗ(ಒಬಿಸಿ)ಗಳ ಕೆನೆಪದರಕ್ಕೆ ನಿರೂಪಿಸಿರುವ ಮಾನದಂಡಗಳನ್ನೇ ಇಲ್ಲಿಯೂ ಬಳಸಿರುವುದು ಸಂಪೂರ್ಣ ತಪ್ಪು, ಏಕೆಂದರೆ ಒಬಿಸಿ ವಿಭಾಗಗಳು ಸಾಮಾಜಿಕವಾಗಿ ವಂಚಿತವೂ ಆಗಿರುವವುಗಳು. ಇದು ಸಾಮಾನ್ಯ ಪ್ರವರ್ಗಕ್ಕೆ ಅನ್ವಯಿಸುವುದಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ.

ಸಂಸತ್‌ನಲ್ಲಿ ಸಂವಿಧಾನ ತಿದ್ದುಪಡಿ ಮಸೂದೆಯನ್ನು ಚರ್ಚಿಸುವಾಗ ಈ ಪ್ರಸ್ತಾವಗಳನ್ನು ಸಂಸತ್ತಿನ ಮುಂದೆ ಇಟ್ಟಿರದಿರುವುದು ಈ ಸರಕಾರದ ಪ್ರಜಾಪ್ರಭುತ್ವ-ವಿರೋಧಿ ನಡೆಗೆ ಅನುಗುಣವಾಗಿಯೇ ಇದೆ. ಅಲ್ಲದೆ ಈಗಾಲೇ ಜನವರಿ 31 ರಂದು ಸಂಸತ್ತಿನ ಅಧಿವೇಶನವನ್ನು ಕರೆಯಲಾಗಿದ್ದು, ಅಲ್ಲಿಯ ವರೆಗೆ ಕಾಯದೆ, ಸ್ವೇಚ್ಛಾಚಾರಿ, ಕಾಯಿದೆಬಾಹಿರ ರೀತಿಯಲ್ಲಿ ಒಂದು ಕಾರ್ಯಾಂಗದ ಆದೇಶದ ಮೂಲಕ ಇದನ್ನು ಮುಂದೊತ್ತಿದೆ ಎಂಬ ಸಂಗತಿಯತ್ತವೂ ಪೊಲಿಟ್‌ಬ್ಯುರೊ ಗಮನ ಸೆಳೆದಿದೆ.

ಸಂಸತ್ತಿನ ಒಂದು ಸೂಕ್ತ ಶಾಸನವಿಲ್ಲದೆ ಈ ಕಾರ್ಯಾಂಗದ ಆದೇಶವನ್ನು ಕಾರ್ಯಗತಗೊಳಿಸಲು ಬಿಡಬಾರದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸರಕಾರವನ್ನು ಆಗ್ರಹಿಸಿದೆ.

ಪೌರತ್ವ(ತಿದ್ದುಪಡಿ) ಮಸೂದೆಯನ್ನು ಹಿಂದಕ್ಕೆ ಪಡೆಯಬೇಕು-ಫೆ. 4 ರಂದು ಅಖಿಲ ಭಾರತ ಪ್ರತಿಭಟನೆ

ಲೋಕಸಭೆ ಅಂಗೀಕರಿಸಿರುವ ಮತ್ತು ರಾಜ್ಯಸಭೆಯ ಅಂಗೀಕಾರಕ್ಕೆ ಕಾಯುತ್ತಿರುವ ಪ್ರಸ್ತಾವಿತ ಪೌರತ್ವ(ತಿದ್ದುಪಡಿ) ಮಸೂದೆಯನ್ನು ಕುರಿತಂತೆ ದೇಶದ ಈಶಾನ್ಯ ಭಾಗದಲ್ಲಿ ಹೆಚ್ಚುತ್ತಿರುವ ಕ್ಷೋಭೆ ಮತ್ತು ತಳಮಳದ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಳವಾದ ಆತಂಕವನ್ನು ವ್ಯಕ್ತಪಡಿಸಿದೆ.


ಈ ಮಸೂದೆ ಜಾತಿ, ಪಂಥ, ಲಿಂಗ, ಜನಾಂಗ ಮತ್ತು ಸಂಸ್ಕೃತಿಗಳ ವೈವಿಧ್ಯಗಳನ್ನು ಭೇದ-ಭಾವವಿಲ್ಲದೆ ಎಲ್ಲರಿಗೂ ಪೌರತ್ವ ನೀಡುವ ಸಂವಿಧಾನದ ಮೂಲ ನೆಲೆಯನ್ನು ಭಂಗಗೊಳಿಸಿದೆ. ಈ ಪ್ರಸ್ತಾವ ಪೌರತ್ವಕ್ಕೆ ಧಾರ್ಮಿಕ ಗುರುತನ್ನೇ ಮಾನ್ಯ ಮಾಡುವುದರಿಂದಾಗಿ ವೈವಿಧ್ಯತೆಯಲ್ಲಿ ಏಕತೆಯ ವಿಚಾರಕ್ಕೆ ಬೆದರಿಕೆಯನ್ನು ಒಡ್ಡಿದೆ.

ಈಶಾನ್ಯ ಭಾಗ ದೇಶದಲ್ಲಿ ಎಲ್ಲ ಜನಗಳ ನಡುವೆಯೂ ಶ್ರೀಮಂತ ವೈವಿಧ್ಯತೆಯಿರುವ, ಮತ್ತು ಸಾಂಸ್ಕೃತಿಕ, ಭಾಷಿಕ, ಧಾರ್ಮಿಕ ಮತ್ತು ಜನಾಂಗೀಯ ಬಹುತ್ವ ಆಧಾರಿತ ಸಂವೇದನೆಗಳನ್ನು ಹೊಂದಿರುವ ಒಂದು ಪ್ರದೇಶ. ಈ ಪ್ರದೇಶದಲ್ಲಿ ವಾಸವಾಗಿರುವ ಸಮುದಾಯಗಳ ವಿಶಿಷ್ಟ ಅಸ್ಮಿತೆಗಳನ್ನು ಕಾಪಾಡಿಕೊಳ್ಳುವ ವಿಷಯದಲ್ಲಿ ಒಂದು ಅಭದ್ರತೆಯ ಭಾವವೂ ಇದೆ. ಇತ್ತೀಚಿನ ಸಮಯದಲ್ಲಿ ಈ ಪ್ರದೇಶದಲ್ಲಿ ಹಿಂದಿನ ವರ್ಷಗಳಿಗೆ ಹೋಲಿಸಿದರೆ ಶಾಂತಿ ನೆಲೆಸುವಂತಾಗಿದೆ. ಆದರೆ ಈ ಪೌರತ್ವ(ತಿದ್ದುಪಡಿ) ಮಸೂದೆ ಈ ಸ್ಥಿರತೆಯನ್ನು ಕದಡಿಸುತ್ತಿದೆ ಎಂದು ಸಿಪಿಐ(ಎಂ) ಕಳವಳ ವ್ಯಕ್ತಪಡಿಸಿದೆ.

ಅಸ್ಸಾಂ ಮತ್ತು ಈಶಾನ್ಯ ಭಾರತದ ಇತರ ಬಹುಪಾಲು ರಾಜ್ಯಗಳಲ್ಲಿ ಈ ಶಾಸಕೀಯ ಪ್ರಸ್ತಾವದ ವಿರುದ್ಧ ಪ್ರತಿಭಟಿಸುತ್ತ ವಿಶಾಲ ಜನವಿಭಾಗಗಳು ಬೀದಿಗಳಿಗೆ ಇಳಿದಿವೆ. ಈ ಜನತೆಯ ಹೆಚ್ಚಿರುವ ಅಭದ್ರತೆಯ ಭಾವ ಮತ್ತು ಕ್ಷೋಭೆಯನ್ನು ಗಣನೆಗೆ ತಗೊಂಡು ಪ್ರಸ್ತಾವಿತ ಸಂವಿಧಾನ ತಿದ್ದುಪಡಿಯನ್ನು ಹಿಂದಕ್ಕೆ ಪಡೆಯುವುದು ಅತ್ಯಂತ ತುರ್ತಿನ ವಿಷಯವಾಗಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಪ್ರಸ್ತಾವನೆಯನ್ನು ಮುಂದಕ್ಕೆ ಒಯ್ಯದೆ ಸಂಪೂರ್ಣವಾಗಿ ಹಿಂದಕ್ಕೆ ಪಡೆಯಬೇಕು ಎಂದು ಆಗ್ರಹಿಸಿದೆ.

ಫೆಬ್ರುವರಿ 4ರಂದು ದೇಶಾದ್ಯಂತ ಈ ತಿದ್ದುಪಡಿ ಮಸೂದೆಯನ್ನು ಹಿಂದಕ್ಕೆ ಪಡೆಯುವಂತೆ ಆಗ್ರಹಿಸಿ ಪ್ರತಿಭಟನಾ ಕಾರ್ಯಾಚರಣೆಗಳನ್ನು ನಡೆಸಬೇಕು ಎಂದು ಪೊಲಿಟ್‌ಬ್ಯುರೊ ಪಕ್ಷದ ಎಲ್ಲ ಘಟಕಗಳಿಗೆ ಕರೆ ನೀಡಿದೆ. ದೇಶದ ವೈವಿಧ್ಯತೆಯಲ್ಲಿನ ಏಕತೆಯಲ್ಲಿ ಮತ್ತು ಸಂವಿಧಾನದಲ್ಲಿ ಪ್ರತಿಷ್ಠಾಪಿಸಿರುವ ನಮ್ಮ ಪೌರತ್ವದ ಸಾಮಾನ್ಯ ಆಧಾರದಲ್ಲಿ ನಂಬಿಕೆಯಿರುವ ಎಲ್ಲ ಪಕ್ಷಗಳು, ಗುಂಪುಗಳು ಮತ್ತು ನಾಗರಿಕರು ಈ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಬೇಕು ಎಂದೂ ಸಿಪಿಐ(ಎಂ) ಪೊಲಿಟ್‌ಬ್ಯುರೊ ಮನವಿ ಮಾಡಿದೆ.

ತಿರುನಲ್ವೇಲಿಯಲ್ಲಿ ದೇಶದ ಅತಿ ದೊಡ್ಡ ಲೆನಿನ್ ಪ್ರತಿಮೆ ಸ್ಥಾಪನೆ



ತ್ರಿಪುರಾದಲ್ಲಿ ಬಲಪಂಥೀಯ ಗೂಂಡಾಗಳು ಜಗತ್ತಿನ ಮೊದಲ ಸಮಾಜವಾದಿ ಪ್ರಭುತ್ವದ ನೇತಾರ ವಿ.ಐ.ಲೆನಿನ್ ರವರ ಪ್ರತಿಮೆಯನ್ನು ಕೆಡವಿದ ಕೆಲವೇ ತಿಂಗಳೊಳಗೆ ದೇಶದ ಅತಿ ದೊಡ್ಡ ಲೆನಿನ್ ಪ್ರತಿಮೆಯನ್ನು ತಮಿಳುನಾಡಿನ ತಿರುನಲ್ವೇಲಿಯಲ್ಲಿ ಅಲ್ಲಿನ ಸಿಪಿಐ(ಎಂ) ಜಿಲ್ಲಾ ಸಮಿತಿಯ ಮುತುವರ್ಜಿಯಿಂದ ಸ್ಥಾಪಿಸಲಾಗಿದೆ.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿಯವರು ಜನವರಿ 23 ರಂದು ಪ್ರತಿಮೆಯ ಅನಾವರಣ ನಡೆಸಿದರು. ತಿರುನಲ್ವೇಲಿ ಜಿಲ್ಲಾ ಸಮಿತಿಯನ್ನು ಈ ಸಾಧನೆಗೆ ಅಭಿನಂದಿಸಿದ ಅವರು, ಇದೇ ಜಿಲ್ಲೆಯವರಾದ ತಮಿಳಿನ ಪ್ರತಿಷ್ಠಿತ ಕವಿ ಸುಬ್ರಮಣ್ಯ ಭಾರತಿ ಅಕ್ಟೋಬರ್ ಕ್ರಾಂತಿಯನ್ನು ಪ್ರಶಂಸಿಸುವ ಒಂದು ಕವನ ಬರೆದಿರುವುದನ್ನು ಸ್ಮರಿಸಿಕೊಂಡರು.

ಲೆನಿನ್ ಮತ್ತು ಇತರ ಮಾರ್ಕ್ಸ್‌ವಾದಿಗಳು ಇತಿಹಾಸವನ್ನು ವ್ಯಾಖ್ಯಾನಿಸಿದರು ಮಾತ್ರವಲ್ಲ, ಸ್ವತಃ ಇತಿಹಾಸವನ್ನು ನಿರ್ಮಿಸಿದರು, ಆದ್ದರಿಂದ ಲೆನಿನ್ ನಿಧನದ 95 ವರ್ಷಗಳ ನಂತರವೂ ಅವರ ಪ್ರತಿಮೆಯನ್ನು ಸ್ಥಾಪಿಸುವುದು ಒಂದು ಗಮನಾರ್ಹ ಸಾಧನೆ ಎಂದು ನಂಬಿದ್ದೇವೆ ಎಂದು ಅವರು ಹೇಳಿದರು.

ಬಂಡವಾಳಶಾಹಿ ವಿರುದ್ಧ ಹೋರಾಡಲೇ ಬೇಕಾಗಿದೆ, ಅದಕ್ಕೆ ಕಾರಣ ಸರಳ, ಏಕೆಂದರೆ, ಅದು ಕಾರ್ಮಿಕ ವರ್ಗವನ್ನು ಶೋಷಿಸುತ್ತದೆ, ಕಾರ್ಮಿಕ ವರ್ಗವನ್ನು ಹೆಚ್ಚಿನ ದರದಲ್ಲಿ ಶೋಷಣೆ ಮಾಡಲು ಕಾರ್ಪೊರೇಟ್‌ಗಳಿಗೆ ಬೆಂಬಲ ನೀಡದ ಪ್ರಭುತ್ವವು ಬದುಕುಳಿಯಲು ಅದು ಅನುಮತಿ ನೀಡುವುದಿಲ್ಲ, ಬಂಡವಾಳಿಗರು ಕಾರ್ಮಿಕ ವರ್ಗದ ಕಲ್ಯಾಣಕ್ಕೆ ಕೆಲಸ ಮಾಡುವ ಯಾವುದೇ ಪ್ರಗತಿಪರ ಸಂಘಟನೆಯನ್ನು ಮುರಿದು ಹಾಕಲು ಸಕಲ ಕ್ರಮಗಳನ್ನೂ ಕೈಗೊಳ್ಳುತ್ತಾರೆ. ಬಂಡವಾಳಶಾಹಿಯ ವಿರುದ್ಧ ಪ್ರಗತಿಪರ ಶಕ್ತಿಗಳ ಸತತ ಹೋರಾಟದ ಮೂಲಕವೇ ಚೇಲಾ ಬಂಡವಾಳಶಾಹಿಯನ್ನು ಸೋಲಿಸಲು ಸಾಧ್ಯ ಎಂದು ಯೆಚುರಿ ಮುಂದುವರೆದು ಹೇಳಿದರು.

ಪ್ರತಿಮೆ ಅನಾವರಣದ ಮೊದಲು ನಡೆದ ಸಾರ್ವಜನಿಕ ಸಭೆಯಲ್ಲಿ ರಾಜ್ಯ ಸಿಪಿಐ(ಎಂ) ಕಾರ್ಯದರ್ಶಿ ಕೆ.ಬಾಲಕೃಷ್ಣನ್, ಕೇಂದ್ರ ಸಮಿತಿ ಸದಸ್ಯೆ ಯು.ವಾಸುಕಿ ಮತ್ತಿತರ ಮುಖಂಡರು ಮಾತನಾಡಿದರು.

ರಾಜ್ಯ ಬಜೆಟಿನಿಂದ ದುಡಿಯುವ ಜನರ ನಿರೀಕ್ಷೆಗಳು

ಸಂಪಾದಕೀಯ

ರಾಜ್ಯದ ಮೈತ್ರಿ ಸರಕಾರ 2019-20 ಸಾಲಿನ ಎರಡನೇ ಬಜೆಟನ್ನು ಫೆಬ್ರುವರಿ 8 ರಂದು ಮಂಡಿಸಲಿದೆ. ಅದಕ್ಕೆ ತಯಾರಿ ನಡೆದಿದೆ. ಬಿಜೆಪಿಯ ರೆಸಾರ್ಟ್ ರಾಜಕಾರಣದ ದಾಳಿಯಿಂದಾಗಿ ಬಜೆಟ್ ಮಂಡಿಸಲು ಸರಕಾರ ಇರುತ್ತದೋ ಇಲ್ಲವೋ ಎಂಬ ಗಂಭೀರ ಪ್ರಶ್ನೆಯೂ ಇದೆ. ಬಜೆಟ್ ನಲ್ಲಿ ಏನಿರಬೇಕು ಎಂಬುದರ ಬಗ್ಗೆ ವಿವಿಧ ಜನವಿಭಾಗಗಳ ಪ್ರತಿನಿಧಿಗಳ ಜತೆ ಸಲಹೆ-ಸಮಾಲೋಚನೆಗಳೂ ಆರಂಭವಾಗಿವೆ ಎನ್ನಲಾಗಿದೆ. ಇಂತಹ ಸಲಹೆ-ಸಮಾಲೋಚನೆಗಳಿಗೆ ಉದ್ಯಮ, ವಾಣಿಜ್ಯ ಮತ್ತು ಕಾರ್ಪೋರೆಟ್ ದಿಗ್ಗಜಗಳನ್ನು ಪ್ರತಿನಿಧಿಗಳನ್ನು ಕರೆಯುವುದೇ ವಾಡಿಕೆ. ದುಡಿಯುವ ಜನರ ಸಂಘಟನೆಗಳ ಪ್ರತಿನಿಧಿಗಳನ್ನು ಕರೆಯುವುದು ಅಪರೂಪ. ಕರೆದರೂ ಅವುಗಳ ಮನವಿಯನ್ನು ಗಂಭೀರವಾಗಿ ಪರಿಗಣಿಸುವುದು ಅಪರೂಪ.

ಬಜೆಟಿನಿಂದ ದುಡಿಯುವ ಜನರ ನಿರೀಕ್ಷೆಗಳು ಹೊಸವೇನಲ್ಲ. ವಿವಿಧ ದುಡಿಯುವ ಜನರ ಸಂಘಟನೆಗಳು ಹಲವು ಹೋರಾಟಗಳ ಮೂಲಕ ಸರಕಾರದ ಮುಂದೆ ಇಟ್ಟ ಹಕ್ಕೊತಾಯಗಳೇ ಅವರ ನಿರೀಕ್ಷೆಗಳು. ಅವುಗಳಲ್ಲಿ ಕೆಲವು ಹಿಂದಿನ ಸರಕಾರಗಳು ತತ್ವಶಃ ಒಪ್ಪಿದ್ದವೂ ಕೂಡಾ. ಹೆಚ್ಚಿನವು ದೀರ್ಘಕಾಲದಿಂದ ನೆನೆಗುದಿಗೆ ಬಿದ್ದವು. ಕೆಲವು ಮೈತ್ರಿ ಪಕ್ಷಗಳ ಪ್ರಣಾಳಿಕೆಯಲ್ಲಿ ಹಿಂದಿನ ಬಜೆಟಿನಲ್ಲಿ ಹೇಳಲ್ಪಟ್ಟು ಜಾರಿಯಾಗದೆ ಉಳಿದವು. ಅವನ್ನು ಬಜೆಟ್ ಮಂಡನೆಯಲ್ಲಿ ತೊಡಗಿರುವ ಈ ಸರಕಾರಕ್ಕೆ ನೆನಪು ಮಾಡಿಕೊಡಬೇಕಾಗಿದೆ.

ಇದು ರೈತ-ಪರ ಸರಕಾರ ಎಂದು ಹೇಳಿಕೊಳ್ಳಲಾಗುತ್ತಿದ್ದರೂ ರೈತರ ಆತ್ಮಹತ್ಯೆಗಳು ಅವ್ಯಾಹತವಾಗಿ ಮುಂದುವರೆದಿವೆ. ಸರಕಾರದ ಸಾಲಮನ್ನಾ ಬಗೆಗಿನ ಘೋಷಣೆಗಳು ರೈತರಲ್ಲಿ ಯಾವುದೇ ಕನಿಷ್ಟ ಭರವಸೆ ಸಹ ಮೂಡಿಸಿಲ್ಲ ಎಂಬುದು ಇದರಿಂದ ಸ್ಪಷ್ಟ. ರಾಷ್ಟ್ರೀಕೃತ, ಸಹಕಾರಿ ಮತ್ತಿತರ ಬ್ಯಾಂಕುಗಳ ಸಾಂಸ್ಥಿಕ ಸಾಲಕ್ಕೆ ಸೀಮಿತವಾಗಿರುವ ಈಗಿನ ಸಾಲಮನ್ನಾ ಯೋಜನೆ ಸಣ್ಣ-ಬಡ ರೈತರ ಆತ್ಮಹತ್ಯೆಗಳನ್ನು ತಡೆಯುವುದಿಲ್ಲ. ರೈತರು, ಕೂಲಿಕಾರರ ಮತ್ತು ಕಸುಬುದಾರರ ಖಾಸಗಿ-ಲೇವಾದೇವಿಗಾರರ ಸಾಲ ಸೇರಿದಂತೆ ಎಲ್ಲಾ ರೀತಿಯ ಸಾಲವನ್ನು ಕೇರಳದ ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಸರಕಾರ ಜಾರಿಗೆ ಹಿಂದೆ ತಂದಿದ್ದ ಸಾಲಪರಿಹಾರದ ಮಾದರಿಯಲ್ಲಿ ಮನ್ನಾ ಮಾಡಲು ಬಜೆಟಿನಲ್ಲಿ ಹಣವನ್ನು ತೆಗೆದಿಡಬೇಕು. ಅತಿವೃಷ್ಟಿ ಮತ್ತು ಅನಾವೃಷ್ಟಿಗಳಿಂದ ನಷ್ಟಕ್ಕೀಡಾಗುವ ಎಲ್ಲಾ ರೈತರಿಗೆ ಪರಿಹಾರ ಒದಗಿಸಬೇಕು. ಮೋಸದ ಬೆಂಬಲ ಬೆಲೆ ನಿಗದಿಯನ್ನು ಕೈಬಿಟ್ಟು ವೈಜ್ಞಾನಿಕವಾಗಿ ಒಟ್ಟು ಉತ್ಪಾದನಾ ವೆಚ್ಚಕ್ಕೆ ಶೇ 50 ಲಾಭಾಂಶ ಸೇರಿಸಿ ಲೆಕ್ಕಹಾಕಿದ ಬೆಲೆ ನಿಗದಿಸಿ, ಅದನ್ನು ಸುಗ್ಗಿ ಪೂರ್ವದಲ್ಲಿಯೇ ಅಗತ್ಯ ಹಣಬಲದೊಂದಿಗೆ ಸರಕಾರಿ ಸಂಸ್ಥೆಗಳು ಮಾರುಕಟ್ಟೆಗಳಲ್ಲಿ ಖರೀದಿಸುವಂತೆ ಮಾಡಿ ಬೆಲೆಯನ್ನು ಖಾತರಿಯಾಗಿ ರೈತರಿಗೆ ದೊರೆಯುವಂತೆ ಕ್ರಮವಹಿಸಬೇಕು. ದೀರ್ಘಕಾಲದಿಂದ ಇರುವ ರೈತ ಸಂಘಟನೆಗಳ ಈ ಒತ್ತಾಯವನ್ನು ಜಾರಿ ಮಾಡದೆ ರೈತರ ಆತ್ಮಹತ್ಯೆಗಳನ್ನು ತಡೆಯಲಾಗುವುದಿಲ್ಲ ಎಂದು ಸರಕಾರ ಅರ್ಥಮಾಡಿಕೊಂಡು, ಇದಕ್ಕೆ ಅಗತ್ಯವಾದ ಕ್ರಮಗಳನ್ನು ಬಜೆಟಿನಲ್ಲಿ ಸೇರಿಸಬೇಕು.



ಬಡವರು ಸಾಗುವಳಿಯಲ್ಲಿ ತೊಡಗಿದ ಸರಕಾರಿ ಹಾಗೂ ಅರಣ್ಯ ಜಮೀನುಗಳ ಹಕ್ಕುಪತ್ರ ನೀಡಲು ಅಡ್ಡಿಯಾಗಿರುವ ಹೆಚ್ಚಿನ ಕಾನೂನಿನ ಅಡಚಣೆಗಳನ್ನು ನಿವಾರಿಸಲಾಗಿದ್ದರೂ, ಹಕ್ಕುಪತ್ರ ಕೊಡುವ ಮೂಲಕ ಅದರ ಜಾರಿಯ ಪ್ರಾಮಾಣಿಕ ಪ್ರಯತ್ನ ಆಗಿಲ್ಲ. ಬದಲಾಗಿ ಸರಕಾರಿ ಜಮೀನು, ಕೆರೆಕುಂಟೆ, ಗೋಮಾಳಗಳು, ಅರಣ್ಯ ಜಮೀನನ್ನು ಗುಳುಂ ಮಾಡಿದ ಭೂಗಳ್ಳರ ಮೇಲೆ ಯಾವುದೇ ಕ್ರಮಕೈಗೊಳ್ಳದೆ, ಬಗರ್ ಹುಕುಂ ರೈತರ ಮೇಲೆ 'ಭೂಗಳ್ಳ'ರೆಂದು ಪ್ರಕರಣಗಳನ್ನು ದಾಖಲಿಸಿ ಕಿರುಕುಳ ಕೊಡುವುದು ಜೈಲಿಗೆ ಹಾಕುವುದೂ ನಡೆದಿದೆ. ಇದನ್ನು ಸರಿಪಡಿಸಬೇಕಾಗಿದೆ.

ಆಹಾರದ ಭದ್ರತೆಯನ್ನು ಆಂಶಿಕವಾಗಿಯಾದರೂ ಜಾರಿಗೆ ತಂದ 'ಅನ್ನಭಾಗ್ಯ'ದಲ್ಲಿ ಕಳೆದ ಬಜೆಟಿನಲ್ಲಿ ಕಡಿತ ಮಾಡಲಾಗಿತ್ತು. ಅದಕ್ಕೆ ತಕ್ಕ ಬಜೆಟಿನ ಬೆಂಬಲ ನೀಡುವುದಲ್ಲದೆ ಅದರ ವ್ಯಾಪಕ ನ್ಯೂನತೆಗಳನ್ನು ಸರಿಪಡಿಸಬೇಕು. ಈಗಲೂ ಗುರಿಬದ್ಧ ಪಡಿತರ ವ್ಯವಸ್ಥೆಯಲ್ಲಿ ಪೋಲು ತಪ್ಪಿಸುವ ಹೆಸರಲ್ಲಿ ಹೆಚ್ಚೆಚ್ಚು ಷರತ್ತುಗಳನ್ನು (ಆಧಾರ್ ಲಿಂಕ್ ಇತ್ಯಾದಿ) ಹಾಕಿ ಅದನ್ನು ದುರ್ಬಲಗೊಳಿಸುವ ಮತ್ತು ಸಹಾಯಧನದ 'ನಗದು ವರ್ಗಾವಣೆ ಯೋಜನೆ' ಬದಲು, ಸಾರ್ವತ್ರಿಕ ಪಡಿತರ ವ್ಯವಸ್ಥೆ ತರುವುದು, ಹಸಿವು-ಅಪೌಷ್ಟಿಕತೆ ವ್ಯಾಪಕವಾಗಿರುವ ಇಂದಿನ ಪರಿಸ್ಥಿತಿಯಲ್ಲಿ ತುರ್ತು ಅಗತ್ಯ. ಇದಕ್ಕೆ ಬಜೆಟಿನ ಬೆಂಬಲಕ್ಕೆ ಕ್ರಮ ಅಗತ್ಯ.

ಗ್ರಾಮೀಣ ಮತ್ತು ಕೃಷಿ ಸಂಕಟ, ಕೈಗಾರಿಕಾ ಸ್ಥಗಿತತೆ, ನೋಟು-ನಿಷೇಧ, ಜಿ.ಎಸ್.ಟಿ. ತೆರಿಗೆ ಹೊರೆಗಳಿಂದಾಗಿ ಉದ್ಯೋಗ ಸೃಷ್ಟಿಯಾಗದೆ ನಾಶವಾಗುತ್ತಿದೆ. ಇಂತಹ ಸ್ಥಿತಿಯಲ್ಲಿ ಉದ್ಯೋಗ ಖಾತ್ರಿ ಯೋಜನೆಯನ್ನು ನಗರಕ್ಕೂ ಮತ್ತು ಕೆಲಸದ ದಿನಗಳನ್ನು 200 ದಿವಸಗಳಿಗೂ ವಿಸ್ತರಿಸಿ ಕನಿಷ್ಠಕೂಲಿ 600 ರೂ ಒದಗಿಸುವಂತೆ ಬೇಕಾದ ಬಜೆಟ್ ಹಣವನ್ನು ಒದಗಿಸಬೇಕು.


ಸಮಾನ ಕನಿಷ್ಠ ವೇತನ ರಾಜ್ಯದ ಕಾರ್ಮಿಕರ ಪ್ರಧಾನ ಬೇಡಿಕೆ. ಅದನ್ನು ಜಾರಿಗೊಳಿಸದ ಯಾವುದೇ ಸರಕಾರ ತಾನು ಪ್ರಗತಿಪರ ಜನಪರ ಎಂದು ಕೊಚ್ಚಿಕೊಳ್ಳಲು ಸಾಧ್ಯವಿಲ್ಲ. 74 ವಿವಿಧ ಉದ್ಯೋಗಗಳಿಗೆ ಪ್ರತ್ಯೇಕ ಕನಿಷ್ಠ ವೇತನವನ್ನು ನಿಗದಿ ಪಡಿಸಿ ಕಾನೂನು ಹೋರಾಟಗಳಲ್ಲಾಗುವ ವಿಳಂಬದ ಬದಲು, ರಾಜ್ಯವ್ಯಾಪಿ ಸಮಾನ ಕನಿಷ್ಠ ವೇತನವನ್ನು ನಿಗದಿಪಡಿಸಬೇಕು. ಅಕುಶಲ ಕಾರ್ಮಿಕರಿಗೆ ರೂ. 18,000, ಅರೆ-ಕುಶಲ ಹಾಗೂ ಕುಶಲ ಕಾರ್ಮಿಕರಿಗೆ ಶೇ.15ರಷ್ಟು ಏರಿಕೆಯ ಆಧಾರದಲ್ಲಿ ಮಾಸಿಕ ಕನಿಷ್ಠ ವೇತನವನ್ನು ನಿಗದಿಗೊಳಿಸುವ ಒಕ್ಕೊರಲಿನ ಹಕ್ಕೊತ್ತಾಯದ ಜಾರಿ ರಾಜ್ಯದ ಕಾರ್ಮಿಕರ ಪ್ರಮುಖ ನಿರೀಕ್ಷೆ.

ರಾಜ್ಯದ ವಿವಿಧ ಇಲಾಖೆಗಳಲ್ಲಿ ನಿಗಮ ಮಂಡಳಿಗಳಲ್ಲಿ, ಖಾಸಗೀ ಕ್ಷೇತ್ರದ ಕೈಗಾರಿಕೆಗಳಲ್ಲಿ ಗುತ್ತಿಗೆ, ಹೊರಗುತ್ತಿಗೆ, ಅರೆಗುತ್ತಿಗೆ ಹೆಸರಿನಲ್ಲಿ ದುಡಿಯುತ್ತಿರುವ ಕಾರ್ಮಿಕರನ್ನು ಖಾಯಂಗೊಳಿಸಲು ಶಾಸನವನ್ನು ಅಂಗೀಕರಿಸಬೇಕು. ಸುಪ್ರೀಂ ಕೋರ್ಟ್‌ನ ತೀರ್ಪಿನ ಅನ್ವಯ ಎಲ್ಲಾ ಗುತ್ತಿಗೆ ಕಾರ್ಮಿಕರಿಗೆ/ನೌಕರರಿಗೆ ಖಾಯಂ ಕಾರ್ಮಿಕ/ನೌಕರರಿಗೆ ಕೊಡಮಾಡಲಾಗಿರುವ ತುಟ್ಟಿ ಭತ್ಯೆ ಮತ್ತು ವೇತನದೊಂದಿಗೆ ಎಲ್ಲಾ ಭತ್ಯೆಗಳ ಸಹಿತ, ಸಮಾನ ವೇತನವನ್ನು ಸಮಾನ ಕೆಲಸದಲ್ಲಿ ತೊಡಗಿರುವ ಕಾರ್ಮಿಕರಿಗೆ ನೀಡಲು ಕ್ರಮಕೈಗೊಳ್ಳಬೇಕು, ಎಂಬುದು ರಾಜ್ಯದ ಕಾರ್ಮಿಕರ ಇನ್ನೊಂದು ಪ್ರಮುಖ ನಿರೀಕ್ಷೆ.

ಕಾರ್ಮಿಕರ ಸಂಘಗಳ ಮಾನ್ಯತೆಗೆ ಶಾಸನ; ಸಾಮಾಜಿಕ ಭದ್ರತಾ ಮಂಡಳಿ ನಿಧಿಗೆ ಬಜೆಟ್ ಅನುದಾನ; ಅಸಂಘಟಿತ ಕಾರ್ಮಿಕರಿಗೆ ಭವಿಷ್ಯ ನಿಧಿ ಸ್ಥಾಪನೆ; ಅಂಗನವಾಡಿ, ಬಿಸಿಯೂಟ, ಆಶಾ ಮತ್ತಿತರೆ ಸ್ಕೀಂ ನೌಕರರಿಗೆ ಕನಿಷ್ಠ ವೇತನ ಹಾಗೂ ನೌಕರರಾಗಿ ಪರಿಗಣನೆ; ಗ್ರಾಮ ಪಂಚಾಯಿತಿ ನೌಕರರಿಗೆ ರಾಜ್ಯ ಸರ್ಕಾರದ ಅಧಿಸೂಚಿತ ಕನಿಷ್ಠ ವೇತನ ಜಾರಿಗೆ ಅಗತ್ಯ ಅನುದಾನ; 10 ಲಕ್ಷ ಬೀಡಿ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ಬಾಕಿ ಸಮೇತ ಮತ್ತು 2015ರಿಂದ ಬಾಕಿ ಇರುವ ತುಟ್ಟಿ ಪಾವತಿಗೆ ಕ್ರಮ ಮತ್ತು ಬದಲಿ ಜೀವನೋಪಾಯಕ್ಕೆ ಕ್ರಮಗಳು; ಕಟ್ಟಡ ಕಾರ್ಮಿಕರಿಗೆ ಎಲ್ಲಾ 12 ಸೌಲಭ್ಯಗಳನ್ನು ತ್ವರಿತ ರೀತಿಯಲ್ಲಿ ಫಲಾನುಭವಿಗಳಿಗೆ ತಲುಪಿಸಲು ಕ್ರಮಗಳು; ಜಿಲ್ಲೆಗೊಂದು ಕಾರ್ಮಿಕ ನ್ಯಾಯಾಲಯ ಹಾಗು ಕಾರ್ಮಿಕ ಇಲಾಖೆಗೆ ಅಗತ್ಯ ಸಿಬ್ಬಂದಿಗಳ ನೇಮಕ: ಕಾರ್ಮಿಕರ ಸಮಸ್ಯೆಗಳನ್ನು ಆಲಿಸಲು ಹಾಗೂ ಉದ್ಯೋಗ ಸೃಷ್ಠಿಗೆ ಪೂರಕವಾಗಿ ಕೆಲಸ ಮಾಡಲು ತ್ರಿಪಕ್ಷೀಯ ಯಂತ್ರದ ಭಾಗವಾಗಿ ಭಾರತೀಯ ಕಾರ್ಮಿಕ ಸಮ್ಮೇಳನದ ಮಾದರಿಯಲ್ಲಿ ಪ್ರತಿ ವರ್ಷ ಕರ್ನಾಟಕ ಕಾರ್ಮಿಕ ಸಮ್ಮೇಳನದ ಆಯೋಜನೆ – ಇವು ಕಾರ್ಮಿಕರ ಇತರ ನಿರೀಕ್ಷೆಗಳು.

ರಾಜ್ಯದ ಭವಿಷ್ಯ ರೂಪಿಸುವ ಶಿಕ್ಷಣ ಕ್ಷೇತ್ರದಲ್ಲಿ ಬಜೆಟ್ ನಿರೀಕ್ಷೆಗಳು ಹಲವು. ಸಿದ್ಧರಾಮಯ್ಯನವರ ಚುನಾವಣಾ-ಪೂರ್ವ ಬಜೆಟಿನಲ್ಲಿ ರಾಜ್ಯದ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಪಾಸ್ ಕೊಡುವ ಘೋಷಣೆ ಮಾಡಲಾಗಿತ್ತು. ಆದರೆ ಈ ಸರಳವಾದ ಹೆಚ್ಚಿನ ಸಂಪನ್ಮೂಲ ಬೇಡದ ಚುನಾವಣಾ ಭರವಸೆಯನ್ನು ಸಹ ಮೈತ್ರಿ ಸರಕಾರ ಜಾರಿ ಮಾಡಿಲ್ಲ ಎಂಬುದೇ ಶಿಕ್ಷಣದ ಬಗ್ಗೆ ಈ ಸರಕಾರದ ನಿರ್ಲಕ್ಷದ ಧೋರಣೆಯನ್ನು ತೋರಿಸುತ್ತದೆ. ಸಾಲದೆಂಬಂತೆ ಕಳೆದ ಬಜೆಟಿನಲ್ಲಿ ವಿಲೀನದ ಹೆಸರಲ್ಲಿ ಸುಮಾರು 29 ಸಾವಿರ ಸರಕಾರಿ ಶಾಲೆ ಮುಚ್ಚುವ ಬಗ್ಗೆ ಪ್ರಸ್ತಾವವಿತ್ತು. ಭಾರೀ ಪ್ರತಿಭಟನೆಯ ನಂತರ ಈ ಪ್ರಸ್ತಾವವನ್ನು ಹಿಂತೆಗೆದುಕೊಳ್ಳಲಾಯಿತು. ಮೂಲ ಸೌಕರ್ಯ, ಅಗತ್ಯ ಶಿಕ್ಷಕರ ನೇಮಕಾತಿ ಮುಂತಾದವುಗಳ ಮೂಲಕ ಉತ್ತಮ ಗುಣಮಟ್ಟದ ಸರಕಾರಿ ಶಾಲೆಗಳಿರುವ ಸಾರ್ವತ್ರಿಕ ಸಮಾನ ಶಾಲಾ ಶಿಕ್ಷಣದ ನೀತಿಯ ಜಾರಿ, ಶಿಕ್ಷಣ ಕ್ಷೇತ್ರದಲ್ಲಿ ಜನತೆಯ ಪ್ರಮುಖ ನಿರೀಕ್ಷೆ. ಆದರೆ ಆಳುವ ಪಕ್ಷಗಳಲ್ಲಿ ಪ್ರಬಲವಾಗಿರುವ ಖಾಸಗಿ ಶಿಕ್ಷಣ ಲಾಬಿ, ಇದರ ಬಗ್ಗೆ ಬಣ್ಣದ ಮಾತುಗಳನ್ನಾಡುತ್ತಾ ದುಬಾರಿ ಖಾಸಗಿ ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ಕುಮ್ಮಕ್ಕು ನೀಡುವ ನೀತಿಗಳನ್ನು ಪಾಲಿಸುತ್ತಾ, ಜನರೇ ಅದನ್ನು ಒತ್ತಾಯಿಸುವ ಪರಿಸ್ಥಿತಿ ನಿರ್ಮಿಸುತ್ತಾ ಬಂದಿದೆ. ಈ ವೈಫಲ್ಯದಿಂದ ಜನರ ಗಮನ ಬೇರೆಡೆಗೆ ಸೆಳೆಯಲು ಆಗಾಗ ಕೆಲವು ಗಿಮಿಕ್ ಗಳನ್ನು ಮಾಡುತ್ತದೆ. ಈ ಸರಕಾರದಿಂದ ಬಂದಿರುವ 'ಸಾವಿರ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ಶಾಲೆಗಳ ಪ್ರಯೋಗ'ದ ಪ್ರಸ್ತಾವ ಇಂತಹ ಒಂದು ಗಿಮಿಕ್. ಸಾರ್ವತ್ರಿಕ ಸಮಾನ ಶಾಲಾ ಶಿಕ್ಷಣದ ಜಾರಿ, ಖಾಸಗಿ ಇಂಗ್ಲಿಷ್ ಶಾಲೆಗಳ ಮೇಲೆ ಕಡಿವಾಣ ಹಾಕುವ ದಿಕ್ಕಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ನಿರ್ಣಯದಂತೆ ಪ್ರಾಥಮಿಕ ಶಿಕ್ಷಣದ ರಾಷ್ಟ್ರೀಕರಣದ ಜಾರಿ, ಅದಕ್ಕೆ ಅಗತ್ಯವಾದ ಬಜೆಟ್ ಸಂಪನ್ಮೂಲ ಹಾಗೂ ರಾಜಕೀಯ ಇಚ್ಛೆಯನ್ನು ಈ ಸರಕಾರ ತೋರಿಸಬೇಕು. ಇದಕ್ಕೆ ಶೇ. 30 ರಷ್ಟು ಬಜೆಟ್ ಬೆಂಬಲ ಅಗತ್ಯವಾಗುತ್ತದೆ.

ಲಿಂಗ ಸಂವೇದಿ ಮತ್ತು ಎಸ್.ಸಿ./ಎಸ್.ಟಿ. ಉಪಯೋಜನೆಗಳ ಪ್ರಾಮಾಣಿಕ ಜಾರಿ ಸಹ ರಾಜ್ಯದ ಜನರ ನಿರೀಕ್ಷೆ. ●



ಡಾ. ಶಿವಕುಮಾರ ಸ್ವಾಮೀಜಿ ಅಗಲಿಕೆಯಿಂದ ದುಃಖತಪ್ತರಾದ ಅವರ ಅಪಾರ ಶಿಷ್ಯ ಗಣ ಮತ್ತು ಭಕ್ತ ವೃಂದಕ್ಕೆ ಹಾಗೂ ಅಭಿಮಾನಿಗಳಿಗೆ ಸಿಪಿಐ(ಎಂ) ಸಂತಾಪ

ತುಮಕೂರಿನ ಸಿದ್ಧಗಂಗಾ ಮಠದ ಡಾ.ಶಿವಕುಮಾರ ಸ್ವಾಮಿಗಳು ತಮ್ಮ 111 ನೇ ವಯಸ್ಸಿನಲ್ಲಿ ನಿನ್ನೆ ದಿನ ನಿಧನರಾಗಿದ್ದಾರೆ.

ಅವರು ತಮ್ಮ ಸರಳ ಹಾಗೂ ಸಜ್ಜನಿಕೆಯ ಜೀವನದಿಂದ ಹೆಸರುವಾಸಿಯಾಗಿದ್ದಾರೆ. ಅದೇ ರೀತಿ, ರಾಜ್ಯಾದ್ಯಂತ ಆದಾಯ ಕಡಿಮೆ ಇರುವ ಲಕ್ಷಾಂತರ ಬಡಜನರ ಮಕ್ಕಳಿಗೆ ಉಚಿತ ಶಿಕ್ಷಣ ನೀಡುವ ವ್ಯವಸ್ಥೆ ಮಾಡಿದ್ದಾರೆ. ಆ ಮೂಲಕ ಅಕ್ಷರ ಹಾಗೂ ಅನ್ನ ದಾಸೋಹ ನಡೆಸಿ ತಮ್ಮ ಸಾರ್ವಜನಿಕ ಬದ್ಧತೆಯನ್ನು ಮೆರೆದಿದ್ದಾರೆ.


ಶ್ರೀಗಳು ಬಸವತತ್ವದ ಅನುಷ್ಠಾನಕ್ಕೆ ಕ್ರಮವಹಿಸಿದ್ದಾರೆ.

ಮಠದಲ್ಲಿ ಜಾತಿ ತಾರತಮ್ಯ ಲಿಂಗ ತಾರತಮ್ಯಕ್ಕೆ ಅವಕಾಶ ನೀಡದೇ ಸಾಮಾಜಿಕ ಸಾಮರಸ್ಯ ಮೆರೆದಿದ್ದಾರೆ.

ಇವರು ಅಪಾರ ಭಕ್ತರು, ಶಿಷ್ಯ ವೃಂದ ಮತ್ತು ಅಭಿಮಾನಿಗಳು ಮತ್ತು ಬಂಧು ಬಳಗವನ್ನು ಅಗಲಿದ್ದಾರೆ

ಅಗಲಿದ ಸ್ವಾಮಿಜಿಯವರ ದುಃಖತಪ್ತ ಭಕ್ತರು ಹಾಗೂ ಅವರ ಅಪಾರ ಶಿಷ್ಯ ವೃಂದಕ್ಕೆ, ಅಭಿಮಾನಿಗಳಿಗೆ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತದೆ. ●

ಸಹಕಾರಿ ಚಳುವಳಿಯಲ್ಲಿ ಎರಡು ಹೆಜ್ಜೆ ಮುಂದಕ್ಕೆ



ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕು ಕಮ್ಯುನಿಸ್ಟ್ ಚಳುವಳಿಯಲ್ಲಿ ಮಹತ್ವದ ಪಾತ್ರ ವಹಿಸಿದೆ. ಇದರ ಭಾಗವಾಗಿ ಸಹಕಾರಿ ರಂಗದಲ್ಲಿ ಪಕ್ಷದ ಸದಸ್ಯರು ಮತ್ತು ಮುಖಂಡರು ಸಕ್ರಿಯ ಪಾತ್ರ ವಹಿಸಿದ್ದಾರೆ. ರೈತರ ಭೂ ಸುಧಾರಣಾ ಚಳುವಳಿ ಮತ್ತು ಹಂಚು ಕಾರ್ಮಿಕರ ಸಮರ ಶೀಲ ಹೋರಾಟದಿಂದ ಬಸ್ರೂರು ವ್ಯವಸಾಯ ಸೇವಾ ಸಹಕಾರಿ ಸಂಘದಲ್ಲಿ (vsss) ಸಿಪಿಐ(ಎಂ) ಪಕ್ಷದ ಸದಸ್ಯರು ಆಡಳಿತ ನಡೆಸುತ್ತಿದ್ದರು. ಈಗಲೂ ಪಕ್ಷದ ಸ್ಥಳೀಯ ಮುಖಂಡರಾದ ಗೋಪಾಲ ಶೆಟ್ಟಿಗಾರ್ ನಿರ್ದೇಶಕರಾಗಿದ್ದಾರೆ.

ಪಡುಕೋಣೆ ವಿ.ಎಸ್.ಎಸ್.ನಲ್ಲಿ ಮಹತ್ತರ ಹೆಜ್ಜೆ: ಪಡುಕೋಣೆ vsss ರಚನೆ 2001ರಂದು ಆಗಿದ್ದು, ಪ್ರಾರಂಭದಿಂದಲೂ ರಾಜೀವ ಪಡುಕೋಣೆ ನಿರ್ದೇಶಕರಾಗಿದ್ದರು. ಅವರು ಪಕ್ಷದ ಜಿಲ್ಲಾ ಸಮಿತಿ ಸದಸ್ಯರು ಮತ್ತು ಕಟ್ಟಡ ಕಾರ್ಮಿಕ ಸಂಘದ ಮುಖಂಡರು ಆಗಿದ್ದಾರೆ. 3 ವರ್ಷಕ್ಕೊಮ್ಮೆ ನಡೆಯುವ ಚುನಾವಣೆಯಲ್ಲಿ ಹಂತ ಹಂತವಾಗಿ vsss ನಲ್ಲಿ ಸಿಪಿಐಎಂ ಪರವಾಗಿರುವ ನಿರ್ದೇಶಕರ ಸಂಖ್ಯೆ ಜಾಸ್ತಿಯಾಗುತ್ತಾ ಬಂದಿದ್ದು ಈಗ ಬಹುಮತದ ಸ್ಥಾನ ಗಳಿಸಿದೆ. ಒಟ್ಟು 13 ಸ್ಥಾನಗಳಿದ್ದು ಸಿಪಿಐಎಂ 7ಸ್ಥಾನ ಗಳಿಸಿದೆ.

ಲಾಭ 8 ಲಕ್ಷ ದಿಂದ 38 ಲಕ್ಷಕ್ಕೆ:

ಕಳೆದ ಅವಧಿಯಲ್ಲಿ 5 ಸ್ಥಾನ ಗಳಿಸಿದ್ದ ಸಿಪಿಐ(ಎಂ) ಅಭ್ಯರ್ಥಿಗಳು ಈ ಬಾರಿ 7 ಸ್ಥಾನ ಗಳಿಸಿದ್ದಾರೆ. ಹಿಂದಿನ ಅವಧಿಯಲ್ಲಿ ಆಯ್ಕೆಯಾದ ನಿರ್ದೇಶಕರ ನಡುವಿನ ಒಪ್ಪಂದದ ಪ್ರಕಾರ ಕೊನೆಯ 22 ತಿಂಗಳ ಅವಧಿಗೆ ಅಧ್ಯಕ್ಷರಾಗಿದ್ದ ರಾಜೀವ ಪಡುಕೋಣೆಯವರ ನೇತೃತ್ವದಲ್ಲಿ ಸಾಲ ವಸೂಲಾತಿಗೆ ಗಮನ ನೀಡಿ ಲಾಭವನ್ನು 8 ಲಕ್ಷ ರೂಪಾಯಿಯಿಂದ 38 ಲಕ್ಷ ರೂಪಾಯಿಗೆ ಹೆಚ್ಚಿಸಲಾಗಿದೆ. ಸ್ಥಳೀಯ ಬಿಜೆಪಿ ಮುಖಂಡರೊಬ್ಬರು ಹಲವು ವರ್ಷಗಳಿಂದ ಬಾಕಿ ಇರಿಸಿಕೊಂಡಿದ್ದ ಸಾಲವನ್ನು ಯಾವುದೇ ಮುಲಾಜಿಲ್ಲದೆ ವಸೂಲಿ ಮಾಡಲಾಯಿತು. ಇದು ಜನರ ಪ್ರಶಂಸೆಗೆ ಕಾರಣವಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಸಹಕಾರಿ ರಂಗದಲ್ಲಿ ಮಧ್ಯಪ್ರವೇಶ ಮಾಡುವುದರ ಮೂಲಕ ಸ್ಥಳೀಯ ಪಟ್ಟಭದ್ರ ಹಿತಾಸಕ್ತಿಗಳನ್ನೂ ಹದ್ದುಬಸ್ತಿನಲ್ಲಿ ಇಡುವುದು ಸಾಧ್ಯವಿದೆ ಹಾಗೂ ಪಕ್ಷದ ಪ್ರಭಾವವನ್ನು ಹೆಚ್ಚಿಸಲು ಸಾಧ್ಯವಿದೆ.

7 ನಿರ್ದೇಶಕರಲ್ಲಿ 6 ಮಂದಿ ಪಕ್ಷದ ಸದಸ್ಯರಾಗಿದ್ದು ಒಬ್ಬರು ಹಿತೈಷಿ ಆಗಿದ್ದಾರೆ. ರಾಜೀವ ಪಡುಕೋಣೆ ಮತ್ತು ನಾಗರತ್ನ ನಾಡ ಜಿಲ್ಲಾ ಸಮಿತಿ ಸದಸ್ಯರಾಗಿದ್ದು ನಾಗರತ್ನ ಸ್ಥಳೀಯ ಗ್ರಾಮ ಪಂ. ಸದಸ್ಯರು ಆಗಿದ್ದಾರೆ. ಇನ್ನುಳಿದ ನಿರ್ದೇಶಕರ ಹೆಸರು ಈ ಕೆಳಗಿನಂತಿವೆ:

ರಾಜೀವ ಭಂಡಾರಿ – ಹಿರಿಯ ಸದಸ್ಯರು; ರಾಜೇಶ್ ಪಡುಕೋಣೆ – ಗ್ರಾ.ಪಂ. ಸದಸ್ಯರು

ಫಿಲಿಪ್ ಡಿಸಿಲ್ವಾ – ನಿವೃತ್ತ ಬ್ಯಾಂಕ್ ಅಧಿಕಾರಿ ಹಾಗೂ ಮಾಜಿ ಗ್ರಾಮ ಪಂ. ಸದಸ್ಯರು

ಸುಬ್ರಮಣ್ಯ ಪಡುಕೋಣೆ – ಜನಪ್ರತಿನಿಧಿ ವಾರ ಪತ್ರಿಕೆ ಸಂಪಾದಕರು; ಗಣೇಶ ಪೂಜಾರಿ – ಕಟ್ಟಡ ಕಾರ್ಮಿಕ ಸಂಘದ ಮುಖಂಡರು

ಒಟ್ಟಾರೆಯಾಗಿ ಪಡುಕೋಣೆ ವ್ಯವಸಾಯ ಸೇವಾ ಸಹಕಾರಿ ಸಂಘಕ್ಕೆ ಆಯ್ಕೆಯಾದ ಎಲ್ಲಾ ಸದಸ್ಯರನ್ನು ಉಡುಪಿ ಜಿಲ್ಲಾ ಸಮಿತಿ ಅಭಿನಂದಿಸಿದೆ. ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸುತ್ತಾರೆ ಎಂಬ ಭರವಸೆ ಹೊಂದಿದೆ.

ಇತರೆ ಸಹಕಾರಿ ಸಂಸ್ಥೆಗಳಲ್ಲಿ ಪಕ್ಷದ ಪಾತ್ರ:

ಉಡುಪಿ ಜಿಲ್ಲಾ ಹಂಚು ಕಾರ್ಮಿಕ ಸಹಕಾರಿ ಸಂಘ ಕಾರ್ಯ ನಿರ್ವಹಿಸುತ್ತಿದೆ. ವರ್ಷಕ್ಕೆ 10 ಕೋಟಿ ರೂಪಾಯಿಗೂ ಅಧಿಕ ವ್ಯವಹಾರ ನಡೆಸುತ್ತಿದ್ದು ಹಂಚು ಕಾರ್ಮಿಕರಿಗೆ ಮಾತ್ರವಲ್ಲದೆ ಇತರೆ ಜನ ವಿಭಾಗಕ್ಕೂ ಸಾಲ ಸೌಲಭ್ಯ ಸಿಗುತ್ತಿದೆ. ಇದರಲ್ಲಿರುವ ಎಲ್ಲಾ 9 ನಿರ್ದೇಶಕರು ಹಂಚು ಕಾರ್ಮಿಕರು ಹಾಗೂ ಪಕ್ಷದ ಸದಸ್ಯರು. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾ. ನರಸಿಂಹ ಅಧ್ಯಕ್ಷರಾಗಿದ್ದಾರೆ.

ಕಾಲಾವರ ಹಾಲು ಉತ್ಪಾದಕರ ಸಹಕಾರಿ ಸಂಘದ ಅಧ್ಯಕ್ಷರಾಗಿ ಪಕ್ಷದ ಹಿರಿಯ ಮುಖಂಡ ರಾಮಚಂದ್ರ ನಾವಡ ಅಧ್ಯಕ್ಷರಾದ ನಂತರ ನಷ್ಟದಲ್ಲಿರುವ ಸಂಘವನ್ನು ಲಾಭಕ್ಕೆ ತರಲು ಸಾಧ್ಯವಾಗಿರುವುದು ಮಾತ್ರವಲ್ಲದೆ ಸದಸ್ಯರಿಗೆ ಬೋನಸ್, ಉಡುಗೊರೆ ನೀಡಲು ಸಾಧ್ಯವಾಗಿದೆ.

ಬಸ್ರೂರು vsss ನಲ್ಲಿ ನಿರ್ದೇಶಕರಾಗಿರುವ ಇನ್ನೋರ್ವ ಹಿರಿಯ ಮುಖಂಡ ಗೋಪಾಲ ಶೆಟ್ಟಿಗರ್ ಅಲ್ಲಿನ ಹಾಲು ಉತ್ಪಾದಕರ ಸಹಕಾರಿ ಸಂಘದ ಅಧ್ಯಕ್ಷರು ಆಗಿದ್ದಾರೆ.

– ಬಾಲಕೃಷ್ಣ ಶೆಟ್ಟಿ

ಯಶಸ್ವಿ 8ನೇ ಅಂಗನವಾಡಿ ಉ.ಕ. ಜಿಲ್ಲಾ ಸಮ್ಮೇಳನ





ಅಂಗನವಾಡಿ ನೌಕರರ 8 ನೇ ಉತ್ತರ ಕನ್ನಡ ಜಿಲ್ಲಾ ಸಮ್ಮೇಳನವು ಭಟ್ಕಳದಲ್ಲಿ ಅತ್ಯಂತ ಯಶಸ್ವಿಯಾಗಿ ಜರುಗಿತು. ಅದಕ್ಕಿಂತ ಮೊದಲು ಸ್ಫೂರ್ತಿದಾಯಕ ಮೆರವಣಿಗೆ ನಡೆಸಲಾಯಿತು.

ಸಮ್ಮೇಳನದಲ್ಲಿ ಅಧ್ಯಕ್ಷರಾಗಿ ಯಮುನಾ ಗಾಂವ್ಕರ್, ಪ್ರಧಾನ ಕಾರ್ಯದರ್ಶಿಯಾಗಿ ಜಯಶ್ರೀ ಹೀರೇಕರ್ ಹಳಿಯಾಳ, ಖಜಾಂಚಿಯಾಗಿ ಗೀತಾ ನಾಯ್ಕ ಹೊನ್ನಾವರ, ಸಂಘಟನಾ ಕಾರ್ಯದರ್ಶಿಯಾಗಿ ವಿದ್ಯಾ ವೈದ್ಯ, ಏಳು ಉಪಾಧ್ಯಕ್ಷರುಗಳು ಏಳು ಸಹಕಾರ್ಯದರ್ಶಿಗಳಾಗಿ ಇರುವ ನೂತನ ಸಮಿತಿ ಆಯ್ಕೆಯಾಗಿದೆ.

ಸಮ್ಮೇಳನದಲ್ಲಿ ಈ ಕೆಳಗಿನ ಆರು ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು:

1. ಅಂಗನವಾಡಿ ನೌಕರರು ಉಕ ಜಿಲ್ಲೆಯಲ್ಲಿ ಸ್ಥಳೀಯವಾಗಿ ಎದುರಿಸುತ್ತಿರುವ ಹಲವಾರು ಸಮಸ್ಯೆಗಳನ್ನು ಎಲ್ಲಾ ಪ್ರತಿನಿಧಿಗಳು ಸುದೀರ್ಘವಾಗಿ ಚರ್ಚಿಸಿ ಇವುಗಳ ವಿರುದ್ಧ ಜನವರಿ 25 ರಂದು ಎಲ್ಲಾ ತಾಲೂಕುಗಳಲ್ಲಿ ಪ್ರತಿಭಟನಾ ಮನವಿ ಸಲ್ಲಿಕೆಗೆ ತೀರ್ಮಾನ.
2. ಅಂಗನವಾಡಿಗಳನ್ನು ಕಾರ್ಪೋರೇಟ್ ಕಂಪನಿಗಳಿಗೆ ಅಥವಾ ಖಾಸಗಿಗೆ ಮತ್ತು ಧಾರ್ಮಿಕ ಕೇಂದ್ರಗಳಿಗೆ ಅಥವಾ ಮಠಗಳ ವಶಕ್ಕೆ ವಹಿಸಲು ವಿರೋಧಿಸಿ.
3. ಅಂಗನವಾಡಿ ನೌಕರರಿಗೆ ಕೊಡಮಾಡುವ ಸಮವಸ್ತ್ರವನ್ನು ಗುಣಮಟ್ಟ ಕಾಯ್ದುಕೊಂಡು ನೀಡಲು, ಸಮವಸ್ತ್ರಕ್ಕೆ ವಾರದ ಒಂದು ಕೆಲಸದ ದಿನದಂದು, ವಲಯ ಹಾಗೂ ಗೌರವಧನ ಸಭೆಗೆ ವಿನಾಯಿತಿಗೆ ಆಗ್ರಹಿಸಿ.
4. ಬಡ ನಿವೇಶನ ಮನೆ ರಹಿತ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಸರ್ಕಾರದಿಂದ ಕೊಡಮಾಡುವ ಮನೆಗಳನ್ನು ಮಂಜೂರು ಮಾಡಲು ಆಗ್ರಹಿಸಿ.
5. ಹಕ್ಕಿನ ಅರ್ಧದಿನದ ವಾರದ ಬಿಡುವಿನಲ್ಲಿ ಅಂದರೆ ಮೂರನೇ ಶನಿವಾರದಂದು ಸಾಯಂಕಾಲವೂ ಕೆಲಸ ನಿರ್ವಹಿಸಬೇಕೆಂಬ ಇಲಾಖೆಯ ಸುತ್ತೋಲೆಯನ್ನು ವಿರೋಧಿಸಿ.
6. ಅಂಗನವಾಡಿ ನೌಕರರನ್ನೂ ಒಳಗೊಂಡು ಎಲ್ಲಾ ದುಡಿಯುವ ಮಹಿಳೆಯರ ಬೇಡಿಕೆಗಳಿಗೆ ಆಗ್ರಹಿಸಿ.

– ಯಮುನಾ ಗಾಂವ್ಕರ್

ಕಾರವಾರ ನೌಕಾ ನೆಲೆಯ ಸಿವಿಲಿಯನ್ ನೌಕರರ ಮುಷ್ಕರಕ್ಕೆ ಸಿ.ಐ.ಟಿ.ಯು., ರೈತ ಸಂಘ ಬೆಂಬಲ

ರಕ್ಷಣಾ ವಲಯದಲ್ಲಿ ಖಾಸಗೀಕರಣ ಜಾರಿಗೊಳಿಸುತ್ತಿರುವ ಕೇಂದ್ರ ಸರಕಾರದ ನೀತಿ ವಿರುದ್ಧ ರಕ್ಷಣಾ ವಲಯದ ಸಿವಿಲಿಯನ್ ನೌಕರರು ನಡೆಸುತ್ತಿರುವ 3 ದಿನದ ಮುಷ್ಕರಕ್ಕೆ ಸಿ.ಐ.ಟಿ.ಯು. ಮತ್ತು ಕರ್ನಾಟಕ ಪ್ರಾಂತ ರೈತ ಸಂಘದ ಉತ್ತರ ಕನ್ನಡ ಜಿಲ್ಲಾ ಸಮಿತಿಗಳು ಬೆಂಬಲ ವ್ಯಕ್ತಪಡಿಸಿವೆ. ಕಾರವಾರದ ನೌಕಾ ನೆಲೆಯ ಗೇಟ್ ಮುಂದೆ ಈ ಪ್ರತಿಭಟನೆ ಜನವರಿ 25ರಂದು ನಡೆಯಿತು.

ಈ ಸಂಘಟನೆಗಳ ಪರವಾಗಿ ಮುಷ್ಕರದಲ್ಲಿ ಭಾಗವಹಿಸಿ ಜಿಲ್ಲಾ ಮುಖಂಡರಾದ ಶಾಂತಾರಾಮ ನಾಯಕ ಮಾತನಾಡಿ, ಕೇಂದ್ರ ಸರಕಾರ ಹೇಳುವದು ದೇಶಪ್ರೇಮ, ಮಾಡುವುದು ದೇಶ ವಿರೋಧಿ ಕೆಲಸ. ಅತಿಮುಖ್ಯ ರಕ್ಷಣಾ ವಲಯಕ್ಕೆ ಬೇಕಾದ ಸರಕು ಸರಂಜಾಮುಗಳನ್ನು ದೇಶೀಯ ಮತ್ತು ಬಹುರಾಷ್ಟ್ರೀಯ ಖಾಸಗಿ ಕಂಪನಿಗಳಿಗೆ ಉತ್ಪಾದಿಸಲು ಆದೇಶ ನೀಡುತ್ತಿರುವುದು ದೇಶ ವಿರೋಧಿ ಕೆಲಸ. ಇದರಿಂದ ದೇಶದ ರಕ್ಷಣಾ ಗುಟ್ಟುಗಳು ಸೋರಿಕೆಯಾಗುವುದಷ್ಟೇ ಅಲ್ಲ ಬೇರೆ ದೇಶಗಳ ಆಯುಧಗಳ ಮೇಲೆ ಅವಲಂಬನೆ ಯಾವಗತ್ತಿಗೂ ಆಪತ್ಕಾರಿಯಾದುದು. ಸರಕಾರ ಈ ಆದೇಶವನ್ನು ವಾಪಸ್ ಪಡೆಯಬೇಕೆಂದು ಒತ್ತಾಯಿಸಿದರು. ಅಲ್ಲದೆ ಎನ್.ಪಿ.ಎಸ್. ಬದಲು ಓ.ಪಿ.ಎಸ್. ಫೆನ್‌ಶನ್ ಜಾರಿಯಾಗಬೇಕು. ನೌಕಾನೆಲೆಗಾಗಿ ತ್ಯಾಗ ಮಾಡಿದ ಕುಟುಂಬಗಳಿಗೆ, ಸ್ಥಳೀಯರಿಗೆ ಉದ್ಯೋಗ ನೀಡಬೇಕು. ನೇಮಕಾತಿಯನ್ನು ಕಾರವಾರದಲ್ಲೇ ನಡೆಸಬೇಕು. ನಗದು ರಹಿತ ಮೆಡಿಕಲ್ ಸ್ಪೆಷಲಿಟಿ ಸಿವಿಲ್ ನೌಕರರಿಗೂ ಸಿಗಬೇಕು ಮತ್ತು ಉದ್ಯೋಗದ ಭದ್ರತೆ ಒದಗಿಸಬೇಕೆಂದು ಒತ್ತಾಯಿಸಿದರು.

ಎಸ್.ಎಫ್.ಐ. ಮುಖಂಡ ಗಣೇಶ ರಾಠೋಡ ಹೋರಾಟಕ್ಕೆ ಬೆಂಬಲಿಸಿ ಮಾತನಾಡಿದರು. 3 ದಿನಗಳ ಹೋರಾಟವನ್ನು ಜಂಟಿಯಾಗಿ ಎ.ಐ.ಡಿ.ಇ.ಎಫ್., ಐ.ಎನ್.ಡಿ.ಡಬ್ಲ್ಯೂ.ಎಫ್. ಮತ್ತು ಬಿ.ಪಿ.ಎಂ.ಎಸ್. ಯೂನಿಯನ್‌ಗಳು ಸಂಘಟಿಸಿವೆ. ಸಂಘಟನೆಗಳ ಮುಖಂಡರಾದ ಮಂಜು ಡಿ. ಅಂಕೋಲೆಕರ, ಚಂದ್ರಕಾಂತ ಹರಿಕಂತ್ರ, ಅನಿಷ್, ಜಗದೀಶ ಓಲೆಕಾರ, ರವಿ ಅವರ್ಸೇಕರ, ಗಿರಿಧರ ಸಾಳಸ್ಕರ, ಸುಬ್ರಹ್ಮಣ್ಯ ಭಟ್ಟ, ಚಂದ್ರಶೇಖರ ವೇಲು ಮುಂತಾದ ಸಾವಿರಾರು ಜನ ಪ್ರತಿಭಟನೆಯಲ್ಲಿ ಸೇರಿದ್ದರು.

– ಶಾಂತಾರಾಂ ನಾಯಕ್



ಬಜೆಟ್ ನಲ್ಲಿ ಸಹಕಾರಿ ಕೃಷಿಗೆ ಆದ್ಯತೆ ನೀಡಲು ರೈತಸಂಘ ಮನವಿ

ಜಾಗತೀಕರಣದ ನೀತಿಗಳನ್ನು ಜಾರಿಗೆ ತರುವ ಭಾಗವಾಗಿ, ಕೇಂದ್ರ ಸರಕಾರ, ರಾಜ್ಯ ಸರಕಾರಗಳ ಮೇಲೆ ಬಹುರಾಷ್ಟ್ರೀಯ ಸಂಸ್ಥೆಗಳ ಪರವಾದ ಕಂಪನಿ ಕೃಷಿಗೆ ಆದ್ಯತೆಯ ನೀತಿ ಅನುಸರಿಸಲು ಒತ್ತಾಯಿಸುತ್ತಿದೆ.

ಅದಾಗಲೇ ಈ ದಿಕ್ಕಿನಲ್ಲಿ ಕಳೆದ 25–30 ವರ್ಷಗಳ ಹಿಂದಿನಿಂದಲೇ ಕರ್ನಾಟಕ ಸರಕಾರ ಈ ಹಾದಿ ಹಿಡಿದಿರುವುದು ವಿಷಾಧನೀಚುವಾಗಿದೆ. ಇದರ ಭಾಗವಾಗಿ ರಾಜ್ಯದಲ್ಲಿ ಕೃಷಿ ಮತ್ತು ಕೃಷಿಕರು ಬಿಕ್ಕಟ್ಟನ್ನು ಎದುರಿಸುತ್ತಿದ್ದಾರೆ. ರಾಜ್ಯ ಸರಕಾರ ಸಾಲ ಮನ್ನಾ ಘೋಷಿಸಿದಾಗಲೂ ರೈತರ ಆತ್ಮಹತ್ಯೆಗಳು ಬೆಳೆಯುತ್ತಲೇ ಇವೆ. ಬಡವರ ಹಸಿವಿನ ಸಾವುಗಳು ಮುಂದುವರೆದಿವೆ. ಪರಿಸ್ಥಿತಿ ಹೀಗಿರುವಾಗಲೇ ಇದೀಗ ಕಂಪನಿ ಕೃಷಿಗೆ ಅನುಕೂಲವಾಗುವ ನೀತಿಗಳನ್ನು ಮುಂದೆ ತರಲಾಗುತ್ತಿದೆ. ಕೃಷಿ ಮಾರುಕಟ್ಟೆಯನ್ನು ಆನ್ ಲೈನ್ ಗೊಳಪಡಿಸಿ ಅಚಿತರರಾಷ್ಟ್ರೀಯ ಮಾರುಕಟ್ಟೆಗೆ ಜೋಡಿಸಲಾಗುತ್ತದೆ. ಅದೇರೀತಿ ಅತಿ ಹೆಚ್ಚು ಬಂಡವಾಳ ಬೇಡುವ ಜಲಕೃಷಿ ಅಥವಾ ಹೈಡ್ರೋಫೋನಿಕ್ಸ್ ತಂತ್ರಜ್ಞಾನ ಆಧಾರಿತ ಕೃಷಿ ಮತ್ತು ಇಸ್ರೇಲ್ ಮಾದರಿಯ ತಂತ್ರಜ್ಞಾನ ಕೃಷಿ ಹಾಗೂ ➡

ರಾಷ್ಟ್ರೀಯ ಸಮಾನ ಕನಿಷ್ಠ ಕೂಲಿ, ಪರ್ಯಾಯ ಉದ್ಯೋಗ ಮತ್ತು ಪರಿಹಾರ ಕಾರ್ಮಿಕ ಕಾನೂನುಗಳ ಜಾರಿಗೆ ಬೀಡಿ ಫೆಡರೇಷನ್ ಆಗ್ರಹ

ಫೆಬ್ರವರಿ ತಿಂಗಳಲ್ಲಿ ರಾಷ್ಟ್ರದ್ಯಂತ ಪ್ರತಿಭಟನೆಗೆ ಕರೆ



ರಾಷ್ಟ್ರಮಟ್ಟದಲ್ಲಿ ಸಮಾನ ಕನಿಷ್ಠ ಕೂಲಿ ಒಂದು ಸಾವಿರ ಬೀಡಿಗೆ 350 ರೂ ಬೇಲೆ ಏರಿಕೆ ಸೂಚ್ಯಂಕವನ್ನು ಅಧಾರಿಸಿ ಅಂಕ ಒಂದಕ್ಕೆ 5 ಪೈಸೆಯನ್ನು ನಿಗದಿಪಡಿಸಲು ಹಾಗೂ ಧೂಮಪಾನ ನಿಷೇಧ ಕಾಯ್ದಿಯಿಂದ ಕೆಲಸ ಕಳೆದುಕೊಳ್ಳುತ್ತಿರುವ ಲಕ್ಷಾಂತರ ಬೀಡಿ ಕಾರ್ಮಿಕರಿಗೆ ಪರ್ಯಾಯ ಉದ್ಯೋಗ ಮತ್ತು ಪರಿಹಾರವನ್ನು ನೀಡಬೇಕು. ಕಾರ್ಮಿಕ ಕಾನೂನುಗಳ ಅನ್ವಯ ಎಲ್ಲಾ ಬೀಡಿ ಕಾರ್ಮಿಕರಿಗೆ ಲಾಗ್ ಪುಸ್ತಕ, ಗುರುತಿನ ಚೀಟಿ, ಭವಿಷ್ಯನಿಧಿಗೆ ಒಳಗಪಡಿಸುವುದು, ಬೋನಸ್ ಜಾರಿಗೊಳಿಸುವ ಮೂಲಕ ಕಾರ್ಮಿಕ ಕಾಯ್ದೆಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಅಖಿಲ ಭಾರತ ಬಿಡಿ ಕಾರ್ಮಿಕರ ಫೆಡರೇಷನ್ ಆಗ್ರಹಿಸಿದೆ.

ಬೆಂಗಳೂರಿನಲ್ಲಿಂದು ಸಂಪಂಗಿ ರಾಮನಗರದ ಬಳಿ ಇರುವ ಸೌಹಾರ್ದ ಸಭಾಂಗಣದಲ್ಲಿ ನಡೆದ ಅಖಿಲ ಭಾರತ ಬೀಡಿ ಕಾರ್ಮಿಕರ ಫೆಡರೇಷನ್ ಸಿಐಟಿಯು ರಾಷ್ಟ್ರೀಯ ಕಾರ್ಯಕಾರಣಿ ಸಭೆಯಲ್ಲಿ ಮೇಲ್ಕಂಡ ನಿರ್ಣಯವನ್ನು ಕೈಗೊಳ್ಳಲಾಯಿತು.

ಸಭೆಯು ಬೀಡಿ ಕಾರ್ಮಿಕರಿಗೆ ಬದುಕಲು ಇರುವ ಹಕ್ಕನ್ನು ಸರ್ಕಾರ ಸಂರಕ್ಷಿಸಬೇಕು. ಅವರಿಗೆ ಆರು ದಿನದ ಉದ್ಯೋಗ ದೊರೆಯದೆ ಸಂಕಷ್ಟದಲ್ಲಿದ್ದು, ಕೇಂದ್ರ ಸರ್ಕಾರ ಬೀಡಿ ಕಾರ್ಮಿಕರ ಕಲ್ಯಾಣ ನಿಧಿ ವತಿಯಿಂದ ಮಾಸಿಕ ಕನಿಷ್ಠ 3 ಸಾವಿರ ರೂಪಾಯಿ ಪಿಂಚಣಿಯನ್ನು ಹಾಗೂ ಸೂಕ್ತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ನಿರ್ದಿಷ್ಠ ಕಾರ್ಯ ಯೋಜನೆ ರೂಪಿಸುವಂತೆ ಆಗ್ರಹಿಸಲಾಯಿತು.

ಬಹುತೇಕ ಬೀಡಿ ಕಾರ್ಮಿಕರು ಅನಕ್ಷರಸ್ಥರು ಮತ್ತು ಅಸಂಘಟಿತರು ಆಗಿರುವ ಕಾರಣ ಅವರಲ್ಲಿ ಕಾನೂನು ಪ್ರಜ್ಞೆಯ ಅಭಾವವನ್ನು ಬಳಸಿಕೊಂಡು ತೀವ್ರವಾದ ಶೋಷಣೆ ನಡೆಸಲಾಗುತ್ತಿದೆ. ಹಾಗಾಗಿ ದೇಶದಲ್ಲಿರುವ ಕಾರ್ಮಿಕ ಕಾನೂನುಗಳಾದ ಕನಿಷ್ಠ ವೇತನ ಕಾಯ್ದೆ, ಪಿಎಫ್ ಕಾಯ್ದೆ, ಮತ್ತಿತರ ಕಾಯ್ದೆಗಳ ಅನ್ವಯ ಸಿಗಬೇಕಾದ ಸೌಲಭ್ಯಗಳ ಸಂಬಂಧ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಟ್ಟುನಿಟ್ಟಿನ ಕ್ರಮಗಳನ್ನು ಹಾಗೂ ಯೋಜನೆಗಳನ್ನು ರೂಪಿಸಲು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಲಾಯಿತು.

ಸಭೆಯಲ್ಲಿ ಸಿಐಟಿಯು ಹಿರಿಯ ಉಪಾಧ್ಯಕ್ಷ ಮತ್ತು ಪಿಎಫ್ ಸೆಂಟ್ರಲ್ ಬೋರ್ಡ್ ಆಫ್ ಟ್ರಸ್ಟೀಸ್ ಸದಸ್ಯರಾದ ಎ.ಕೆ.ಪದ್ಮನಾಭನ್ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ದಶಕಗಳ ಹೋರಾಟದಿಂದ ಪಡೆದ ಕಾರ್ಮಿಕ ಕಾನೂನುಗಳನ್ನು ಕೇಂದ್ರ ಕಾರ್ಮಿಕ ಸಂಘಟನೆಗಳ ಎಲ್ಲಾ ಸಲಹೆಗಳನ್ನು ಸಾರಾಸಗಟಾಗಿ ತಿರಸ್ಕರಿಸಿ ಕಾರ್ಮಿಕ ಕಾನೂನುಗಳಿಗೆ ತರುತ್ತಿರುವ ಬದಲಾವಣೆಗಳು ಯಾರ ಲಾಭಕ್ಕೆ ಎಂದು ಪ್ರಶ್ನಿಸಿದರು. ಬಂಡವಾಳಶಾಹಿ ಸಮಾಜವು ದುಡಿಯುವ ಜನರಿಗೆ ಸಾಮಾಜಿಕ ಸುರಕ್ಷತೆ, ಉದ್ಯೋಗ ಭದ್ರತೆ, ಕನಿಷ್ಠ ವೇತನವನ್ನು ಕಸಿಯುತ್ತಿದೆ ಎಂದು ಆಪಾದಿಸಿದರು.

ಆನ್ ಲೈನ್ ಬೇಡ

ಡಿಜಿಟಲ್ ಇಂಡಿಯಾ ಹೆಸರಲ್ಲಿ ಎಲ್ಲಾ ಅರ್ಜಿಗಳನ್ನು ಆನ್–ಲೈನ್ ಗೊಳಿಸಿರುವ ಕಾರಣ ಬಡ ಬೀಡಿ ಕಾರ್ಮಿಕರು ವಿಧ್ಯಾರ್ಥಿ ವೇತನ, ಪಿ.ಎಫ್.ಗಳಿಗೆ ಅರ್ಜಿ ಸಲ್ಲಿಸಲು ತ್ರೀವ್ರ ತೊಂದರೆಯಾಗುತ್ತಿದೆ. ಹಾಗಾಗಿ ತಮ್ಮ ಶ್ರಮದ ಪಾಲನ್ನು ಬೀಡಿ ಕಾರ್ಮಿಕರು ಪಡೆಯಲಾಗುತ್ತಿಲ್ಲ. ಬೀಡಿ ಕಾರ್ಮಿಕರಿಗೆ ಇದರಿಂದ ವಿನಾಯ್ತಿ ನೀಡಲು ಒತ್ತಾಯಿಲಾಯಿತು. ಬೀಡಿ ಕಾರ್ಮಿಕರ ಹೆಸರು, ಅವಲಂಬಿತರು, ಕುಟುಂಬ ವರ್ಗದವರ ಹೆಸರು ಹಾಗು ಜನ್ಮದಿನದ ವ್ಯತ್ಯಾಸಗಳನ್ನು ಸರಿ ಪಡಿಸಲು ಇಲಾಖೆ ಸರಳ ಕ್ರಮಗಳನ್ನು ರೂಪಿಸುವಂತೆ ಒತ್ತಾಯಿಸಲಾಯಿತು.

ಕೇಂದ್ರ ಸರ್ಕಾರದ ಜಿಎಸ್‌ಟಿ ಜಾರಿಯಿಂದಾಗಿ ಬೀಡಿ ಕಾರ್ಮಿಕರ ಕಲ್ಯಾಣ ನಿಧಿಗೆ ಆದಾಯ ಮೂಲ ಇಲ್ಲದಂತಾಗಿದೆ. ಸರ್ಕಾರ ತನ್ನ ಬಜೆಟ್ ಅನುದಾನದಲ್ಲಿ ಹಣ ಮೀಸಲಿರುಸುವಂತೆ ಆಗ್ರಹಿಸಿದರು.

ಸಭೆಯಲ್ಲಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ದೇಬಶಿಶ್ ರಾಯ್, ಬೀಡಿ ಕಾರ್ಮಿಕರ ಪರಿಸ್ಥಿತಿ ಮತ್ತು ಮುಂದಿನ ಕಾರ್ಯ ಯೋಜನೆಯ ವರದಿ ಮಂಡಿಸಿದರು. ಸಭೆಯು ದೇಶದ ಎಲ್ಲಾ ಬೀಡಿ ಉತ್ಪಾಧನೆ ಇರುವ ರಾಜ್ಯಗಳಲ್ಲಿ ಫೆಬ್ರವರಿ ತಿಂಗಳಲ್ಲಿ ಬೀಡಿ ಕಾರ್ಮಿಕರು ಪ್ರತಿಭಟನೆಗಳನ್ನು ನಡೆಸಲು ಸಭೆಯು ಕರೆ ನೀಡಿದೆ.

ಕೇರಳದ ಮಾಜಿ ಶಾಸಕರು ಬೀಡಿ ಕಾರ್ಮಿಕರ ರಾಷ್ಟ್ರೀಯ ಫೆಡರೇಷನ್ ಅಧ್ಯಕ್ಷರಾದ ಕೆ.ಪಿ.ಸಹದೇವನ್ ಅಧ್ಯಕ್ಷತೆ ವಹಿಸಿದ್ದರು. ಪಶ್ಚಿಮಬಂಗಾಳದ ಮಾಜಿ ಸಂಸದ ಹಾಗೂ ಬೀಡಿ ಕಾರ್ಮಿಕರ ಫೆಡರೇಷನ್ ರಾಷ್ಟ್ರೀಯ ಉಪಾಧ್ಯಕ್ಷ ಅಬು ಹಸನತ್ ಖಾನ್, ಸೊಲ್ಲಾಪುರದ ಫಾತಿಮಾ ಬೇಗ್ ಇದ್ದರು. ವೇದಿಕೆಯಲ್ಲಿ ರಾಜ್ಯ ಬೀಡಿ ಕಾರ್ಮಿಕರ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಸೈಯದ್ ಮುಜೀಬ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಫೆಡರೇಷನ್ ಅಧ್ಯಕ್ಷ ಎ.ಬಾಲಕೃಷ್ಣ ಶೆಟ್ಟಿ ವಸಂತಾಚಾರಿ, ಸಿ.ಕುಮಾರಿ, ರಮಣಿ, ಖಜಾಂಚಿ ಪದ್ಮವತಿ ಶೆಟ್ಟಿ, ರಾಧ ಮೂಡಬಿದರೆ, ವಿ ಕೋದಂಡ ರಾಮು, ಕೇರಳ, ಪಶ್ಚಿಮ ಬಂಗಾಳ ಬಿಹಾರ, ಮಧ್ಯಪ್ರದೇಶ, ತೆಲಂಗಾಣ,ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ, ಕರ್ನಾಟಕ ರಾಜ್ಯಗಳ ಬೀಡಿಕಾರ್ಮಿಕರ ಮುಂದಾಳುಗಳು ಭಾಗವಹಿಸಿದ್ದರು. ತುಮಕೂರಿನ ಷಹತಾಜ್ ಮತ್ತು ಅಬ್ದುಲ್ ಮುನಾಫ್ ಉಪಸ್ಥಿತರಿದ್ದರು.

– ಸೈಯದ್ ಮುಜೀಬ್

ಫೆ. 19 : ರೈತ ಕಾರ್ಮಿಕ ಸಖ್ಯತಾ ದಿನಾಚರಣೆ



ರೈತರ ಕಾರ್ಮಿಕರ ಮತ್ತು ಕೃಷಿಕೂಲಿಕಾರರ ಬೇಡಿಕೆಗಳನ್ನು ಕೂಡಲೇ ಬಗೆ ಹರಿಸುವಂತೆ ಒತ್ತಾಯಿಸಿ ಕೆ ಪಿ ಆರ್ ಎಸ್ ಮತ್ತು ಸಿಐಟಿಯು ಕೋಲಾರ ಜಿಲ್ಲಾ ಸಮಿತಿ ವತಿಯಿಂದ ಜಿಲ್ಲಾ ಪಂಚಾಯತ್ ಮುಂಭಾಗ ಧರಣಿ ನಡೆಸಿದರು.

ನಗರದ ಜಿಲ್ಲಾ ಪಂಚಾಯತ್ ಮುಂದೆ ಫೆ. 19ರಂದು ಜಮಾಯಿಸಿದ ಕಾರ್ಯಕರ್ತರು ದೇಶಾದ್ಯಂತ ರೈತ ಕಾರ್ಮಿಕರ ಬೇಡಿಕೆಗಳನ್ನು ಇಟ್ಟುಕೊಂಡು ಸಖ್ಯತಾ ದಿನಾಚರಣೆಯನ್ನು ಮಾಡುತ್ತಿದ್ದು ಅದರ ಭಾಗವಾಗಿ ಈ ಹೋರಾಟ ನಡೆಸಲಾಗುತ್ತಾ ಇದೆ ಎಂದು ಪ್ರತಿಭಟನಾಕಾರರು ವಿವರಿಸಿದರು.

ಧರಣಿಯನ್ನು ಉದ್ದೇಶಿಸಿ ಕೆ ಪಿ ಆರ್ ಎಸ್ ರಾಜ್ಯ ಅಧ್ಯಕ್ಷ ಜಿ.ಸಿ.ಬಯ್ಯಾರೆಡ್ಡಿ ಮಾತನಾಡಿ. ರೈತರ ಕಾರ್ಮಿಕರ ಬೇಡಿಕೆಗಳನ್ನು ಬಗೆಹರಿಸದೇ ಅವುಗಳನ್ನು ಕಾರ್ಯರೂಪಕ್ಕೆ ತರದೇ ಕೇವಲ ಪ್ರಚಾರಕ್ಕೆ ಮಾತ್ರ ಸೀಮಿತವಾಗುತ್ತಾ ಇದೆ ಕೂಡಲೇ ರೈತರ ಕಷ್ಟಗಳಿಗೆ ಪರಿಹಾರವಾದ ಸ್ವಾಮಿನಾಥನ್ ವರದಿ ಜಾರಿ ಮಾಡಬೇಕು ಎಂದರು

ಚುನಾವಣೆಯ ದೃಷ್ಟಿಯಿಂದ ಪ್ರಧಾನಮಂತ್ರಿ ನರೇಂದ್ರ ಮೋದಿ ಜನರಿಗೆ ಸುಳ್ಳು ಭರವಸೆಗಳನ್ನು ನೀಡುತ್ತಾ ತಮಗೆ ಇನ್ನೂ ಎರಡು ವರ್ಷಗಳು ಹೆಚ್ಚಿನ ಅಧಿಕಾರ ಕೊಟ್ಟರೆ ಮಾತ್ರ ಪ್ರತಿಯೊಬ್ಬರ ಖಾತೆಗೆ 15 ಲಕ್ಷ ರೂಪಾಯಿ ಹಾಕುತ್ತೇವೆ ಎಂದು ಜನರನ್ನು ಮರಳು ಮಾಡಲು ಹೊರಟಿದೆ. ಇಂತಹ ಸುಳ್ಳು ಆಶ್ವಾಸನೆಗಳನ್ನು ಮಟ್ಟ ಹಾಕಲು ದೇಶದಲ್ಲಿ ರೈತ ಕಾರ್ಮಿಕರ ಐಕ್ಯತೆಯ ಹೋರಾಟಗಳನ್ನು ಹೆಚ್ಚಾಗಿ ಮಾಡಬೇಕಾಗಿದೆ ಎಂದರು.

ಕಾರ್ಮಿಕ ಮುಖಂಡ ಗಾಂಧಿನಗರ ನಾರಾಯಣಸ್ವಾಮಿ ಮಾತನಾಡಿ. ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ನೀತಿಗಳಿಂದ ಸಾರ್ವಜನಿಕ ಉದ್ದಿಮೆಗಳಲ್ಲಿ ಹೊಸ ಉದ್ಯೋಗಗಳು ಸೃಷ್ಟಿ ಯಾಗದೇ ಸ್ಥಳೀಯರಿಗೆ ಕೈಗಾರಿಕೆಗಳಲ್ಲಿ ಉದ್ಯೋಗ ಅವಕಾಶಗಳು ಸಿಗುತ್ತಿಲ್ಲ. ಅವರಿಗೆ ಉದ್ಯೋಗ ಕೊಡುವ ಕಾರ್ಯಕ್ರಮಗಳು ಜನರಿಗೆ ಕೊಡಬೇಕಾಗಿದೆ ಎಂದು ಒತ್ತಾಯಿಸಿದರು.

ಸಿಪಿಐ–ಎಂ ಜಿಲ್ಲಾ ಕಾರ್ಯದರ್ಶಿ ಪಿ.ಶ್ರೀನಿವಾಸ್ ಮಾತನಾಡಿ ಬಯಲುಸೀಮೆ ಪ್ರದೇಶವಾಗಿರುವ ಕೋಲಾರ ಜಿಲ್ಲೆಯು ನದಿನಾಲೆಗಳಿಲ್ಲ ಸರಕಾರ ಜಾರಿಮಾಡಿರುವ ಕೆಸಿ ವ್ಯಾಲಿ ನೀರಿನ ಗುಣಮಟ್ಟವನ್ನು ಖಾತ್ರಿಪಡಿಸಿ ಸುಪ್ರೀಂ ಕೋರ್ಟ್ ನ್ಯಾಯಾಲಯದ ತಡೆಯಾಜ್ಞೆಯನ್ನು ತೆರವು ಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.



ಗ್ರಾಮ ಪಂಚಾಯತ್ ನೌಕರರ ಕನಿಷ್ಠ ವೇತನ ಜಾರಿ ಮಾಡಬೇಕು ಕಟ್ಟಡ ನಿರ್ಮಾಣ ಕಾರ್ಮಿಕರ ಸೌಲಭ್ಯಗಳನ್ನು ಸಕಾಲಕ್ಕೆ ವಿತರಿಸಬೇಕು. ಬಹು ನಿರೀಕ್ಷಿತ ಕೆಜಿಎಫ್ ಚಿನ್ನದ ಗಣಿಯನ್ನು ಪುನರ್ ಪ್ರಾರಂಭಿಸಬೇಕು. ಕೈಗಾರಿಕೆಗಳ ಖಾಸಗೀಕರಣ ನೀತಿಗಳನ್ನು ಕೈ ಬಿಡಬೇಕು ಎಂದು ಒತ್ತಾಯಿಸಿದರು.

ಧರಣಿಯ ನೇತೃತ್ವವನ್ನು ಕೆ.ಪಿ.ಆರ್.ಎಸ್ ಜಿಲ್ಲಾ ಅಧ್ಯಕ್ಷ ಪಿ.ಆರ್ ಸೂರ್ಯನಾರಾಯಣ್, ಕಾರ್ಯದರ್ಶಿ ಟಿ.ಎಂ.ವೆಂಕಟೇಶ್. ಮುಖಂಡರಾದ ಮುನಿರಾಜಮ್ಮ, ನಾಗರತ್ನಮ್ಮ, ಆಶಾ, ಎನ್ ಎನ್ ಶ್ರೀರಾಮ್, ನಾರಾಯಣರೆಡ್ಡಿ, ಗಂಗಮ್ಮ, ಪಿ.ಆರ್.ನವೀನ್, ಕೇಶವರಾವ್ ಸೇರಿದಂತೆ ಅನೇಕರು ವಹಿಸಿದ್ದರು.

ಇಧೇ ರೀತಿಯಲ್ಲಿ ರೈತ ಕಾರ್ಮಿಕ ಸಖ್ಯತಾ ದಿನಾಚರಣೆಯನ್ನು ಆಚರಿಸಿದ ವರದಿಗಳು ಮೈಸೂರು ಮತ್ತು ತುಮಕೂರಿನಿಂದಲೂ ಬಂದಿವೆ.


– ಸಿ. ಅಮರೇಶ್

➡ಗ್ರೀನ್ ಹೌಸ್ ತಂತ್ರಜ್ಞಾನ ಕೃಷಿಗೆ ಆದ್ಯತೆ ನೀಡುತ್ತಿದೆ. ಈಚೆಗೆ ಸಾವಿರಾರು ಕೃಷಿಕರನ್ನು ಸೇರಿಸಿ ಕಂಪನಿಗಳನ್ನು ರಚಿಸಲಾಗುತ್ತಿದೆ. ಇದಕ್ಕಾಗಿ ಸರಕಾರ ನೂರಾರು ಕೋಟಿ ಪ್ರೋತ್ಸಾಹ ಧನವನ್ನು ನೀಡುತ್ತಿದೆ, ಎಂದು ಕರ್ನಾಟಕ ಪ್ರಾಂತ ರೈತಸಂಘದ ರಾಜ್ಯ ಸಮಿತಿ ಹೇಳಿಕೆಯಲ್ಲಿ ತಿಳಿಸಿದೆ.

ನಾವು ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನ ಬಳಸುವುದನ್ನು ಸ್ವಾಗತಿಸುತ್ತೇವೆ. ಆದರೇ ಅವುಗಳನ್ನು ಬಳಸಿ ಖಾಸಗೀ ಲೂಟಿಕೋರ ಬಹುರಾಷ್ತ್ರಿಯ ಸಂಸ್ಥೆಗಳ ಕೃಷಿಗೆ ವಹಿಸಿಕೊಡುವುದನ್ನು ತೀವ್ರವಾಗಿ ವಿರೋಧಿಸುತ್ತೇವೆ. ಅಚಿತಹ ಎಲ್ಲಾ ಹಿಂದಿನ ಪ್ರಸ್ತಾಪ ಮತ್ತು ಈಗಿನ ಪ್ರಸ್ತಾಪಗಳನ್ನು ಕೂಡಲೇ ಕೈ ಬಿಡಬೇಕು. ಅದು ನಮ್ಮ ಪಾರಂಪರಿಕ ಕೃಷಿಯನ್ನು ಮತ್ತು ರೈತರು ಹಾಗೂ ಕೃಷಿ ಕೂಲಿಕಾರರನ್ನು ನಾಶ ಮಾಡಲಿದೆ., ಎಂದು ಹೇಳಿಕೆ ಎಚ್ಚರಿಸಿದೆ.

ಆದ್ದರಿಂದ ಈ ತಂತ್ರಜ್ಞಾನ ಬಳಕೆಯಾಗಬೇಕು ಮತ್ತು ಪಾರಂಪರಿಕ ಕೃಷಿಯನ್ನು ಮತ್ತು ರೈತರು ಮತ್ತು ಕೂಲಿಕಾರರನ್ನು ಉಳಿಸಲು ಇವರನ್ನು ಒಳಗೊಳ್ಳುವ ಸಹಕಾರಿ ಕೃಷಿಯನ್ನು ಬಲಪಡಿಸಲು ಈ ಬಜೆಟ್ ನಲ್ಲಿ ನಿರ್ದೇಶನವನ್ನು ನೀಡುವಂತೆ ಕ್ರಮವಹಿಸಬೇಕಾಗಿದೆ, ಎಂದು ಸಲಹೆ ನೀಡಿದೆ.

ಈ ದಿಕ್ಕಿನಲ್ಲಿ ರೈತರನ್ನು ಕೃಷಿಯನ್ನು ಸಚಿರಕ್ಷಿಸಲು ಅಗತ್ಯ ಸಾರ್ವಜನಿಕ ಬಂಡವಾಳ ಹೂಡಿಕೆಯನ್ನು ಹೆಚ್ಚಿಸಲು ಮತ್ತು ಡಾ. ಎಂ.ಎಸ್ ಸ್ವಾಮಿನಾಥನ್ ಕೃಷಿ ಆಯೋಗದ ಸಲಹೆಯಂತೆ ಕೃಷಿ ಉತ್ಪನ್ನಗಳಿಗೆ ಉತ್ಪಾದನಾ ವೆಚ್ಚದ ಒಚಿದೂವರೆಯಷ್ಟು ಬೆಂಬಲಬೆಲೆಯನ್ನು ಖಾತರಿ ಪಡಿಸಲು ಮತ್ತು ಎಲ್ಲ ರೈತರಿಗೆ ಕೂಲಿಕ್ಹರರಿಗೆ ಅಗತ್ಯದಷ್ಟು ಬಡ್ಡಿರಹಿತ ಸಾರ್ವಜನಿಕ ಸಾಲ ಒದಗಿಸಲು ಈ ಮೂಲಕ ವಿನಂತಿಸುತ್ತೇವೆ, ಎಂದು ಹೇಳಿಕೆಯಲ್ಲಿ ತಿಳಿಸಿದೆ.



ಸಿದ್ಧಗಂಗಾ ಮಠದ ಡಾ.ಶಿವಕುಮಾರಸ್ವಾಮೀಜಿ

ಅಕ್ಷರ ಮತ್ತು ಅನ್ನ ದಾಸೋಹದ ಕಾಯಕಯೋಗಿ

ಎಸ್.ವೈ. ಗುರುಶಾಂತ್

'ಶರಣರ ಮಹಿಮೆ ಮರಣದಲ್ಲಿ ಕಾಣ' ಎಂಬ ಮಾತಿದೆ. ಇದು ಅನ್ವರ್ಥವಾದ ಎರಡು ಪ್ರಸಂಗಗಳು ಇತ್ತೀಚಿನವು. ಕೆಲ ವರುಷಗಳ ಹಿಂದೆ ಗದುಗಿನ ಪಂಚಾಕ್ಷರಿ ಗವಾಯಿಗಳು ನಿಧನರಾದಾಗ ಅವರ ಅಂತಿಮ ದರ್ಶನಕ್ಕೆ ಮತ್ತು ಅಂತ್ಯ ಸಂಸ್ಕಾರಕ್ಕೆ ಅಲ್ಲಿ ಸೇರಿದ ಲಕ್ಷಾಂತರ ಜನ ಸಮೂಹ ಮತ್ತು ಅವರನ್ನು ಇಡೀ ಗದಗ್-ಬೆಟಗೇರಿ ಜನ ಬರಮಾಡಿಕೊಂಡು ಉಪಚರಿಸಿದ ಬಗೆ ಅವಿಸ್ಮರಣೀಯ. ಹಾಗೆಯೇ ಇದೇ ಜನವರಿ 2, 2019 ರಂದು ತುಮಕೂರಿನ ಸಿದ್ಧಗಂಗಾ ಮಠದ ಡಾ.ಶಿವಕುಮಾರ ಸ್ವಾಮೀಜಿಯವರು ನಿಧನರಾದಾಗ ಅಲ್ಲಿಗೆ ಹರಿದು ಬಂದ ಶೋಕತಪ್ತ ಲಕ್ಷಾಂತರ ಜನಸಾಗರ, ಬಂದವರಿಗೆ ಏನೂ ತೊಂದರೆಯಾಗದಂತೆ, ಊಟೋಪಚಾರಗಳಿಂದ ಹಿಡಿದು ಎಲ್ಲವನ್ನೂ ನಿಭಾಯಿಸಿದ ರೀತಿ ಸಹ ಅತ್ಯಂತ ಅಭಿನಂದನೀಯ, ದಾಖಲಾರ್ಹ ಸಂಗತಿ. ಜನತೆಯ ಅಪೂರ್ವ ಸ್ಪಂದನವೇ ಈ ಹಿರಿಯ ಚೇತನಗಳ ಮಹಾನ್ ಕಾಯಕ, ಸಮಾಜಕ್ಕೆ ನೀಡಿದ ಕೊಡುಗೆಗಳಿಗೆ, ಜನಪ್ರಿಯತೆಗೆ ಸಾಕ್ಷಿಯೂ ಕೂಡ.

ಒಂದು ನೂರ ಹನ್ನೊಂದು ವರುಷಗಳ ಸಾರ್ಥಕ ಜೀವನ ನಡೆಸಿದ ಸಿದ್ಧಗಂಗಾ ಮಠದ ಯತಿ ಡಾ.ಶಿವಕುಮಾರಸ್ವಾಮೀಜಿ ಯವರ ಆರೋಗ್ಯದಲ್ಲಿ ಏರು ಪೇರಾಗುತ್ತಿರುವುದೇ ಜನರಿಗೆ ಅಗಲಿಕೆಯ ಆತಂಕದ ಸೂಚನೆಯನ್ನೂ ನೀಡಿತ್ತು. ಶ್ರೀ ಗಳು ಇನ್ನಿಲ್ಲವಾದ ಸುದ್ದಿ ತಿಳಿದ ನಂತರ ವ್ಯಕ್ತವಾದ ಪ್ರತಿಕ್ರಿಯೆಗಳು ಭಾವೋದ್ರಿಕ್ತತೆಯಿಂದ ಕೂಡಿದ್ದವು.

ಈ ಸ್ಪಂದನ ಸಂಬಂಧಗಳಿಗೆ ಆಳವಾದ ಕಾರಣಗಳೂ ಇವೆ. ಅವರು ನಡೆದಾಡುವ 'ದೇವರೆ'ಂದಾಗಲೀ, ಪವಾಡ ಪುರುಷರೆಂದಾಗಲೀ ಜನ ನೆರೆದರು ಎನ್ನುವುದು ಉತ್ರೇಕ್ಷೆ. ಸಿದ್ಧಗಂಗಾ ಮಠ ಬಡ, ಸಾಮಾನ್ಯರ ಮಕ್ಕಳಿಗೆ ಶಿಕ್ಷಣ ನೀಡುವಲ್ಲಿನ ಕೊಡುಗೆ ಅತ್ಯಂತ ಮಹತ್ವದ್ದಾಗಿದೆ. ತ್ರಿವಿಧ ದಾಸೋಹಗಳಲ್ಲಿ ಅಕ್ಷರ ಮತ್ತು ಅನ್ನ ದಾಸೋಹಗಳು ಅತೀ ಪ್ರಾಮುಖ್ಯತೆಯನ್ನು ಪಡೆದಿವೆ. ಅನ್ನದ ಬಲವಿಲ್ಲದೇ ಅಕ್ಷರ ಕಲಿಯುವುದೂ ಸಾಧ್ಯವಿಲ್ಲ ಎಂಬ ಸತ್ಯವನ್ನು ಗುರುತಿಸಿ ಶ್ರೀ ಮಠ ಎರಡನ್ನೂ ನೀಡುತ್ತಾ ಲಕ್ಷಾಂತರ ಮಕ್ಕಳಿಗೆ ಅರಿವು ಮತ್ತು ಬದುಕಿಗೆ ಬೆಳಕು ನೀಡಿದೆ. ಪ್ರಸಕ್ತವಾಗಿ ಮಠದ ಆಶ್ರಯದಲ್ಲೇ ಹತ್ತು ಸಾವಿರ ಮಕ್ಕಳಿಗೆ ಊಟ ಮತ್ತು ಶಿಕ್ಷಣ ನೀಡುತ್ತಿರುವುದು, ಅಲ್ಲಿಗೆ ಬಂದ ಸಾವಿರಾರು ಭಕ್ತಾದಿಗಳಿಗೆ ಅನ್ನ ದಾಸೋಹ ನಡೆಯುತ್ತಿರುವುದು ನಿಜಕ್ಕೂ ಸಾಹಸ, ಅದ್ಭುತ. ಶಿಕ್ಷಣದ ನೀಡಿಕೆ, ಅದು ಹೊಮ್ಮಿಸಿದ ಬೆಳಕು ಎಲ್ಲರೂ ಇತ್ತ ನೋಡುವಂತೆ ಮಾಡಿರುವುದರಲ್ಲಿ ಅತಿಶಯವೇನಿಲ್ಲ. ಈ ಮಹತ್ಕಾರ್ಯ ಎಲ್ಲೆಡೆಗಳಲ್ಲಿ ಶ್ಲಾಘಿಸಲ್ಪಟ್ಟಿದೆ.

ಸಿದ್ಧಗಂಗಾ ಮಠ 16ನೇಯ ಶತಮಾನದ ತೋಂಟದ ಸಿದ್ಧಲಿಂಗ ಶ್ರೀಗಳ 700 ಯತಿಗಳ ಪರಂಪರೆಗೆ ಸೇರಿದ್ದಾಗಿದೆ. ಈ ಪರಂಪರೆಗೆ ಸೇರಿದ ಹಲವು ಕೇಂದ್ರಗಳು ದಕ್ಷಿಣ ಕರ್ನಾಟಕದಲ್ಲಿ ಹಲವು ಇವೆ. ನೊಳಂಬ ರಾಜ್ಯದ ವ್ಯಾಪ್ತಿಯಲ್ಲಿದ್ದ ಈ ಭಾಗ ಅದರಲ್ಲೂ ತುಮಕೂರು ಪ್ರದೇಶದಲ್ಲಿದ್ದ ರೈತರು ಈ ಮಠದ ಭಕ್ತರಲ್ಲೇ ಅತೀ ಮುಖ್ಯ ನೆಲೆಯಾಗಿದ್ದವರು. ಅದರಲ್ಲೂ ಕೃಷಿಕರಾದ ನೊಣಬ ಲಿಂಗಾಯತರು, ಇವರೊಂದಿಗೆ ವಾಣಿಜ್ಯ ಕ್ಷೇತ್ರದಲ್ಲಿದ್ದ ಬಣಜಿಗ ಲಿಂಗಾಯತರು ಶ್ರೀ ಮಠದ ಪ್ರಮುಖ ಭಕ್ತರು. ಹೀಗಾಗಿಯೇ ಇಂದಿನವರೆಗೂ ಈ ವಿಭಾಗದ ಭಕ್ತರೇ

> **ಅವರು ನಡೆದಾಡುವ 'ದೇವರೆ'ಂದಾಗಲೀ, ಪವಾಡ ಪುರುಷರೆಂದಾಗಲೀ ಜನ ನೆರೆದರು ಎನ್ನುವುದು ಉತ್ರೇಕ್ಷೆ. ಸಿದ್ಧಗಂಗಾ ಮಠ ಬಡ, ಸಾಮಾನ್ಯರ ಮಕ್ಕಳಿಗೆ ಶಿಕ್ಷಣ ನೀಡುವಲ್ಲಿನ ಕೊಡುಗೆ ಅತ್ಯಂತ ಮಹತ್ವದ್ದಾಗಿದೆ. ತ್ರಿವಿಧ ದಾಸೋಹಗಳಲ್ಲಿ ಅಕ್ಷರ ಮತ್ತು ಅನ್ನ ದಾಸೋಹಗಳು ಅತೀ ಪ್ರಾಮುಖ್ಯತೆಯನ್ನು ಪಡೆದಿವೆ. ಅನ್ನದ ಬಲವಿಲ್ಲದೇ ಅಕ್ಷರ ಕಲಿಯುವುದೂ ಸಾಧ್ಯವಿಲ್ಲ ಎಂಬ ಸತ್ಯವನ್ನು ಗುರುತಿಸಿ ಶ್ರೀ ಮಠ ಎರಡನ್ನೂ ನೀಡುತ್ತಾ ಲಕ್ಷಾಂತರ ಮಕ್ಕಳಿಗೆ ಅರಿವು ಮತ್ತು ಬದುಕಿಗೆ ಬೆಳಕು ನೀಡಿದೆ.**


ಪ್ರಧಾನವಾಗಿದ್ದಾರೆ. ಹಿಂದೆ ಈ ಪ್ರದೇಶ ಬರಗಾಲಕ್ಕೆ ತುತ್ತಾದಾಗ ಸಿದ್ಧಗಂಗಾ ಮಠವು ರೈತಾಪಿ, ಜನ ಸಾಸಮಾನ್ಯರ ನೆರವಿಗೆ ಬಂದುದನ್ನು ಜನ ಈಗಲೂ ಸ್ಮರಿಸುತ್ತಾರೆ. ಈ ಕಾರಣದಿಂದಲೇ ಶ್ರೀ ಮಠ ಅವರೊಂದಿಗೆ ಅವಿನಾವಭಾವ ಸಂಬಂಧವನ್ನು ಹೊಂದಿದೆ. ಒಂದೆಡೆ ಕೃಷಿಯ ಅಭಿವೃದ್ಧಿಗೆ, ಹಿಂದುಳಿದ ಆ ಪ್ರದೇಶದಲ್ಲಿ ಶಿಕ್ಷಣದ ಪ್ರಸಾರಕ್ಕೆ ಒತ್ತು ನೀಡಿರುವುದು. ಇದು ಶರಣ ಪರಂಪರೆಯ ಬಹುತೇಕ ಲಿಂಗಾಯತ ಮಠಗಳ ಮಹತ್ವದ ಕೊಡುಗೆ ಆಗಿದೆ. ಅಕ್ಷರ ಕಲಿಕೆಯನ್ನೂ, ಶಿಕ್ಷಣದ ಶಬ್ದವನ್ನೂ ಕೇಳಿದರೂ ಕಾದ ಸೀಸವನ್ನು ಕಿವಿಗೆ ಹೊಯ್ಯಬೇಕು ಎನ್ನುವ ಚಾತುರ್ವಣ್ಯ ಧರ್ಮದ ಮನುಸ್ಮೃತಿಯ ನಿರ್ದೇಶನಕ್ಕೆ ವ್ಯತಿರಿಕ್ತ ಈ ಶರಣರ, ವಚನ ಚಳುವಳಿಯ ಪರಂಪರೆ. ಚಾತುರ್ವಣ್ಯ ಪ್ರತಿಪಾದಿಸುವ ಬಹುತೇಕ ಬ್ರಾಹ್ಮಣ ಮಠಗಳು ಇಂತಹ ಕಾರ್ಯದಿಂದ ದೂರವೇ ಉಳಿದಿರುವುದು ಅದೇ ಕಾರಣಕ್ಕೆ. ಅಕ್ಷರ ಕಲಿಕೆಯನ್ನೇ ಗುರಿಯಾಗಿಸಿಕೊಂಡ ಸಿದ್ಧಗಂಗಾ ಮಠದಲ್ಲಿ ಕಲಿತವರು ಸಮಾಜದಲ್ಲಿ ಹಲವು ಮುಖ್ಯ ಸ್ಥರಗಳಲ್ಲಿ, ದೇಶ-ವಿದೇಶಗಳಲ್ಲಿ ಇದ್ದಾರೆ. ಉನ್ನತ ಆಡಳಿತಾಧಿಕಾರಿಗಳೂ, ರಾಜಕಾರಣಿಗಳೂ, ಸಾಹಿತಿ, ಬುದ್ಧಿ ಜೀವಿಗಳೂ ಆಗಿದ್ದಾರೆ.

ಡಾ.ಶಿವಕುಮಾರಸ್ವಾಮಿಗಳು ಅವರ ಗುರುಗಳಾದ ಶ್ರೀ ಉದ್ದಾನ ಶಿವಯೋಗಿಗಳು ಆರಂಭಿಸಿದ ಮಹತ್ಕಾರ್ಯವನ್ನು ಮುಂದುವರಿಸಿದರಲ್ಲದೇ ಕಾಲದ ಅವಶ್ಯಕತೆಗನುಗುಣವಾಗಿ ವಿಸ್ತರಿಸಿದರು, ಬೆಳೆಸಿದರು. ಒಂದು ಸಂಸ್ಕೃತ ಶಾಲೆಯಿಂದ 20 ಕ್ಕೆ, 58 ಪ್ರೌಢ ಶಾಲೆಗಳು, 8 ಪದವಿ ಪೂರ್ವ ಕಾಲೇಜುಗಳು, ಒಂದು ಇಂಜಿನೀಯರಿಂಗ್, 2 ಅಂಧ ಮಕ್ಕಳ ಶಾಲೆ, ಒಂದು ಅಂಗವಿಕಲರ ಶಾಲೆ ಹೀಗೆ ಒಟ್ಟು 126 ಶಿಕ್ಷಣ ಸಂಸ್ಥೆಗಳನ್ನು ಮಠದ ಆಡಳಿತ ಹೊಂದಿದೆ. ಪ್ರಾಥಮಿಕ ಶಿಕ್ಷಣಕ್ಕೆ ಅವರ ಒತ್ತು ಸಹ ಗಮನಾರ್ಹ.

ಡಾ.ಶಿವಕುಮಾರಸ್ವಾಮೀಜಿಗಳು ಸ್ವತಃ ಸಂಸ್ಕೃತ ಮತ್ತು ಇಂಗ್ಲೀಷ್ ಪದವೀಧರರು. ಕನ್ನಡವೂ ಒಳಗೊಂಡು ಅವರ ಮಾತುಗಳು, ಭಾಷಾ ಜ್ಞಾನ, ವಿಚಾರ ಉಚ್ಚಾರ ಸುಸ್ಪಷ್ಟ. ಮಾಗಡಿ ತಾಲೂಕಿನವರಾದ ಅವರು ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಾಗಲೇ ಸನ್ಯಾಸತ್ವ ಸ್ವೀಕರಿಸಿ ಮಠಕ್ಕೆ ಆಗಮಿಸಿ 88 ವರುಷಗಳಾಗಿವೆ. ಗುರುಗಳ ನಿಧನದ ನಂತರ ಮಠದ ಪೂರ್ಣ ಹೊಣೆ ವಹಿಸಿಕೊಂಡು 77 ವರುಷಗಳಾಗಿದ್ದವು.

ಅವರ ಕಾಯಕ ನಿಷ್ಠೆಯನ್ನು ಜನ ಈಗಲೂ ನೆನಪಿಸಿಕೊಳ್ಳುತ್ತಾರೆ. ಹಿಂದೆ ಮಠದ ಅಭಿವೃದ್ಧಿಯ ನಿರ್ಮಾಣ ಕಾರ್ಯದಲ್ಲಿ ತೊಡಗಿದ ಎಲ್ಲರನ್ನೂ ಪ್ರೀತಿಯಿಂದ ನೋಡಿಕೊಳ್ಳುವುದಲ್ಲದೇ ಅವರಿಗೆ ಊಟೋಪಚಾರದ ಉಸ್ತುವಾರಿಯನ್ನು ನಿರ್ವಹಿಸುತ್ತಿದ್ದುದು, ಸ್ವತಃ ವಿದ್ಯಾರ್ಥಿಗಳು, ಭಕ್ತರು, ಕೆಲಸಗಾರರ ಜೊತೆ ಹಗಲು ಕೊಟ್ಟು ದೈಹಿಕವಾಗಿಯೂ ಶ್ರಮಿಸುತ್ತಿದ್ದುದನ್ನು ಹೇಳುತ್ತಾರೆ. ವಿದ್ಯಾರ್ಥಿಗಳ ಶಿಕ್ಷಣ ಮತ್ತು ಊಟದ ಉಸ್ತುವಾರಿಯತ್ತ ಅವರದ್ದು ಯಾವಾಗಲೂ ಗಮನ ಎಂಬುದನ್ನು ಹಳೆಯ ವಿದ್ಯಾರ್ಥಿಗಳು ಹೇಳುತ್ತಾರೆ. ಇದು ಎಲ್ಲರ ಮನದಲ್ಲಿ ಅಚ್ಚೊತ್ತಿದೆ. ಇಲ್ಲಿ ಸೇರಬಯಸುವ ವಿದ್ಯಾರ್ಥಿಗಳಿಗೆ ಜಾತಿಯ ಅಳತೆ ಗೋಲಿರಲಿಲ್ಲ. ಎಲ್ಲಾ ಜಾತಿಗಳ, ಧರ್ಮಗಳ ವಿದ್ಯಾರ್ಥಿಗಳಿಗೆ ಮುಕ್ತ ಅವಕಾಶ ಇತ್ತು.

ಹಾಗೆಯೇ ಮಠದ ಜಾತ್ರೆ ಸಂದರ್ಭದಲ್ಲಿ ಅವರು ಏರ್ಪಡಿಸುತ್ತಿದ್ದ ಕೃಷಿ ಮೇಳ, ದನಗಳ ಜಾತ್ರೆ, ಕೈಗಾರಿಕಾ ವಸ್ತು ಪ್ರದರ್ಶನ ಹಾಗೆಯೇ ಮುಂದುವರಿದು ವಿಜ್ಞಾನ-ತಂತ್ರಜ್ಞಾನದ ಪ್ರದರ್ಶನಗಳು ಮಹತ್ವದ್ದಾಗಿವೆ. ಆಧುನಿಕ ತಂತ್ರಜ್ಞಾನ ಮತ್ತು ಅದನ್ನು ಕೃಷಿಗೆ ಅಳವಡಿಕೆ ಬಗ್ಗೆ ಮಾಹಿತಿಗಳು ಕೃಷಿ ಬೆಳವಣಿಗೆಗೆ, ರೈತಾಪಿ ಸಮುದಾಯಗಳಿಗೆ ಉಪಯುಕ್ತವಾಗಿರುತ್ತಿದ್ದವು.



ಮಠದಲ್ಲಿ ಜಾತಿ ಬೇಧ, ಪಂಕ್ತಿ ಬೇಧವೂ ಇರಲಿಲ್ಲ. ಮಠಕ್ಕೆ ವಿದ್ಯಾರ್ಥಿಗಳು ಭೇಟಿ ನೀಡಿದ್ದಾಗ ಮುಟ್ಟಾಗಿರುವ ಕಾರಣಕ್ಕೆ ಎಲ್ಲರೊಂದಿಗೆ ಊಟಕ್ಕೆ ಕೂಡಿಸದೇ ಕೆಲ ವಿದ್ಯಾರ್ಥಿನಿಯರನ್ನು ಹೊರಗಿಟ್ಟ ಸಂಗತಿ ತಿಳಿಯುತ್ತಲೇ ಅವರನ್ನು ಕರೆದುಕೊಂಡು ಹೋಗಿ ಎಲ್ಲರೊಂದಿಗೆ ಕೂಡಿಸಿ ಊಟ ಮಾಡಿದ್ದನ್ನು ಆ ವಿದ್ಯಾರ್ಥಿನಿಯರು ನೆನಪಿಸಿಕೊಂಡಿದ್ದಾರೆ. ಶರಣ ಪರಂಪರೆ, ಬಸವಣ್ಣನವರ ವಿಚಾರ ಧಾರೆ ಮುಟ್ಟನ್ನು ಅಪವಿತ್ರ ಎಂದು ಭಾವಿಸುವುದಿಲ್ಲ.

ಸ್ವಾಮೀಜಿಗಳು ವೈಜ್ಞಾನಿಕ ಕಾರ್ಯಕ್ರಮಗಳ ಮೂಲಕ ವೈಚಾರಿಕತೆಯನ್ನು ಬೆಳೆಸುವ ಹಲವಾರು ಪ್ರಯತ್ನಗಳನ್ನು ನಡೆಸಿದ್ದಾರೆ. ಅಂಧಶ್ರದ್ಧೆ ವಿರೋಧಿಸಿ ಮಾತನಾಡಿದ್ದಾರೆ. ಬಸವಣ್ಣನವರ ಕುರಿತ ವೈಚಾರಿಕ ನಾಟಕ ಸಾವಿರಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡಿದೆ.

ಮಠ ಅದರ ಕೆಲಸ ಕಾರ್ಯಗಳು, ಭಕ್ತರು, ಅಭಿಮಾನಿಗಳ ಪ್ರಮಾಣ ಬೆಳೆದಂತೆ ವಿವಿಧ ರಾಜಕಾರಣಿಗಳು, ಪಕ್ಷಗಳ ನಂಟು ಬೆಳೆಯುತ್ತಾ ಬಂದಿದೆ. ಇಲ್ಲಿ ಯಾವುದೇ ಒಂದು ಪಕ್ಷದೊಂದಿಗೆ ನೇರ ಗುರುತಿಸಿಕೊಂಡಿರುವುದು ಕಾಣುವುದಿಲ್ಲವಾದರೂ ಅಧಿಕಾರದಲ್ಲಿ ಕಾಂಗ್ರೆಸ್ ಮತ್ತು ಬಿ.ಜೆ.ಪಿ.ಪಕ್ಷಗಳು ಇರುವಾಗ ಸಂಬಂಧಗಳು ಮತ್ತಷ್ಟೂ ಹೆಚ್ಚಿರುವುದನ್ನು ಗುರುತಿಸಬಹುದು. ಅದರಂತೆಯೇ ಶರಣ ಸಿದ್ಧಾಂತವನ್ನು ಒಪ್ಪಿಕೊಂಡ, ಜಾತಿಯ ತಾರತಮ್ಯ ಅನುಸರಿಸದ, ವೈಚಾರಿಕತೆಯನ್ನು ಪ್ರತಿಪಾದಿಸಿದ ಸ್ವಾಮೀಜಿಯವರು ಹಿಂದುತ್ವ ಪ್ರತಿಪಾದಕರೊಂದಿಗೆ, ಸಂಘಪರಿವಾರದೊಂದಿಗೆ ಹಲವು ಪ್ರಸಂಗಗಳಲ್ಲಿ ತಮ್ಮನ್ನು ಗುರುತಿಸಿಕೊಂಡದ್ದು ವಿಪರ್ಯಾಸವಾಗಿದೆ. ಅವರ ಅಂತ್ಯಕ್ರಿಯೆಯಲ್ಲೂ ಆಗಮ ಪದ್ಧತಿ, ವೈದಿಕ ಆಚಾರಗಳ ಪ್ರಕಾರ ನಡೆದಿರುವುದು ಶರಣರ ಆಶಯಗಳ ವಿರುದ್ಧ. ಸಂಘ ಪರಿವಾರದೊಂದಿಗೆ ಗುರುತಿಸಿಕೊಳ್ಳುವಂತಾಗುವಲ್ಲಿ ಮಠದ ಭಕ್ತರಲ್ಲಿ ವಣಿಕರು, ಉದ್ದಿಮೆದಾರರೂ ಮೇಲುಗೈ ಇರುವುದು, ಬಿಜೆಪಿ ಬಲಗೊಂಡದ್ದು, ಇಂತಹವರ ಒತ್ತಡಗಳಿಗೆ ಒಳಗಾಗಿರಬಹುದಾದ ಸಾಧ್ಯತೆಗಳನ್ನು ಕೆಲವರು ಹೇಳುತ್ತಾರೆ. ಕೆಲವೊಮ್ಮೆ ಧಾರ್ಮಿಕ ಕಾರ್ಯಗಳ ಹೆಸರಿನಲ್ಲಿಯೂ ಅಲ್ಲೆಲ್ಲಾ ಭಾಗವಹಿಸುವಂತೆ ಮಾಡಲಾಗಿದೆ ಎಂಬ ಮಾತುಗಳೂ ಇವೆ. ಕೃಷಿಕರೂ ಮತ್ತು ವಾಣಿಜ್ಯೋದ್ಯಮಿಗಳ ಸಂಯೋಜನೆಯು ಮಠದ ಕಿರಿಯ ಮತ್ತು ಹಿರಿಯ ಸ್ವಾಮೀಜಿಗಳ ನಡುವಿನ ಭಿನ್ನಾಭಿಪ್ರಾಯ, ವ್ಯಾಜ್ಯಗಳಲ್ಲಿ ಪ್ರತಿಫಲನಗೊಂಡಿರುವುದನ್ನೂ ಉಲ್ಲೇಖಿಸಲಾಗುತ್ತಿದೆ.

ಇವೆಲ್ಲವುಗಳ ನಡುವಿನಲ್ಲೂ ಡಾ.ಶಿವಕುಮಾರಸ್ವಾಮೀಜಿಯವರ ಹಾಗೂ ಶ್ರೀ ಮಠದ ಕೊಡುಗೆಗಳು ಗೌಣವಾಗುವುದಿಲ್ಲ. ಈಗ ಹೊಣೆ ಹೊತ್ತಿರುವ ಸ್ವಾಮೀಜಿಗಳು ಶರಣ ಪರಂಪರೆಯನ್ನು ಎತ್ತಿ ಹಿಡಿದು ನಡೆದಿರುವ ಕಾರ್ಯಗಳನ್ನು ಮುಂದುವರಿಸುತ್ತಾ ಹೊಸ ಎತ್ತರಕ್ಕೆ ಕೊಂಡೊಯ್ಯಬೇಕಿದೆ.

ಈ ಸಂದರ್ಭದಲ್ಲೇ ಒಂದು ಸಂಗತಿಯನ್ನು ಸ್ಪಷ್ಟಗೊಳಿಸಿಕೊಳ್ಳಬೇಕಿದೆ. ಇಂದು ನಮ್ಮ ಕನ್ನಡ ಮತ್ತಿತರೆ ಮಾಧ್ಯಮಗಳು, ಕೆಲವು ಆಸಕ್ತ ವಲಯ ಡಾ.ಶಿವಕುಮಾರ ಸ್ವಾಮೀಜಿಯವರನ್ನು ಅತಿ ಮಾನವ ಪಟ್ಟಕ್ಕೆ ದೂಡಲು ಹೊರಟಿದ್ದಾರೆ. 'ನಡೆದಾಡುವ ದೇವರು' ಎಂತಲೂ ಹೇಳುತ್ತಾ ಮುಂದೆ ದೇವರನ್ನಾಗಿಸಿ ಗುಡಿಯಲ್ಲಿ ಬಂಧಿಸುವ ಯತ್ನಗಳೂ ಇವೆ. ಹೀಗೆ ಅವರನ್ನು, ಅವರ ಸಾಧನೆಗಳನ್ನು ಜನರಿಂದ ದೂರವಿರಿಸುವ ಹುನ್ನಾರಗಳು ಇವಾಗಿವೆ. ಕಣ್ಣೆದುರು ಮದರ್ ತೆರೆಸಾರವರ ಉದಾಹರಣೆ ಇದೆ. ಹಾಗೇ ಆಕೆಯನ್ನೂ ದೈವತ್ವಕ್ಕೆ ಏರಿಸುವ ಪ್ರಯತ್ನಗಳೂ ನಡೆದವು. ಸಾಮಾನ್ಯ ಮನುಷ್ಯರಾಗಿ ಜನಿಸಿ, ಬೆಳೆದು ಬಾಳಿದ ಮಾನವ ಇಂತಹ ಅನೇಕ ಅಗಾಧ ಸಾಧನೆಗಳನ್ನು ಮಾಡಬಹುದು ಎಂಬುದನ್ನು ಮನವರಿಕೆ ಮಾಡಿ ಅದರಂತೆ ಶ್ರಮಿಸಲು ಪ್ರೇರೇಪಿಸಿ ಸ್ಫೂರ್ತಿ ನೀಡುವ ಬದಲು ದೈವತ್ವಕ್ಕೇರಿಸುವುದರಿಂದ ಅವರ ಶ್ರಮ ಮತ್ತು ಸಂದೇಶ ಜನತೆಗೆ ತಲುಪದಂತೆ ಮಾಡುವ ಪಟ್ಟಭದ್ರ ಹಿತಾಸಕ್ತಿಗಳ ಕುತಂತ್ರವಿದಾಗಿದೆ. ಇದನ್ನು ಧಿಕ್ಕರಿಸಬೇಕು.

ಎಲ್ಲರಂತೆ ಇದ್ದು, ಎಲ್ಲರೊಡಗೂಡಿ ಅಗಾಧ ಸಾಧನೆ ಮಾಡಿ ಜನ ಮನದಲ್ಲಿ ನೆಲೆ ನಿಂತ ಅವರ ಸಂದೇಶ, ಪರಿಶ್ರಮವನ್ನು ಸ್ಫೂರ್ತಿಯಾಗಿ ತೆಗೆದುಕೊಳ್ಳುವುದು ಸ್ವಾಮೀಜಿಯವರಿಗೆ ಹೃದಯ ಪೂರ್ವಕ ಶ್ರದ್ಧಾಂಜಲಿ ಸಲ್ಲಿಸುವ ನಿಜ ಶ್ರದ್ಧಾಂಜಲಿ ಯಾಗುವುದು. ●

ಸಂವಿಧಾನದ ಮೇಲಿನ ಸರ್ವತೋಮುಖ ದಾಳಿಯನ್ನು ಕೊನೆಗೊಳಿಸುವ ಪಣ ತೊಡಬೇಕಾದ

ಗಣರಾಜ್ಯ ದಿನ



ಚಿತ್ರಕೃಪೆ: ಕ್ಯಾಚ್‌ನ್ಯೂಸ್.ಕಾಂ

ಗಣರಾಜ್ಯೋತ್ಸವ ಆಚರಿಸುವ ಸಂದರ್ಭದಲ್ಲಿ ನಮ್ಮ ಮುಂದಿರುವುದು ಒಂದು ಉತ್ಸಾಹಹೀನ ಚಿತ್ರ. ಸಂವಿಧಾನವು ಪರಿಕಲ್ಪಿಸಿರುವ ನ್ಯಾಯಾಂಗದ ಸಮಗ್ರತೆ, ಸಶಸ್ತ್ರ ಪಡೆಗಳ ವಿಶ್ವಾಸಾರ್ಹತೆ, ಜಾತ್ಯತೀತ ನೆಲೆಗಟ್ಟು, ನಿರ್ದೇಶಕ ತತ್ವಗಳು, ಸಮಾನತೆ, ರಾಷ್ಟ್ರೀಯ ಸಾರ್ವಭೌಮತ್ವ, ನಾಗರಿಕರ ಮೂಲಭೂತ ಹಕ್ಕುಗಳು ಹೀಗೆ ಎಲ್ಲದ ಮೆಲೂ ದಾಳಗಳು ನಡೆಯುತ್ತಿವೆ. ಇದು ಜಾತ್ಯತೀತ-ವಿರೋಧಿ, ಪ್ರಜಾಪ್ರಭುತ್ವ-ವಿರೋಧಿ ಮತ್ತು ಜನ-ವಿರೋಧಿ ಆಡಳಿತದ ವಿರುದ್ಧ ಹೋರಾಟವನ್ನು ತೀವ್ರಗೊಳಿಸುವ ನಮ್ಮ ಸಂಕಲ್ಪವನ್ನು ಬಲಪಡಿಸಬೇಕು.

*** ಪ್ರಕಾಶ್ ಕಾರಟ್**

ಈ ವರ್ಷದ ಜನವರಿ 26 ನಮ್ಮ ಗಣರಾಜ್ಯದ 69ನೇ ವರ್ಷಾಚರಣೆಯಾಗಿದೆ. ಭಾರತವನ್ನು ಗಣರಾಜ್ಯ ಎಂದು ಘೋಷಿಸಿದ ಸಂವಿಧಾನವು 1950ರಲ್ಲಿ ಇದೇ ದಿನ ಅನುಷ್ಠಾನಕ್ಕೆ ಬಂದಿತ್ತು.

ಒಂದು ಗಣರಾಜ್ಯವೆಂದರೆ ಅದೊಂದು ಮಹಾರಾಜರ ಪ್ರಭುತ್ವವಲ್ಲ; ಅದರ ಬದಲು ಜನತೆಯನ್ನು ಪ್ರತಿನಿಧಿಸುವ ಪ್ರಭುತ್ವವಾಗಿರುತ್ತದೆ. ಅಂದರೆ ಜನರೇ ಸಾರ್ವಭೌಮರಾಗಿರುತ್ತಾರೆ. ನಮ್ಮ ಸಂವಿಧಾನವು ಭಾರತವನ್ನು ಒಂದು ಜಾತ್ಯತೀತ-ಜನತಾಂತ್ರಿಕ ಗಣರಾಜ್ಯವನ್ನಾಗಿ ಮಾಡಿದೆ.

ಇದೇ ಜನತಾಂತ್ರಿಕ ಸಂವಿಧಾನವು ಈಗ ಸುಮಾರು ಐದು ವರ್ಷಗಳ ಹಿಂದೆ, 2014ರಲ್ಲಿ ಮೋದಿ ಸರಕಾರ ಅಧಿಕಾರಕ್ಕೆ ಬಂದಾಗಿನಿಂದ ನಿರಂತರ ದಾಳಿಗೆ ತುತ್ತಾಗುತ್ತಿದೆ. ಇದೀಗ ರಾಜ್ಯಸಭೆಯ ಮುಂದಿರುವ ನಾಗರಿಕತ್ವ ತಿದ್ದುಪಡಿ ಮಸೂದೆ ಈ ದಾಳಿಯ ಇತ್ತೀಚಿನ ಉದಾಹರಣೆಯಾಗಿದೆ. ಸಂವಿಧಾನದಲ್ಲಿ ವ್ಯಾಖ್ಯಾನಿಸಲಾದ ನಾಗರಿಕತ್ವದ ಪರಿಕಲ್ಪನೆಯನ್ನು ಮರುವ್ಯಾಖ್ಯಾನಿಸುವುದು ಹಾಗೂ ನಿರ್ದಿಷ್ಟ ಧಾರ್ಮಿಕತೆಯ ಹಿನ್ನೆಲೆಯನ್ನು ನಾಗರಿಕತ್ವ ನೀಡಲು ಆಧಾರವನ್ನಾಗಿ ಮಾಡುವುದು ಈ ತಿದ್ದುಪಡಿಯ ಉದ್ದೇಶವಾಗಿದೆ. ಅಸ್ಸಾಂ ಮತ್ತು ಇತರ ಈಶಾನ್ಯ ರಾಜ್ಯಗಳ ಒಂದು ಸಾಮೂಹಿಕ ಚಳವಳಿ ಈ ಮಸೂದೆಯನ್ನು ವಿರೋಧಿಸುತ್ತಿದೆ. ಯಾಕೆಂದರೆ ಈ ಮಸೂದೆಯನ್ವಯ ಕಾನೂನಿನಲ್ಲಿ ಆಗುವ ಬದಲಾವಣೆಯು ಸ್ಥಳೀಯ ಸಮುದಾಯಗಳ ಅಸ್ಮಿತೆಯನ್ನು ಹಾಗೂ ಜನಸಂಖ್ಯಾ ಸಂಯೋಜನೆಯನ್ನು ಅಪಾಯಕ್ಕೆ ಒಡ್ಡಲಿದೆ.

ಒಂದು ಸ್ವತಂತ್ರ ನ್ಯಾಯಾಂಗ ವ್ಯವಸ್ಥೆಯನ್ನು ಹಾಗೂ ಉನ್ನತ ನ್ಯಾಯಾಂಗದ ಸಮಗ್ರತೆಯನ್ನು ಸಂವಿಧಾನ ಖಾತರಿಪಡಿಸುತ್ತದೆ. ಮೋದಿ ಸರಕಾರವು ನ್ಯಾಯಾಂಗದ ಸ್ವಾತಂತ್ರ್ಯವನ್ನು ಹರಣ ಮಾಡಲು ಎಳ್ಳಷ್ಟೂ ಮುಲಾಜು ಮಾಡಿಲ್ಲ. ದು ಎರಡು ರೀತಿಗಳಲ್ಲಿ ಆ ಕೆಲಸವನ್ನು ಮಾಡಿದೆ. ಮೊದಲನೆಯದಾಗಿ, ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್‌ಗಳಿಗೆ ನ್ಯಾಯಾಧೀಶರ ನೇಮಕ ವಿಚಾರದಲ್ಲಿ ಹಸ್ತಕ್ಷೇಪ ಮಾಡಲು ಬಯಸುವ ಮೂಲಕ. ಸುಪ್ರೀಂ ಕೋರ್ಟಿನ ಕೊಲೇಜಿಯಂ ಶಿಫಾರಸು ಮಾಡಿದ ನ್ಯಾಯಾಧೀಶರ ನೇಮಕವನ್ನು ರದ್ದುಪಡಿಸಲು ಅಥವಾ ವಿಳಂಬ ಮಾಡುವ ಅಧಿಕಾರವನ್ನು ಅದು ಬಯಸುತ್ತಿದೆ. ಎರಡನೆಯದಾಗಿ, ತನಗೆ ಅನುಕೂಲಕರವಲ್ಲದ ನ್ಯಾಯಾಲಯಗಳ ತೀರ್ಪುಗಳನ್ನು ತಾನು ಒಪ್ಪುವುದಿಲ್ಲ ಎಂದು ಅದು ಘೋಷಿಸಿದೆ. ಶಬರಿಮಲೆ ತೀರ್ಪು ಅದಕ್ಕೊಂದು ಉದಾಹರಣೆ. ಅಯೋಧ್ಯೆ ವಿವಾದದ ಪ್ರಕರಣವನ್ನು ತನಗೆ ಬೇಕಾದ ರೀತಿಯಲ್ಲಿ ಕೈಗೆತ್ತಿಕೊಳ್ಳಬೇಕೆಂದು ಆರ್‌ಎಸ್‌ಎಸ್-ಬಿಜೆಪಿ ಕೂಟ ಮತ್ತು ಕೇಂದ್ರ ಸಚಿವರು ಕೂಡ ಸುಪ್ರೀಂ ಕೋರ್ಟ್ ಮೇಲೆ ಒತ್ತಡ ತರುತ್ತಿದ್ದಾರೆ.

ಸಶಸ್ತ್ರ ಪಡೆಗಳು ಯಾವುದೇ ರಾಜಕೀಯ ಪ್ರಭಾವಕ್ಕೆ ಒಳಪಡದ ರೀತಿಯಲ್ಲಿ ಸಂವಿಧಾನ ಕಟ್ಟುನಿಟ್ಟಿನ ವ್ಯವಸ್ಥೆಯನ್ನು ರೂಪಿಸಿದೆ. ಆದರೆ ಮೋದಿ ಸರಕಾರ ಸಶಸ್ತ್ರ ಪಡೆಗಳನ್ನು ತನ್ನ ರಾಜಕೀಯ ಅಜೆಂಡಾದಲ್ಲಿ ಒಳಪಡಿಸಲು ಹೆಚ್ಚೆಚ್ಚು ಪ್ರಯತ್ನಗಳನ್ನು ಮಾಡುತ್ತಿದೆ. ಭೂಸೇನೆಯ ಈಗಿನ ಮುಖ್ಯಸ್ಥರು ಜಮ್ಮು ಮತ್ತು ಕಾಶ್ಮೀರವೇ ಇರಲಿ ಅಥವಾ ಈಶಾನ್ಯ ರಾಜ್ಯಗಳಿಗೆ ಸಂಬಧಿಸಿದ ವಿಚಾರವೇ ಇರಲಿ, ರಾಜಕೀಯವಾದ ಘೋಷಣೆಗಳನ್ನು ಮಾಡುತ್ತಿದ್ದಾರೆ. ಈ ಪ್ರವೃತ್ತಿಯನ್ನು ಹೀಗೇ ಪ್ರೋತ್ಸಾಹಿಸಿದರೆ ಅದು ಅಪಾಯಕಾರಿ ಆಗಲಿದೆ ಹಾಗೂ ಸಶಸ್ತ್ರ ಪಡೆಗಳ ವಿಶ್ವಾಸಾರ್ಹತೆಯನ್ನು ಕುಂದಿಸಲು ಹಾದಿ ಮಾಡಿಕೊಟ್ಟಂತಾಗುತ್ತದೆ.

ಸಂವಿಧಾನದ ಜಾತ್ಯತೀತ ನೆಲೆಗಟ್ಟು ಉಗ್ರ ದಾಳಿಗೆ ಒಳಗಾಗಿದೆ. ಸಂವಿಧಾನವನ್ನು ಬದಲಾಯಿಸುವ ಕುರಿತ ಮಾತುಗಳಲ್ಲದೆ ಸಂವಿಧಾನದಲ್ಲಿ ಅಂತರ್ಗತವಾಗಿರುವ ಜಾತ್ಯತೀತ ಸಿದ್ಧಾಂತಗಳನ್ನು ನಾಶ ಮಾಡಲು ಘಾತುಕ ಪ್ರಯತ್ನಗಳು ನಡೆಯುತ್ತಿವೆ. ದನವನ್ನು ರಾಷ್ಟ್ರ ಮಾತೆ ಎಂದು ಘೋಷಿಸುವಂತೆ ಉತ್ತರಾಖಂಡ ಮತ್ತು ಝಾರ್ಖಂಡ್‌ನ ಶಾಸಕರು ಇತ್ತೀಚೆಗೆ ಕರೆ ನೀಡಿದ್ದಾರೆ. ಗೋವಿನ ಬಗ್ಗೆ ಇರುವ ಪಾವಿತ್ರ್ಯದ ಧಾರ್ಮಿಕ ನಂಬಿಕೆಯ ಸ್ಥಾನದಲ್ಲಿ 'ರಾಷ್ಟ್ರ ಮಾತೆ' ಸ್ಥಾನವನ್ನು ಪ್ರತಿಷ್ಠಾಪಿಸುವಂತೆ ಬಯಸುವುದು ಇದರ ಉದ್ದೇಶ. ಆರ್‌ಎಸ್‌ಎಸ್ ಮತ್ತು ಹಿಂದುತ್ವ ಶಕ್ತಿಗಳ ಕೈಮೇಲಾಗುವಂತೆ ಬಿಟ್ಟರೆ ಸಂವಿಧಾನದಲ್ಲಿ ಸಾಮಾನ್ಯ ಜನರು ಹೊಂದಿರುವುದಕ್ಕಿಂತ ಮೇಲಿನ ಸ್ಥಾನವನ್ನು ದನಗಳು ಪಡೆಯಲಿವೆ.

ದೊಡ್ಡ ವಾಣಿಜ್ಯೋದ್ಯಮಿಗಳನ್ನು ಸಂತುಷ್ಟಗೊಳಿಸಲು ಮತ್ತು ದೇಶದ ಪ್ರಾಕೃತಿಕ ಸಂಪನ್ಮೂಲಗಳನ್ನು ಖಾಸಗೀಕರಿಸಲು ಮೋದಿ ಸರಕಾರ ಬೇಕಾದ್ದೆಲ್ಲವನ್ನೂ ಮಾಡುತ್ತಿದೆ. ಇದು ಗಣರಾಜ್ಯವನ್ನೇ ಖಾಸಗೀಕರಿಸುವುದಕ್ಕೆ ಸಮನಾಗಿದೆ. ಬಹುಜನರ ಹಿತ ಬಲಿಗೊಟ್ಟು ಕೈ ಬೆರಳೆಣಿಕೆ ಜನರು ಸಮೃದ್ಧರಾಗುವ ಮಟ್ಟ ತತ್ತರಗೊಳಿಸುವ ಪ್ರಮಾಣವನ್ನು ಮುಟ್ಟಿದೆ. ಸಂಪತ್ತು ಮತ್ತು ಅಸಮಾನತೆ ಕುರಿತ ಆಕ್ಸ್‌ಫಾಮ್‌ನ ಇತ್ತೀಚಿನ ವರದಿ ಪ್ರಕಾರ ಭಾರತದ ಶೇಕಡಾ 50ರಷ್ಟು ಬಡವರ ಒಟ್ಟು ಆಸ್ತಿಯಷ್ಟು ಸಂಪತ್ತು ಭಾರತದ ಒಂಬತ್ತು ಬಿಲಿಯಾಧಿಪತಿಗಳ ಕೈಯಲ್ಲಿ ಶೇಖರಣೆಯಾಗಿದೆ. ಶೇಕಡಾ 10ರಷ್ಟು ಮಂದಿ ದೇಶದ ಒಟ್ಟು ರಾಷ್ಟ್ರೀಯ ಸಂಪತ್ತಿನ ಶೇಕಡಾ 77.4ರಷ್ಟು ಸಂಪತ್ತನ್ನು ಹೊಂದಿದ್ದಾರೆ. ದೇಶದ 119 ಬಿಲಿಯಾಧಿಪತಿಗಳು ಸಂಪತ್ತಿಗೆ ಪ್ರತಿದಿನ 2200 ಕೋಟಿ ರೂಪಾಯಿ ಹೆಚ್ಚಾಗಿ ಸೇರಿಸಿಕೊಳ್ಳುತ್ತಿದ್ದಾರೆ. ಇದು, ಸಂವಿಧಾನದ ನಿರ್ದೇಶಕ ತತ್ವಗಳನ್ನೇ ಅಣಕಿಸುವಂತಿದೆ. ಸಮುದಾಯದ ಭೌತಿಕ ಸಂಪನ್ಮೂಲಗಳ ಮಾಲಿಕತ್ವ ಮತ್ತು ನಿಯಂತ್ರಣ ಸರ್ವಜನಗಳ ಕಲ್ಯಾಣವನ್ನು ಈಡೇರಿಸುವಂತಿರಬೇಕು. ಆರ್ಥಿಕ ವ್ಯವಸ್ಥೆಯು ಸಂಪತ್ತು ಮತ್ತು ಉತ್ಪಾದನಾ ಸಾಧನಗಳು ಸರ್ವಜನಗಳ ಪ್ರಗತಿಗೆ ಅಡ್ಡಿಯಾಗುವಂತೆ ಕೇಂದ್ರೀಕರಣವಾಗುವ ರೀತಿಯಲ್ಲಿ ಕಾರ್ಯಾಚರಿಸುವಂತಿರಬಾರದು ಎಂದು ನಿರ್ದೇಶಕ ತತ್ವ ಹೇಳುತ್ತದೆ.

ಸಂಪತ್ತಿನ ಕೇಂದ್ರೀಕರಣಕ್ಕೆ ಚಮಚಾ ಬಂಡವಾಳಶಾಹಿಯು ಅನುಕೂಲ ಮಾಡಿಕೊಡುತ್ತಿರುವುದು ರಫೇಲ್ ವ್ಯವಹಾರ ಪ್ರಕರಣದಲ್ಲಿ ಕಣ್ಣುಕುಕ್ಕುವಂತೆ ಹೊರಕ್ಕೆ ಬಂದಿದೆ. ಮೋದಿ ಸರಕಾರ ಎಷ್ಟೇ ಜೋರಾಗಿ ನಿರಾಕರಿಸುತ್ತಿದ್ದರೂ ದೇಶದ ಬೊಕ್ಕಸಕ್ಕೆ ನಷ್ಟವಾಗಿರುವುದಕ್ಕೆ ಹಾಗೂ ನರೇಂದ್ರ ಮೋದಿಯವರ ನೆಚ್ಚಿನ ಬಂಡವಳಿಗನಿಗೆ ಲಾಭದ ಸುರಿಮಳೆ ಆಗುತ್ತಿರುವುದಕ್ಕೆ ಸಾಕಷ್ಟು ಪುರಾವೆಗಳು ಇವೆ. 36 ರಫೇಲ್ ವಿಮಾನಗಳಿಗೆ ಅತಿಯಾದ ಬೆಲೆ ತೆತ್ತಿರುವ ಹೊಸ ಒಪ್ಪಂದಕ್ಕ ಸಹಿ ಹಾಕಿರುವುದನ್ನು ದಿ ಹಿಂದೂ ಪತ್ರಿಕೆಯಲ್ಲಿ ಅದರ ಹಿಂದಿನ ಸಂಪಾದಕರಾದ ಎನ್.ರಾಮ್ ರವರ ಇತ್ತೀಚಿನ ವರದಿ ಬಹಿರಂಗ ಪಡಿಸಿದೆ.

ರಾಷ್ಟ್ರೀಯ ಸಾರ್ವಭೌಮತೆ ಮತ್ತು ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳುವುದು ಸ್ವಾತಂತ್ರ್ಯ ಹೋರಾಟದ ಅತ್ಯಂತ ಪ್ರಬಲ ಪರಂಪರೆಗಳಲ್ಲೊಂದು. ಆದರೆ ಅಮೆರಿಕ ಸಂಯುಕ್ತ ಸಂಸ್ಥಾನದೊಂದಿಗೆ ವ್ಯೂಹಾತ್ಮಕ ಸಂಬಂಧವನ್ನು ಆಳಗೊಳಿಸುವ ಮೂಲಕ ಮೋದಿ ಸರಕಾರ ಆ ಸಾರ್ವಭೌಮತ್ವವನ್ನೇ ಗಂಭೀರ ರಾಜಿಗೆ ಒಳಪಡಿಸಿದೆ. ಸ್ವಾತಂತ್ರ್ಯ ಹೋರಾಟ ಮತ್ತು ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟದಲ್ಲಿ ಪಾಲ್ಗೊಂಡ ಯಾವುದೇ ದಾಖಲೆ ಇಲ್ಲದ ಒಂದು ರಾಜಕೀಯ ಪಕ್ಷ ಮತ್ತು ಸಿದ್ಧಾಂತವು ಭಾರತದ ಸಶಸ್ತ್ರ ಪಡೆಗಳು ಮತ್ತು ವ್ಯೂಹಾತ್ಮಕ ಹಿತಾಸಕ್ತಿಗಳನ್ನು ಅಮೆರಿಕದ ಪದತಲದಲ್ಲಿ ಇರಿಸಿದೆ. ಅಮೆರಿಕದ ವಾಯು ಪಡೆ ಮತ್ತು ನೌಕಾ ಪಡೆಯ ಹಡಗುಗಳು ಭಾರತದ ನೆಲೆಗಳಿಂದ ಕಾರ್ಯಾಚರಿಸಲು ಅವಕಾಶ ನೀಡುವುದಕ್ಕೆ ಈ ಸರಕಾರಕ್ಕೆ ಯಾವುದೇ ಹಿಂಜರಿಕೆ ಇಲ್ಲ.

ಹಿಂದುತ್ವ ಅಜೆಂಡಾದಿಂದ ಪ್ರೇರಿತವಾದ ಸರ್ವಾಧಿಕಾರಶಾಹಿ ಆಕ್ರಮಣಗಳು ಸಂವಿಧಾನದ ಯಾವುದೇ ಅಂಶವನ್ನೂ ಅಥವಾ ಅದರ ಅಡಿಯಲ್ಲಿ ನಡೆಯುವ ಸಂಸ್ಥೆಗಳನ್ನೂ ಬಿಟ್ಟಿಲ್ಲ. ಒಳಗಿನಿಂದಲೇ ಬುಡಮೇಲು ಕೆಲಸ ನಡೆಯುತ್ತಿದೆ. ರಾಜ್ಯಪಾಲರಂಥ ಸಾಂವಿಧಾನಿಕ ಸ್ಥಾನಗಳಲ್ಲಿರುವವರು ಸಂವಿಧಾನ-ವಿರೋಧಿ ಚಿಂತನೆಗಳನ್ನು ಹರಡುತ್ತಿದ್ದಾರೆ. ಕೆಲವು ಕೇಂದ್ರೀಯ ಮತ್ತು ರಾಜ್ಯ ವಿಶ್ವವಿದ್ಯಾನಿಲಯಗಳ ಕುಲಪತಿಗಳು ಜಾತ್ಯತೀತ-ವಿರೋಧಿ ಮತ್ತು ಪ್ರಜಾಪ್ರಭುತ್ವ-ವಿರೋಧಿ ಧಾಟಿಯಲ್ಲಿ ಮಾತನಾಡುತ್ತಿದ್ದಾರೆ. ಹಿಂದುತ್ವ-ಪರ ಧೋರಣೆ ಹೊಂದಿದವರೊಬ್ಬರು ಸಿಬಿಐ ಹಂಗಾಮಿ ನಿರ್ದೇಶಕರಾಗಿದ್ದಾರೆ.. ಈ ಪಟ್ಟಿ ದಿನದಿಂದ ದಿನಕ್ಕೆ ಬೆಳೆಯುತ್ತಲೇ ಇದೆ.

ನಾಗರಿಕರ ಮೂಲಭೂತ ಹಕ್ಕುಗಳ ಮೇಲಿನ ದಾಳಿ ಶರವೇಗದಲ್ಲಿ ಮುಂದುವರಿದಿದೆ. ಭಿನ್ನಮತ ಹೊಂದಿದವರನ್ನು ಮತ್ತು ಬುದ್ಧಿಜೀವಿಗಳನ್ನು ದೇಶ-ವಿರೋಧಿಗಳು ಎಂದು ಬಿಂಬಿಸಲಾಗುತಿದೆ. ಹಾಗೂ ಅವರ ವಿರುದ್ಧ ದೇಶದ್ರೋಹದ ಕಲಮುಗಳನ್ನು ಅನ್ವಯಿಸಲಾಗುತ್ತಿದೆ. ಆದರೆ ತಥಾಕಥಿತ ಗೋರಕ್ಷಕರ ಕಾವಲುಕೋರತನ ಮತ್ತು ದೊಂಬಿ ಹತ್ಯೆಗಳನ್ನು ಇದು ಬಾಧಿಸುತ್ತಿಲ್ಲ.

ಗಣರಾಜ್ಯೋತ್ಸವ ಆಚರಿಸುವ ಸಂದರ್ಭದಲ್ಲಿ ನಮ್ಮನ್ನು ಆವರಿಸಿರುವ ಉತ್ಸಾಹಹೀನ ಚಿತ್ರವಿದು. ಜಾತ್ಯತೀತ-ವಿರೋಧಿ, ಪ್ರಜಾಪ್ರಭುತ್ವ-ವಿರೋಧಿ ಮತ್ತು ಜನ-ವಿರೋಧಿ ಆಡಳಿತದ ವಿರುದ್ಧ ಹೋರಾಟವನ್ನು ತೀವ್ರಗೊಳಿಸುವ ಸಂಕಲ್ಪವನ್ನು ಇದು ಬಲಪಡಿಸಬೇಕು. ಆದ್ದರಿಂದ ಜನತಾಂತ್ರಿಕ, ಜಾತ್ಯತೀತ ಮತ್ತು ಸಾಂವಿಧಾನಿಕ ಮೌಲ್ಯಗಳನ್ನು ನೆಚ್ಚುವ ಎಲ್ಲಾ ನಾಗರಿಕರು 2020ರಲ್ಲಿ ಮುಂದಿನ ಗಣರಾಜ್ಯ ದಿನವು ಈಗಿನ ಆಡಳಿತದಡಿ ನಡೆಯದೆ ಒಂದು ಜಾತ್ಯತೀತ ಸರಕಾರದಡಿ ನಡೆಯುವಂತೆ ಮಾಡುವ ಪಣ ತೊಡುವುದು ಅನಿವಾರ್ಯವಾಗಿದೆ. ●





.... ಜನತಾಂತ್ರಿಕ, ಜಾತ್ಯತೀತ ಮತ್ತು ಸಾಂವಿಧಾನಿಕ ಮೌಲ್ಯಗಳನ್ನು ನೆಚ್ಚುವ ಎಲ್ಲಾ ನಾಗರಿಕರು 2020ರಲ್ಲಿ ಮುಂದಿನ ಗಣರಾಜ್ಯ ದಿನವು ಈಗಿನ ಆಡಳಿತದಡಿ ನಡೆಯದೆ ಒಂದು ಜಾತ್ಯತೀತ ಸರಕಾರದಡಿ ನಡೆಯುವಂತೆ ಮಾಡುವ ಪಣ ತೊಡುವುದು ಅನಿವಾರ್ಯವಾಗಿದೆ.

ಸಾಹಿತ್ಯ, ರಾಜಕೀಯ ಮತ್ತು ಚಳುವಳಿ

ಈ ವಾರ ರಾಜ್ಯದಲ್ಲಿ ಎರಡು ಸಾಹಿತ್ಯ ಕಾರ್ಯಕ್ರಮಗಳು ನಡೆದವು. ಧಾರವಾಡದಲ್ಲಿ ಜನವರಿ 19–20 ರಂದು ನಡೆದ 'ಸಾಹಿತ್ಯ ಸಂಭ್ರಮ' ಒಂದು. ಅದೇ ದಿನಗಳಲ್ಲಿ ಮೈಸೂರಿನಲ್ಲಿ ನಡೆದ 'ಭೈರಪ್ಪ ಸಾಹಿತ್ಯೋತ್ಸವ' ಇನ್ನೊಂದು. ಒಂದು ಕಾರ್ಪೊರೆಟ್–ಪ್ರಾಯೋಜಿತ ಜಯಪುರ ಲಿಟ್ ಫೆಸ್ಟ್ ಮಾದರಿಯ ಸ್ವಯಂ–ಘೋಷಿತ 'ನಡುಪಂಥೀಯ' ಸಾಹಿತ್ಯ ಸಮ್ಮೇಳನ. ಇನ್ನೊಂದು ಬಲಪಂಥೀಯ ವೇದಿಕೆ. ಎರಡೂ ಹಲವು ಕಾರಣಗಳಿಗೆ ರಾಜ್ಯದ ಜನತೆಯ ಗಮನ ಸೆಳೆಯಿತು. ಎರಡೂ ಕಡೆ 'ಸಾಹಿತ್ಯ, ರಾಜಕೀಯ, ಚಳುವಳಿ'ಗಳ ನಡುವಣ ಸಂಬಂಧಗಳ ವಿವಿಧ ಆಯಾಮಗಳ ಬಗ್ಗೆ ಚರ್ಚೆ ಆಯಿತು. ಈ ಬಗ್ಗೆ ರಾಜ್ಯದಲ್ಲಿ ಚರ್ಚೆ–ವಿವಾದ ಹೊಸದೇನಲ್ಲ. ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ–ದಲಿತ ಅವಧಿಗಳಲ್ಲಿ ನಡೆಯುತ್ತಾ ಬಂದ ಚರ್ಚೆ ಇದು. 'ಸಾಹಿತ್ಯ ಸಂಭ್ರಮ'ವನ್ನು ಉದ್ಘಾಟಿಸಿ ಮಾತನಾಡಿದ ಬರಗೂರು ರಾಮಚಂದ್ರಪ್ಪ ಅವರ ಭಾಷಣದಲ್ಲಿ ವ್ಯಕ್ತವಾದದ್ದು ಬಹುಶಃ ಇತ್ತೀಚಿನ ವರ್ಷಗಳಲ್ಲಿ ಈ ಬಗ್ಗೆ ಸರಿಯಾದ ಸಮಗ್ರ ದೃಷ್ಟಿಕೋಣ

ಸಂಭ್ರಮ–ಸಂಕಟ ಒಳಗೊಳ್ಳದ ಗ್ರಹಿಕೆಯ ಕ್ರಮ ಅಕ್ರಮ: ಬರಗೂರು

(ಧಾರವಾಡದ ಸಾಹಿತ್ಯ ಸಂಭ್ರಮದಲ್ಲಿ ಮಾಡಿದ ಭಾಷಣದ ಆಯ್ದ ಭಾಗಗಳು) ಕೃಪೆ : ನಾಡೋಜ ಬರಗೂರು ಪ್ರತಿಷ್ಠಾನ(ರಿ) ಪ್ರಕಟಣೆ

'ಸಾಹಿತ್ಯ ಸಂಭ್ರಮ' ವೆಂಬ ಹೆಸರು ನನ್ನಲ್ಲಿ ಅನೇಕ ಪ್ರಶ್ನೆಗಳನ್ನು ಹುಟ್ಟು ಹಾಕುತ್ತದೆ. ಒಂದು ಆಶಯವಾಗಿ 'ಸಂಭ್ರಮ' ವೆಂಬ ಕಲ್ಪನೆ ಸರಿಯಾದುದಾದರೂ ಕಟುವಾಸ್ತವಗಳ ಕಥನ ಬೇರೆಯದನ್ನೇ ಹೇಳುತ್ತಿದೆ. ನಮ್ಮ ಸಾಮಾಜಿಕ ಬದುಕು ಏಕರೇಖಾತ್ಮಕವಲ್ಲ. ಏಕಮುಖೀ ಚಲನೆಯನ್ನೂ ಹೊಂದಿಲ್ಲ. ಸಂಭ್ರಮದ ಬೆನ್ನ ಹಿಂದೆಯೇ ಸಂಕಟ ಹಿಂಬಾಲಿಸುತ್ತದೆ. ಮಾತಿನ ಹಿಂದೆ ಮೌನ ಬೆನ್ನತ್ತುತ್ತದೆ. ಸಂತೋಷದ ಹಿಂದೆ ವಿಷಾದ ಉಕ್ಕಿ ಬರುತ್ತದೆ. ಈ ಕ್ರಮವು ಹಿಂದೆ ಮುಂದೆಯೂ ಆಗಬಹುದು. ಹೀಗಾಗಿ ಸಂಭ್ರಮ–ಸಂಕಟ, ಸಂತೋಷ–ವಿಷಾದ, ಮಾತು–ಮೌನಗಳನ್ನು ಒಟ್ಟಿಗೇ ಒಳಗೊಳ್ಳದ ಗ್ರಹಿಕೆಯ ಕ್ರಮವು ಒಂದು ರೀತಿಯ 'ಅಕ್ರಮ ಸಂತಾನ' ವಾಗುತ್ತದೆ. ನಮ್ಮ ಬದುಕೆನ್ನುವುದೇ ಹೀಗೆ; ವೈರುಧ್ಯ ಮತ್ತು ವೈಪರೀತ್ಯಗಳನ್ನು ಒಡಲೊಳಗಿಟ್ಟುಕೊಂಡು ಕುದಿವ ಕಡಲಾಗುವ ಅನುಭವಗಳಿಗೆ, ಕೆಲವೊಮ್ಮೆ ಮಾತು ಸಾಕಾಗುವುದಿಲ್ಲ. ನರಳುವ ಕರುಳು –ಮೌನವನ್ನೇ ಮಾತಿಗೆ ದಾನ ಮಾಡುವ ವಿಪರ್ಯಾಸಕ್ಕೆ, ನಿಘಂಟುಗಳಲ್ಲಿ ಅರ್ಥ ಸಿಗುವುದಿಲ್ಲ. ಇಲ್ಲಿ ಹಣತೆ ಹಚ್ಚಲು ಹೋದಾಗ ಚಿರತೆ ಎದುರಾಗುತ್ತದೆ. ಕುರಿ ಹಿಂಡಿನ ತಾಣದಲ್ಲಿ ತೋಳ ಥಟ್ಟನೆ ಹುಟ್ಟುತ್ತದೆ. ಬಟ್ಟೆ ಕೇಳುವ ಜನರೆದುರು ಚಿಟ್ಟೆ ಹಾರಿಸಲಾಗುತ್ತದೆ. ಹಸಿವು ಹಿಂಡುತ್ತಿರುವ ಜನರ ಹೊಟ್ಟೆಗೆ ಹಿಟ್ಟುಕೊಡುವ ಬದಲು ಭ್ರಮೆಯ ಕೊಟ್ಟಿಗೆಗಳನ್ನು ಕಟ್ಟಲಾಗುತ್ತದೆ. ಕೊಟ್ಟಿಗೆಯಲ್ಲಿ ಕಟ್ಟಿದ ಹೋರಿಯ ಹೂಂಕಾರದ ಎದುರು, ಹಸಿವೆಂಬ ಹಸು ಬೆಚ್ಚಿ ಬಿದ್ದು ಕೆಚ್ಚಲು ಖಾಲಿಯಾಗುತ್ತದೆ. ಎದ್ದುಬಿದ್ದರೆ ಕಾಗೆಯನ್ನು ಕಾಣುವ ಸಾಮಾನ್ಯರಿಗೆ, ಕಾಣದ ಕೋಗಿಲೆಯ ಕಂಠಪಾಠ ಮಾಡಲಾಗುತ್ತದೆ. ಕಡೆಗೆ ಸಂಭ್ರಮ– ಸಂಕಟಗಳೆಲ್ಲ ಕಂಠಪಾಠವಾಗಿ, ಕಂಠಸ್ಥ ಮಾತ್ರವಾಗಿ, ಮನಸೆಂಬುದು ಮಾಯಾಮೃಗವಾಗುತ್ತದೆ. ಆದ್ದರಿಂದ ನಾವು ನಮ್ಮ ಕಾಲದ ವೈರುಧ್ಯ, ವೈಪರೀತ್ಯ, ವಿಪರ್ಯಾಸಗಳನ್ನು ಒಟ್ಟಿಗೇ ಅರ್ಥಮಾಡಿಕೊಳ್ಳುವ, ಅರ್ಥೈಸುವ, ಪ್ರಜ್ಞೆಯನ್ನು ಪ್ರಕ್ರಿಯಾ ರೂಪದಲ್ಲಿ ಕಾಪಾಡಿಕೊಳ್ಳಬೇಕಾಗಿದೆ. ಇಲ್ಲದಿದ್ದರೆ ಕಂಠಪಾಠದಲ್ಲಿ ಕೊರಳು ಸಂಭ್ರಮಿಸುತ್ತದೆ. ಕರುಳು ಕಳೆದು ಹೋಗುತ್ತದೆ.

––*–*–*

ಕಾಗೆ ನಮ್ಮ ಕಾಲದ ಗುರು!

ನಮ್ಮದು ಶ್ರೀಗಂಧದ ನಾಡೂ ಹೌದು; ಜಾಲಿಯ ಮರಗಳ ನಾಡೂ ಹೌದು. ಕೃಷ್ಣ ಕಾವೇರಿಯರ ನಾಡೂ ಹೌದು; ಬತ್ತಿದ ಹಳ್ಳಕೊಳ್ಳಗಳ ನಾಡೂ ಹೌದು. ತುಂಬಿದ ಕಡಲ ನಾಡೂ ಹೌದು; ಬಿರುಕು ಬಿಟ್ಟ ಕೆರೆಗಳ ನಾಡೂ ಹೌದು. ಕೋಗಿಲೆ ಕಂಠದ ನಾಡೂ ಹೌದು; ನಿತ್ಯ ಕಾಣುವ ಕಾಗೆಗಳ ನಾಡೂ ಹೌದು. ಆದ್ದರಿಂದ ಜಾಲಿಯ ಮರಗಳ ಬಗ್ಗೆ ಶ್ರೀಗಂಧಕ್ಕೆ ಗೌರವ ಮೂಡಬೇಕು. ಬತ್ತಿದ ಹಳ್ಳಕೊಳ್ಳಗಳ ಕುರಿತು ಕೃಷ್ಣ ಕಾವೇರಿಯರ ಕರುಳು ಕರಗಬೇಕು. ಬಿರುಕು ಬಿಟ್ಟ ಕೆರೆಗಳ ಕಣ್ಣೀರು ಕಂಡು ಕಡಲ ಒಡಲಲ್ಲಿ ವಾತ್ಸಲ್ಯ ಮೂಡಬೇಕು. ಕಾಗೆಯ ಕಾರುಣ್ಯ, ಕೋಗಿಲೆಯ ಕಂಠದೊಳಗೆ ಒಂದಾಗಬೇಕು.

ಕಾಗೆಯ ಕಾರುಣ್ಯವನ್ನು ಕುರಿತು ನಾನಿಲ್ಲಿ ಹೇಳಲೇಬೇಕು. ಕೋಗಿಲೆ ಮೊಟ್ಟೆಯಿಡುತ್ತದೆ. ಆದರೆ ಮರಿ ಮಾಡುವುದಿಲ್ಲ. ಕೋಗಿಲೆಯ ಮೊಟ್ಟೆಗಳ ಮೇಲೆ ಕಾವಿಗೆ ಕೂತ ಕಾಗೆ, ಕೋಗಿಲೆ ಮರಿಗಳಿಗೆ ಬಾಳಿನ ಕಣ್ಣು ಕೊಡುತ್ತದೆ. ಈ ಮೂಲಕ ಕಾಗೆ ಕಾರುಣ್ಯದ ಕಣ್ಣಾಗುತ್ತದೆ. ಕಾಗೆ ಮತ್ತು ಕೋಗಿಲೆಯ ಸಂಬಂಧ ಸೌಹಾರ್ದದ ಸಹಜ ಸಂಕೇತವಾಗುತ್ತದೆ. ಕಾಗೆ– ಕೋಗಿಲೆಗಳ ನೈಸರ್ಗಿಕ ಸಹಜ ಸೌಹಾರ್ದವು ನಮ್ಮ ಸಮಾಜದ ಜೀವ ಶಕ್ತಿಯಾದಾಗ ನಮ್ಮದು ಹೆಮ್ಮೆ ಪಡುವ ನಿಜದ ನಾಡಾಗುತ್ತದೆ. ಆದರೆ ಕೋಗಿಲೆಯ ಕಂಠಸಿರಿಯನ್ನು ಹಾಡಿ ಹೊಗಳುತ್ತ ಕಾಗೆಯ ಕಂಠವನ್ನು ಕರ್ಕಶವೆನ್ನುವ ವಿಪರ್ಯಾಸ ನಮ್ಮೆದುರಿಗಿದೆ. ಹೀಗಾಗಿ ಸಾಕ್ಷರ ಕವಿಗಳೂ, ಧಾರ್ಮಿಕ ಕಲಿಗಳೂ, ರಾಜಕೀಯ ಹುಲಿಗಳು

ಸಾಹಿತ್ಯಕ್ಕೂ ರಾಜಕೀಯಕ್ಕೂ ಸಂಬಂಧವಿಲ್ಲವೇ ?

ಪಂಪನ ಆದಿಪುರಾಣದಿಂದ ಇಂದಿನ ಮೌಖಿಕ ಮಲೆ ಮಾದೇಶ್ವರ ಕಾವ್ಯದವರೆಗೂ ಅಧಿಕಾರ–ಧರ್ಮ–ಲೈಂಗಿಕತೆ ಇವುಗಳನ್ನು ಒಳಗೊಳ್ಳದ ಯಾವ ಸಾಹಿತ್ಯ ಕೃತಿಯೂ ಇಲ್ಲ.

ಭಾನುವಾರ ಮುಕ್ತಾಯಗೊಂಡ ಮೂರು ದಿನಗಳ 'ಸಾಹಿತ್ಯ ಸಂಭ್ರಮ'ದ ಸಮಾರೋಪದ ವರದಿ ಓದಿ (ಪ್ರ.ವಾ., ಜ. 21) ತುಂಬಾ ತಲ್ಲಣವಾಯಿತು. ತಮ್ಮ ಆಶಯ ಭಾಷಣದಲ್ಲಿ ಬರಗೂರು ರಾಮಚಂದ್ರಪ್ಪ ಕಳಕಳಿಯಿಂದ ಪ್ರಸ್ತಾಪಿಸಿದ 'ಸಂಭ್ರಮ–ಸಂಕಟಗಳ ದ್ವಂದ್ವ ಅಸ್ತಿತ್ವ' ಇಷ್ಟು ಬೇಗ ವಾಸ್ತವವಾಯಿತೆ ಎಂದು ಸಂಕಟವಾಯಿತು.

ಡಾ. ಶಿವ ವಿಶ್ವನಾಥನ್ ದೊಡ್ಡ ವಿದ್ವಾಂಸರು; ಪ್ರತಿಯೊಂದು ಸಂಗತಿಯನ್ನೂ ಬಿಡಿ ಬಿಡಿಯಾಗೇ ನೋಡದೆ ಅದನ್ನು ಅನೇಕ ಭಿನ್ನ ದೃಷ್ಟಿಕೋನಗಳಿಂದ ನೋಡಬೇಕು ಎಂದು ನಂಬಿರುವವರು. ಅವರ ವಿಷಯ 'ರಾಷ್ಟ್ರೀಯತೆ...' ಮತ್ತು ಈ ವಿಷಯ ಕುರಿತು ಅನೇಕ ಲೇಖನಗಳನ್ನೂ ಅವರು ಬರೆದಿದ್ದಾರೆ. 'ರಾಷ್ಟ್ರೀಯತೆ' ಎಂಬುದು ಸ್ವಯಂಸಿದ್ಧ ಒಂದು ಸತ್ಯವಲ್ಲ; ಕಾಲಕಾಲಕ್ಕೆ ಪ್ರಭುತ್ವದಿಂದಾಗುವ ಭೌಗೋಳಿಕ ಬದಲಾವಣೆಗಳನ್ನು ಅನುಸರಿಸಿ, ನಾವು ನಮ್ಮ ಅಗತ್ಯಕ್ಕೆ ತಕ್ಕಂತೆ ಕಟ್ಟಿಕೊಳ್ಳುವ ಒಂದು ಅಮೂರ್ತ ರಚನೆ– ಎಂಬುದು ಅವರ ಮುಖ್ಯ ವಾದ.

ಈ ವಾದವನ್ನು ಬೆಳೆಸುವಾಗ ಅವರು ಅಸ್ಸಾಮಿನಲ್ಲಿ ಒಂದು ಕಾಲಖಂಡದಲ್ಲಿ ಕಂಡ ಸೈನಿಕರ ವರ್ತನೆಯನ್ನೂ ಪ್ರಸ್ತಾಪಿಸಿರಬಹುದು ಮತ್ತು ಇದು ಅನವಶ್ಯಕವಾಗಿದ್ದು ಅನೇಕರಿಗೆ ನೋವನ್ನು ಉಂಟುಮಾಡಿರಬಹುದು ('ಬಹುದು' ಏಕೆಂದರೆ ನಾನು ಅವರ ಉಪನ್ಯಾಸವನ್ನು ನೇರವಾಗಿ ಕೇಳಲಾಗಲಿಲ್ಲ). ಅದನ್ನು ಸಭೆಯಲ್ಲಿಯೇ ಅನೇಕರು ಖಂಡಿಸಿದ್ದರು. ಆನಂತರ, ಆ ಪ್ರಸ್ತಾಪವನ್ನು ಕುರಿತು ಆ ಕಾರ್ಯಕ್ರಮದ ಸರ್ವಾಧ್ಯಕ್ಷರಾದ ರಾಘವೇಂದ್ರ ಪಾಟೀಲರು ಎರಡು ಬಾರಿ ಕ್ಷಮೆಯನ್ನೂ ಕೇಳಿದ್ದರು. ಇಷ್ಟಾದ ಮೇಲೂ ಸಮಾರೋಪದ ಸಂದರ್ಭದಲ್ಲಿ 'ಮೈಕ್, ಕುರ್ಚಿ ಕಿತ್ತೆಸೆದು ದಾಂಧಲೆ' ಮಾಡಿದುದು ಅನವಶ್ಯಕ ಹಾಗೂ ಖಂಡನೀಯ.

ಇದೇ ಬಗೆಯ ಅಸಹನೆ ಮೊದಲ ದಿನ, ಸಾಹಿತಿ ಲಕ್ಷ್ಮಣ ಗಾಯಕವಾಡ್ ತಮ್ಮ ಜನಾಂಗದ ಮೇಲಾಗಿರುವ–ಆಗುತ್ತಿರುವ ಅನ್ಯಾಯವನ್ನು ವಿವರಿಸುತ್ತಿದ್ದಾಗಲೂ ಕಂಡುಬಂದಿತು. ಅವರ ಭಾಷಣದ ಮಧ್ಯೆಯೇ ಕೆಲವರು ಎದ್ದು ನಿಂತು 'ರಾಜಕೀಯದ ಬಗ್ಗೆ ಮಾತನಾಡಬೇಡಿ' ಎಂದು ಆಗ್ರಹಿಸಿದ್ದರು. ಧಾರವಾಡದಲ್ಲಿಯೇ ಹತ್ತು



ದಿನಗಳ ಮೊದಲು ನಡೆದ ಸಮ್ಮೇಳನದಲ್ಲಿಯೂ ಮಾಳವಿಕಾ ಅವರು ಮಾತನಾಡುತ್ತಿದ್ದಾಗ ಮಧ್ಯೆಯೇ ಕೆಲವರು ಅವರ ಮಾತುಗಳನ್ನು ಪ್ರತಿಭಟಿಸಿದ್ದರು. ಎಂದರೆ, ನಾವು ಒಪ್ಪದ ವಿಚಾರಗಳನ್ನು ಕೇಳಲೂ ಸಿದ್ಧರಿಲ್ಲದಷ್ಟು ಇಂದಿನ ಸಮಾಜದಲ್ಲಿ ಅಸಹನೆ ತುಂಬಿರುವುದು ಶೋಚನೀಯ.

ವೈಚಾರಿಕ ಅಸಹನೆಯ ಬೇರುಗಳು ಎಷ್ಟು ಆಳವಾಗಿ ಹೋಗಿವೆ ಎಂಬುದಕ್ಕೆ ಮತ್ತೊಂದು ಉದಾಹರಣೆ. ಧಾರವಾಡದಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ನಡೆಯಬೇಕಾದ ಗೋಷ್ಠಿಗಳ ವಿಷಯಗಳನ್ನು ನಿರ್ಧರಿಸಲು ಅಧ್ಯಕ್ಷರು ನೇಮಿಸಿದ್ದ ಸಮಿತಿಯಲ್ಲಿ ನಾನೂ ಇದ್ದೆ. ಸಮಿತಿಯ ಸಭೆಯಲ್ಲಿ ಸರ್ವಸಮ್ಮತಿಯಿಂದ, 'ದೇಶದ್ರೋಹ' ಎಂಬ ಅಪರಾಧವನ್ನು ಕುರಿತ 'ಐಪಿಸಿ 124' ಇದನ್ನು ಚರ್ಚೆಗಾಗಿ ಆಯ್ಕೆ ಮಾಡಿದ್ದೆವು. (ಬ್ರಿಟಿಷ್ ಸರ್ಕಾರ ತನ್ನ ಅಧಿಕಾರವನ್ನು ಬಿಗಿಪಡಿಸಿಕೊಳ್ಳಲು ರೂಪಿಸಿದ್ದ ಈ ಕಾನೂನು ಇಂದಿಗೂ ಹಾಗೆಯೇ ಇದೆ; ಇದರಡಿ 1922ರಲ್ಲಿ ಬಂಧಿತರಾಗಿದ್ದ ಗಾಂಧೀಜಿ, ಇದನ್ನು 'ಪ್ರಜೆಗಳ ಸ್ವಾತಂತ್ರ್ಯಹರಣ ಮಾಡುವ ಉದ್ದೇಶದಿಂದ ರಚಿಸಲಾಗಿರುವ, ರಾಜಕೀಯ ಸಂಗತಿಗಳಿಗೆ ಸಂಬಂಧಿಸಿದ ಐಪಿಸಿಯ ಶಾಸನಗಳಲ್ಲಿ ಇದು (ಸೆಕ್ಷನ್ 124 ಎ) ರಾಜನಂತಿದೆ' ಎಂದು ನ್ಯಾಯಾಲಯದಲ್ಲಿ ಮಂಡಿಸಿದ್ದರು. ಈ ಶಾಸನಕ್ಕೆ ತಿದ್ದುಪಡಿಗಳ ಅವಶ್ಯಕತೆ ಇದೆಯೆ ಇಲ್ಲವೆ ಎಂಬುದನ್ನು ಚರ್ಚಿಸುವುದು ಸಮಿತಿಯ ಉದ್ದೇಶವಾಗಿತ್ತು. ಸಮ್ಮೇಳನದ ಆಹ್ವಾನ ಪತ್ರಿಕೆ ಬಂದಾಗ ಈ ವಿಷಯವೇ ಇರಲಿಲ್ಲ.

ನನಗೊಬ್ಬರು ತಿಳಿಸಿದಂತೆ, ಕರ್ನಾಟಕದ ಸಂಸದರೊಬ್ಬರು ಪರಿಷತ್ತಿನ ಅಧ್ಯಕ್ಷರನ್ನು ಸಂಪರ್ಕಿಸಿ, 'ಸಾಹಿತ್ಯಕ್ಕೂ ಕಾನೂನುಗಳಿಗೂ ಏನು ಸಂಬಂಧ? ಇದನ್ನು ತೆಗೆದುಹಾಕದಿದ್ದರೆ ನಮ್ಮೆಲ್ಲರ ಪ್ರತಿಭಟನೆ ಎದುರಿಸಬೇಕಾಗುತ್ತದೆ' ಎಂದು ಎಚ್ಚರಿಸಿದರಂತೆ (ಬಹುಶಃ, ಸಮ್ಮೇಳನಕ್ಕೆ ಬರುವ ಜನರ ಕ್ಷೇಮ ಪರಿಗಣಿಸಿ ಅಧ್ಯಕ್ಷರು ಈ ವಿಷಯ ಕೈಬಿಟ್ಟಿರಬೇಕು).

ಅರ್ಥಾತ್, ಸಾಹಿತ್ಯಕ್ಕೂ ರಾಜಕೀಯಕ್ಕೂ ಸಂಬಂಧವಿಲ್ಲ; ಸಾಹಿತ್ಯಕ್ಕೂ ಶಾಸನಸಂಹಿತೆಗೂ ಸಂಬಂಧವಿಲ್ಲ; ಸಾಹಿತ್ಯಕ್ಕೂ ಧರ್ಮಕ್ಕೂ ಸಂಬಂಧವಿಲ್ಲ ಎಂದು ಅಧಿಕಾರದ ಹಮ್ಮಿನಲ್ಲಿ ಆಗ್ರಹಿಸತೊಡಗಿದರೆ, 'ಧಾರವಾಡ ಸಾಹಿತ್ಯ ಸಂಭ್ರಮದ ಚಟುವಟಿಕೆ ಸಾಹಿತ್ಯಕ್ಕೆ ಸೀಮಿತಗೊಳಿಸದಿದ್ದರೆ ಸಂಭ್ರಮವೂ ಇರುವುದಿಲ್ಲ, ಸಾಹಿತಿಗಳೂ ಇರುವುದಿಲ್ಲ' (ಪ್ರ.ವಾ., ಜ. 21) ಎಂದು ಬೆದರಿಕೆ ಹಾಕಲು ಪ್ರಾರಂಭಿಸಿದರೆ, ಯಾವ ಬಗೆಯ ಸಾಹಿತ್ಯವು ಉಳಿಯುತ್ತದೆ, ಬೆಳೆಯುತ್ತದೆ? ಮತ್ತೊಬ್ಬರು ಅಧಿಕಾರಯುತವಾಗಿ 'ಕವಿಗಳು, ಸರ್ಕಾರವು ಜಾರಿಗೆ ತಂದಿರುವ ಯೋಜನೆಗಳನ್ನು ಕುರಿತು ಕವನಗಳನ್ನು ರಚಿಸಬೇಕು' ಎಂದು ಅಪ್ಪಣೆ ಕೊಟ್ಟರೆ, ಹೇಗೆ ಪ್ರತಿಕ್ರಿಯಿಸಬೇಕು ಎಂಬುದೇ ಗೊತ್ತಾಗುವುದಿಲ್ಲ (ಪಂಪನ ಆದಿಪುರಾಣದಿಂದ ಇಂದಿನ ಮೌಖಿಕ ಮಲೆ ಮಾದೇಶ್ವರ ಕಾವ್ಯದವರೆಗೂ ಅಧಿಕಾರ–ಧರ್ಮ–ಲೈಂಗಿಕತೆ ಇವುಗಳನ್ನು ಒಳಗೊಳ್ಳದ ಯಾವ ಸಾಹಿತ್ಯ ಕೃತಿಯೂ ಇಲ್ಲ).

ಮತ್ತೆ 'ಸಂಭ್ರಮ'ಕ್ಕೆ ಹಿಂತಿರುಗಿದರೆ, ಈ ಬಾರಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು, ಯುವಜನ ಭಾಗವಹಿಸಿದ್ದರು; ಅವರೆಲ್ಲರಿಗೂ ಸಾಹಿತ್ಯ–ಸಮಾಜ ಕುರಿತು ಹೊಸತನ್ನು ತಿಳಿದುಕೊಳ್ಳಬೇಕು, ತಮಗಿರುವ ಸಂಶಯಗಳನ್ನು ಕುರಿತು ಮುಕ್ತವಾಗಿ ಚರ್ಚಿಸಬೇಕು ಎಂಬ ತಹತಹವಿತ್ತು. ಯಾವ ರಾಜಕೀಯ ಪಕ್ಷಕ್ಕೂ ಸೇರದ ಅಂತಹ ಯುವ ಜ್ಞಾನಪಿಪಾಸುಗಳಿಗೆ ಈ ಬಗೆಯ ಅಸಹನೆ ಎಂತಹ ಧಕ್ಕೆಯನ್ನುಂಟು ಮಾಡಿರಬೇಕು? ಯೋಚಿಸುತ್ತಾ ಹೋದಂತೆ ಮನಸ್ಸು ಖಿನ್ನವಾಗುತ್ತದೆ, ಕಣ್ಣ ಮುಂದೆ ಕತ್ತಲು ಕವಿಯುತ್ತದೆ.

– ಸಿ.ಎನ್.ರಾಮಚಂದ್ರನ್

(ಜನವರಿ 22 ಪ್ರಜಾವಾಣಿ ಸಂಗತ)

ಕೊಡುವಂಥದ್ದು. ಅವರ ದೀರ್ಘ ಭಾಷಣದ ಆಯ್ದ ಭಾಗಗಳನ್ನು ಕೊಡಲಾಗಿದೆ. 'ಸಾಹಿತ್ಯ ಸಂಭ್ರಮ'ದಲ್ಲಿ ಮಾತನಾಡಿದ ಚಿಂತಕ ಶಿವ ವಿಶ್ವನಾಥನ್ ಅವರು ಅಸ್ಸಾಂನಲ್ಲಿ ಮಿಲಿಟರಿ ಕಾರ್ಯಾಚರಣೆ ಬಗ್ಗೆ ಮಾಡಿದ ಟೀಕೆ ಬಗ್ಗೆ, ಆಗಲೇ ಮತ್ತು ಮರುದಿನ ಸಂಘಟಿತವಾಗಿ ಸಂಘ ಪರಿವಾರ ದಾಂಧಲೆ ನಡೆಸಿತು. 'ಸಾಹಿತ್ಯ ಸಂಭ್ರಮ'ದ ಕಾರ್ಯಕ್ರಮ ಯೋಜನೆಯ ಹಂತದಲ್ಲೇ ಸಂಘ ಪರಿವಾರ ಮೂಗು ತೂರಿಸಿ ಬೆದರಿಕೆ ಹಾಕಿತ್ತು. ಸಂಘ ಪರಿವಾರದ ದಾಂಧಲೆಗೆ 'ಸಾಹಿತ್ಯ ಸಂಭ್ರಮ'ದ ಸಂಘಟಕರು ಪ್ರತಿರೋಧ, ಪ್ರತಿಭಟನೆ ತೋರುವ ಬದಲು ಅವರನ್ನು ಓಲೈಸಲು ಪ್ರಯತ್ನಿಸಿದ್ದು ಟೀಕೆಗೆ ಗುರಿಯಾಗಿದೆ. ಈ ದಾಂಧಲೆ ಬಗ್ಗೆ ಖ್ಯಾತ ವಿಮರ್ಶಕ ಸಿ.ಎನ್. ರಾಮಚಂದ್ರನ್ ಅವರು ಪ್ರಜಾವಾಣಿಯ 'ಸಂಗತ'ದಲ್ಲಿ ಪ್ರಕಟವಾದ ಬರಹ ಬೆಳಕು ಚೆಲ್ಲುತ್ತದೆ. ಆ ಬರಹದ ಭಾಗಗಳು ಇಲ್ಲಿವೆ. 'ಶುದ್ಧ ಸಾಹಿತ್ಯ' 'ಚಳುವಳಿ ಸಾಹಿತ್ಯ'ದ ಬಗ್ಗೆ 'ಭೈರಪ್ಪ ಸಾಹಿತ್ಯೋತ್ಸವ'ದ ಸಮಾರೋಪದಲ್ಲಿ ಭೈರಪ್ಪನವರ ಹೇಳಿಕೆಗಳೂ ತೀವ್ರ ಟೀಕೆಗೆ ಗುರಿಯಾಗಿವೆ. ಈ ಬಗ್ಗೆ ಬಿ.ಎಂ.ಬಶೀರ್ ಅವರು 'ವಾರ್ತಾಭಾರತಿ'ಯಲ್ಲಿ ಬರೆದ ಲೇಖನ ಭೈರಪ್ಪನವರ ಗೋಸುಂಬೆತನವನ್ನು ಬಯಲು ಮಾಡಿದೆ. ಆ ಬರಹದ ಆಯ್ದ ಭಾಗಗಳೂ ಇಲ್ಲಿವೆ. ಈ ಮೂರು ಬರಹಗಳು ಒಟ್ಟಾಗಿ ಇಂದಿನ ಸಂದರ್ಭದಲ್ಲಿ ಸಾಹಿತ್ಯ, ರಾಜಕೀಯ, ಚಳುವಳಿಗಳ ನಡುವಣ ಸಂಬಂಧಗಳ ಬಗ್ಗೆ ಸರಿಯಾದ ದೃಷ್ಟಿಕೋಣ ರೂಪಿಸಲು ಸಹಾಯಕವಾಗಿವೆ.



ಕಾಗೆಯಿಂದ ಸೌಹಾರ್ದದ ಪಾಠ ಕಲಿಯಬೇಕಾದ ಕಾಲ ಬಂದಿದೆ. ಕಾಗೆ ನಮ್ಮ ಕಾಲದ ಗುರು!

--*-*-*

ಜಡಮೂಲ ಸಂಭ್ರಮವೋ ಚಲನಶೀಲ ಸಂಭ್ರಮವೊ?

ಧಾರವಾಡದಲ್ಲೇ ಡಾ. ಎಂ.ಎಂ.ಕಲಬುರ್ಗಿಯವರ ಹತ್ಯೆಯಾಗಿದೆ. ಬೆಂಗಳೂರಲ್ಲಿ ಗೌರಿ ಲಂಕೇಶ್ ಹತ್ಯೆಯಾಗಿದೆ. ಮಹಾರಾಷ್ಟ್ರದಲ್ಲಿ ಪನ್ಸಾರೆ, ದಾಬೋಲ್ಕರ್ ಜೀವತೆಗೆಯಲಾಗಿದೆ. ಅಷ್ಟೇಕೆ ಕೋಮುದ್ವೇಷಕ್ಕೆ ಅನೇಕ ಹಿಂದೂಗಳೂ ಬಲಿಯಾಗಿದ್ದಾರೆ; ಮುಸ್ಲಿಮರೂ ಬಲಿಯಾಗಿದ್ದಾರೆ. ಹೀಗೆ ಹತ್ಯೆಗೀಡಾದವರ ಪ್ರಾಣಗಳಿಗೆ ಪಕ್ಷಗಳ ಪಟ್ಟಿ ಅಂಟಿಸಿ ರಾಜಕೀಯ ಮಾಡಲಾಗುತ್ತಿದೆ. ಪ್ರಾಣ ಕಳೆದುಕೊಂಡವರು ಹಿಂದೂವಾಗಲಿ, ಮುಸ್ಲಿಮರಾಗಲಿ, ಹತ್ಯೆಯೆಂದರೆ ಹತ್ಯೆಯೇ. ಕಾರಣಗಳು ಬೇರೆ ಇರಬಹುದೇ ಹೊರತು ಪ್ರಾಣಗಳು ಬೇರೆಯಲ್ಲ. ಜೀವ ಹತ್ಯೆಯ ಕ್ರೌರ್ಯವನ್ನು ಖಂಡಿಸಲು ಜಾತಿ, ಧರ್ಮ, ಪಕ್ಷಗಳು ಮಾನದಂಡವಾಗುವುದು ಮಾನವೀಯವಲ್ಲ. ಕೆಲವೊಮ್ಮೆ ಮೌನವೂ ಮಾನವೀಯವಾಗುವುದಿಲ್ಲ. ಎಲ್ಲ ರೀತಿಯ ಹತ್ಯೆಗಳನ್ನು ಖಂಡಿಸುವುದು ಎಷ್ಟು ಮುಖ್ಯವೋ ಸಾವಿಗೂ ಸಂಭ್ರಮಿಸುವವರ ವಿಕೃತಿಯನ್ನು ವಿರೋಧಿಸುವುದೂ ಅಷ್ಟೇ ಮುಖ್ಯ. ಡಾ. ಯು.ಆರ್. ಅನಂತಮೂರ್ತಿಯವರ ಕೊನೆಯ ದಿನಗಳಲ್ಲಿ ಕೆಲವರು ಕಿರುಕುಳ ಕೊಟ್ಟಿದ್ದಲ್ಲದೆ ಅವರು ನಿಧನರಾದಾಗ ಪಟಾಕಿ ಸಿಡಿಸಿ ಸಂಭ್ರಮಿಸಲಾಯಿತು. ಗೌರಿ ಹತ್ಯೆಗೂ ಸಂಭ್ರಮಿಸಲಾಯಿತು. ಸಂಭ್ರಮ ಎನ್ನುವುದು ಮನೋಲ್ಲಾಸವಾಗುವ ಬದಲು ವಿಕಾರೋಲ್ಲಾಸವಾದ ಸಂದರ್ಭ ನಿಜಕ್ಕೂ ಕ್ರೂರವಾದುದು. ದೇಶದ ವಿವಿಧ ಭಾಗಗಳಲ್ಲಿ ಸಂಭ್ರಮದ ಅರ್ಥ ಮತ್ತು ಅನುಭವಗಳು ವಿಕೃತ ಪಲ್ಲಟವಾಗಿರುವುದನ್ನೂ ನಾವಿಲ್ಲಿ ಗಮನಿಸಬೇಕು. ಇಂತಹ ಪಲ್ಲಟ ಪ್ರಯತ್ನಗಳು ಹಿಂದೆ ಇರಲೇ ಇಲ್ಲವೆಂದಲ್ಲ. ಹಿಂದೆ ಆಗೊಮ್ಮೆ ಈಗೊಮ್ಮೆ ಆಗುತ್ತಿದ್ದ ಅಮಾನವೀಯ ಅವಘಡಗಳು ಈಗ ಜೀವನ ವಿಧಾನವಾಗುವ ವೈಪರೀತ್ಯವನ್ನು ತಲುಪುತ್ತಿವೆ. ಜಡ ಸಾಂಪ್ರದಾಯಿಕತೆ ಮತ್ತು ಧಾರ್ಮಿಕ ನಂಬಿಕೆಗಳು ಈಗ ರಾಜಕೀಯದ ಓಟಿನ ಆಟದಲ್ಲಿ ಹುರಿಯಾಳುಗಳಾಗಿ ಬಳಕೆಯಾಗುತ್ತಿವೆ. ಮತಧರ್ಮಗಳ ಹೆಸರಿನ ತುಂಡು ತಂಡಗಳು ವಿಜೃಂಭಿಸುತ್ತಿವೆ.

ನಮ್ಮ ಸಾಮಾಜಿಕ ಸಂರಚನೆಯ ಆಳದಲ್ಲಿ ಅಡಗಿದ್ದ ಅಮಾನವೀಯ ಅಂಶಗಳು ಮಾನವೀಯ ಮೌಲ್ಯಗಳನ್ನು ಮೆಟ್ಟಿ ಮುಂದಕ್ಕೆ ಬರುತ್ತಿವೆ. ಇವತ್ತಿನ ಅಮಾನವೀಯ ಘಟನೆಗಳಿಗೆ ಪ್ರೇರಕವಾದ ಬೀಜ ರೂಪಗಳು ನಮ್ಮ ಸಾಮಾಜಿಕ ಸಂರಚನೆಯ ಸಾಂಪ್ರದಾಯಿಕ ಜಡತೆಯಲ್ಲೇ ಇದ್ದವು. ಜಡತೆ ಮತ್ತು ಚಲನಶೀಲತೆಗಳು ಏಕಕಾಲದಲ್ಲಿ ಅಸ್ತಿತ್ವದಲ್ಲಿರುವುದು ಸಮಾಜದ, ಸಂಸ್ಕೃತಿಯ ಒಂದು ಸಹಜ ಗುಣಲಕ್ಷಣ. ಚಲನಶೀಲತೆಯು ಮುನ್ನೆಲೆಗೆ ಬಂದು ಸಮಚಿತ್ತತೆಯಿಂದ ಸಾಗಿದಾಗ ಆರೋಗ್ಯಕರ ಬದಲಾವಣೆಗಳು ಸಂಭವಿಸುತ್ತವೆ. ಆಗ ಸಂಪ್ರದಾಯದ ಹೆಸರಿನಲ್ಲಿ ಜಡಮೂಲ ವಿನ್ಯಾಸಗಳು ಮೂಲೆ ಸೇರುತ್ತವೆ. ಆಗೊಮ್ಮೆ ಈಗೊಮ್ಮೆ ಇಣುಕಿದರೂ ಮಾನವೀಯ ಸಮಾಜವು ಅವುಗಳ ಅಕ್ರಮ ಸಂತಾನಕ್ಕೆ ಸ್ಥಾನಮಾನಗಳನ್ನು ಕೊಡುವುದಿಲ್ಲ. ಆಗ ಅವು ಮೌನವಾಗಿ ಮೂಲೆಯಲ್ಲಿ ಕಾಯುತ್ತ ಕೂರುತ್ತವೆ. ಸಾಂಪ್ರದಾಯಿಕ ಸಂಭ್ರಮವನ್ನು ಕಳೆದುಕೊಳ್ಳುತ್ತವೆ. ಬದಲಾವಣೆಯ ಸಂಭ್ರಮಕ್ಕೆ ಎದುರಾಗಲಾಗದೆ ಏದುಸಿರುಬಿಡುತ್ತವೆ.

ಇಲ್ಲಿ ಸಂಭ್ರಮವೆನ್ನುವುದು ಯಾವುದು ಎಂಬ ಪ್ರಶ್ನೆಯೂ ಮುಖ್ಯ. ನಮ್ಮದು ಜಡಮೂಲ ಸಂಭ್ರಮವೋ ಚಲನಶೀಲ ಸಂಭ್ರಮವೊ ಎಂಬ ಪ್ರಶ್ನೆಗೆ ಕಂಡುಕೊಳ್ಳುವ ಉತ್ತರದಲ್ಲಿ ಮಾನವೀಯ– ಅಮಾನವೀಯ ಸಂಭ್ರಮಗಳ ವ್ಯಾಖ್ಯಾನ ಒಳಗೊಂಡಿರುತ್ತದೆ. ಈ ಪ್ರಶ್ನೋತ್ತರಗಳು ಸಾಮಾಜಿಕ ಮಾತ್ರವಲ್ಲ, ಸಾಮಾಜಿಕ ಬದುಕಿನಿಂದ ಹುಟ್ಟಿ ಬೆಳೆವ ಸಾಹಿತ್ಯ–ಸಂಸ್ಕೃತಿಗಳ ಪ್ರಶ್ನೋತ್ತರಗಳೂ ಆಗುತ್ತವೆ. ಆದ್ದರಿಂದ ನಾವು– ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದವರು ಸಮಾಜದಲ್ಲಿರುವ ಕವಿ ಮನಸ್ಸನ್ನು ಹುಡುಕಬೇಕು. ಕವಿಮನಸ್ಸಿನ ಮನುಷ್ಯರು ಹೆಚ್ಚಾದಷ್ಟು ಸಂವೇದನೆ ವಿಕಾಸವಾಗುತ್ತದೆ; ಸಮಾನತೆ, ಮಾನವತೆಗಳಿಗೆ ಮನ್ನಣೆ ಸಿಗುತ್ತದೆ. ಮಾನವತೆ ಮತ್ತು ಸಮಾನತೆಗಳು ಸಾಹಿತ್ಯ–ಸಂಸ್ಕೃತಿಗಳ ಸಂಭ್ರಮ ಸ್ವರೂಪ ಪಡೆಯಲು ಸಾಧ್ಯವಾಗುತ್ತದೆ. ಹೀಗಾಗಿ ಸಾಹಿತ್ಯ ಮತ್ತು ಸಂಸ್ಕೃತಿಗಳ ಒಳ ಹೋರಾಟವು ಜಡತೆ ಮತ್ತು ಚಲನಶೀಲತೆಗಳ ನಡುವಿನ ಹೋರಾಟವೂ ಆಗಿರುತ್ತದೆ; ಅನುಸಂಧಾನವೂ ಆಗಿರುತ್ತದೆ; ಆಗಿರಬೇಕು.

--*-*-*

ಸಾಹಿತ್ಯ ಲೆಕ್ಕದ ಬುಕ್ಕಲ್ಲ; ಸಂಸ್ಕೃತಿ, ಶ್ರೇಷ್ಟತೆಯ ಸೊಕ್ಕಲ್ಲ

ಸಾಹಿತ್ಯ ಲೆಕ್ಕದ ಬುಕ್ಕಲ್ಲ; ಸಂಸ್ಕೃತಿ, ಶ್ರೇಷ್ಟತೆಯ ಸೊಕ್ಕಲ್ಲ. ಇಲ್ಲಿ ಮೇಲು ಕೀಳುಗಳ ಮಾರಣ ಹೋಮಕ್ಕೆ ಅವಕಾಶವಿಲ್ಲ. ಆದ್ದರಿಂದ ಸಾಹಿತ್ಯ ಮತ್ತು ಸಂಸ್ಕೃತಿಗಳು ಸಮಾನತೆ–ಸೌಹಾರ್ದತೆಗಳ ಜೀವಶಕ್ತಿಯನ್ನು ಒಳಗೊಳ್ಳಬೇಕು. ಈ ಜೀವ ಶಕ್ತಿಯು ಸಾಹಿತ್ಯ–

ಪುಟ 10 ಕ್ಕೆ

ಭೈರಪ್ಪನವರೇ! ಕನ್ನಡಿಗರು ಮೂರ್ಖರಲ್ಲ

– ಬಿ.ಎಂ. ಬಶೀರ್

(ಲೇಖನದ ಆಯ್ದ ಭಾಗಗಳು, ಕೃಪೆ: ವಾರ್ತಾಭಾರತಿ)

ಎಸ್.ಎಲ್. ಭೈರಪ್ಪ ಪ್ರಖರ ಹಿಂದುತ್ವವಾದಿ ಚಳುವಳಿಯಲ್ಲಿ ಗುರುತಿಸಿಕೊಳ್ಳುತ್ತಾ ಬಂದವರು ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿಯಾಗಿದೆ. ಹಿಂದುತ್ವದ ತಳಹದಿಯಲ್ಲಿ ನಿಂತ ರಾಷ್ಟ್ರೀಯವಾದಿ ಚಳವಳಿಗೆ ಅವರ ಕಾದಂಬರಿಗಳ ಕೊಡುಗೆಗಳು ಸಣ್ಣದೇನಲ್ಲ. ಹೀಗೆ ಬಹಿರಂಗವಾಗಿಯೇ ಒಂದು ಚಳವಳಿಯೊಳಗೆ ತೊಡಗಿಕೊಳ್ಳುತ್ತಾ, "ನನ್ನದು ಚಳವಳಿ ಸಾಹಿತ್ಯ ಅಲ್ಲ" ಎಂದು ಹೇಳುವುದು ಭಂಡತನವಲ್ಲದೆ ಇನ್ನೇನೂ ಅಲ್ಲ.

'ನನ್ನದು ಚಳವಳಿ ಸಾಹಿತ್ಯವಲ್ಲ, ಯಾವುದೇ ಚಳವಳಿಯಲ್ಲಿ ನಾನು ಭಾಗಿಯಾಗಿಲ್ಲ, ನನ್ನದು ಶುದ್ಧ ಸಾಹಿತ್ಯ' ಎಂಬ ಅವರ ಹೇಳಿಕೆಯನ್ನು ಗಮನಿಸೋಣ. ಇಂತಹ ಹೇಳಿಕೆಯನ್ನು ಜಯಂತ್ ಕಾಯ್ಕಿಣಿ, ವೈದೇಹಿ, ಅಬ್ದುಲ್ ರಶೀದ್, ನಾಗತಿಹಳ್ಳಿ ಚಂದ್ರಶೇಖರ್‌ರಂಥವರು ಹೇಳಿದ್ದಿದ್ದರೆ ಅದಕ್ಕೊಂದು ವ್ಯಾಖ್ಯಾನವನ್ನು ಕೊಡಲು ಪ್ರಯತ್ನಿಸಬಹುದಿತ್ತು. ವರ್ತಮಾನದ ಬೆಳವಣಿಗೆಗಳ ಜೊತೆಗೆ ಗರಿಷ್ಠವಾದ ಅಂತರಗಳನ್ನು ಇಟ್ಟುಕೊಂಡು ತಮ್ಮದೇ ಭಾವಲೋಕದ ಮನುಷ್ಯರ ಜೊತೆಗೆ ಇವರು ಬದುಕುತ್ತಿರುವವರು. ಅವರು ಬರೆದ, ಬರೆಯುತ್ತಿರುವ ಸಾಹಿತ್ಯ ಪ್ರಕಾರಗಳೇ 'ಶುದ್ದ ಸಾಹಿತ್ಯ'ಕ್ಕಿರುವ ಉದಾಹರಣೆಗಳಿರಬಹುದು ಎಂದು ಹೇಳಿ ಸುಮ್ಮಗಾಗಬಹುದು. ಆದರೆ ಎಸ್.ಎಲ್. ಭೈರಪ್ಪ ಪ್ರಖರ ಹಿಂದುತ್ವವಾದಿ ಚಳುವಳಿಯಲ್ಲಿ ಗುರುತಿಸಿಕೊಳ್ಳುತ್ತಾ ಬಂದವರು ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿಯಾಗಿದೆ. ಹಿಂದುತ್ವದ ತಳಹದಿಯಲ್ಲಿ ನಿಂತ ರಾಷ್ಟ್ರೀಯವಾದಿ ಚಳವಳಿಗೆ ಅವರ ಕಾದಂಬರಿಗಳ ಕೊಡುಗೆಗಳು ಸಣ್ಣದೇನಲ್ಲ. ಹೀಗೆ ಬಹಿರಂಗವಾಗಿಯೇ ಒಂದು ಚಳವಳಿಯೊಳಗೆ ತೊಡಗಿಕೊಳ್ಳುತ್ತಾ, "ನನ್ನದು ಚಳವಳಿ ಸಾಹಿತ್ಯ ಅಲ್ಲ" ಎಂದು ಹೇಳುವುದು ಭಂಡತನವಲ್ಲದೆ ಇನ್ನೇನೂ ಅಲ್ಲ.



ಭೈರಪ್ಪರ ಕಾದಂಬರಿಗಳನ್ನೇ ತೆಗೆದುಕೊಳ್ಳೋಣ. 'ಧರ್ಮಶ್ರೀ' ಕಾದಂಬರಿ ಚರ್ಚಿಸುವುದೇ ಪಾಶ್ಚಿಮಾತ್ಯರ ಮತಾಂತರಗಳ ಕುರಿತಂತೆ. ಆರೆಸ್ಸೆಸ್ ಮತ್ತು ಸಂಘಪರಿವಾರ ಮತಾಂತರ ಚರ್ಚೆಗಳನ್ನು ಕೈಗೆತ್ತಿಕೊಂಡು ದೇಶಾದ್ಯಂತ ಜನರಲ್ಲಿ ದ್ವೇಷಭಾವನೆಯನ್ನು ಬಿತ್ತುತ್ತಿರುವ ಸಂದರ್ಭದಲ್ಲಿ ಅವರು ಧರ್ಮಶ್ರೀಯನ್ನು ಬರೆದರು. ಆ ಕಥಾಪಾತ್ರವೇ ವೈದಿಕ ಧರ್ಮದ ಶ್ರೇಷ್ಠತೆಯನ್ನು ಎತ್ತಿಹಿಡಿಯುತ್ತದೆ. ಮತಾಂತರಗೊಂಡು ತನ್ನ ಹೆಸರನ್ನು 'ಧರ್ಮಶ್ರೀ' ಎಂದು ಪರಿವರ್ತಿಸಿಕೊಂಡ ಹೆಣ್ಣುಮಗಳು ಕಥಾನಾಯಕಿ. ಆರೆಸ್ಸೆಸ್ ಪ್ರತಿಪಾದಿಸುವ ಭಾರತೀಯತೆಯ ಮೌಲ್ಯಗಳನ್ನು ಎತ್ತಿ ಹಿಡಿಯುವುದಕ್ಕೆ ಸೃಷ್ಟಿಯಾದ ಪಾತ್ರ ಇದು. 'ತಬ್ಬಲಿಯು ನೀನಾದೆ ಮಗನೆ' ಹಿನ್ನೆಲೆಯಾಗಿಟ್ಟುಕೊಂಡು ಬರೆದಿರುವುದಾರೂ, ಗೋವಿನ ಮೂಲಕ ಆರೆಸ್ಸೆಸ್ ದೇಶಾದ್ಯಂತ ಹಮ್ಮಿಕೊಂಡ ಚಳವಳಿಗೆ ಪೂರಕವಾಗಿ ಸೃಷ್ಟಿಯಾದ ಕಥಾನಕವಾಗಿದೆ. ಹೈನೋದ್ಯಮವನ್ನು ಬದಿಗೆ ಸರಿಸಿ, ಗೋವಿಗೆ ಮಾತ್ರ ಪಾವಿತ್ರ್ಯತೆಯನ್ನು ನೀಡುವ, ಆರೆಸ್ಸೆಸ್ ಕಾರ್ಯಕರ್ತರನ್ನು ಗೋರಕ್ಷಕ ರೆಂದು ಬಿಂಬಿಸುವ ಕಾದಂಬರಿ ಇದಾಗಿದೆ. 'ಆವರಣ' ಕಾದಂಬರಿಯಂತೂ ಬಾಬರಿ ಮಸೀದಿ ಧ್ವಂಸವನ್ನು ಸಮರ್ಥಿಸುತ್ತಾ, ಕಾಶಿ ಮಥುರಾದಲ್ಲಿರುವ ದೇವಸ್ಥಾನಗಳನ್ನು ಕೆಡಹಬೇಕು ಎನ್ನುವ ಪರೋಕ್ಷ ಸಂದೇಶವನ್ನು ಹಿಂದುತ್ವವಾದಿಗಳಿಗೆ ನೀಡುವ ಕಾದಂಬರಿ.

ಇತಿಹಾಸವನ್ನು ಕಪ್ಪು–ಬಿಳಪು ಕಣ್ಣಿನಲ್ಲಿ ನೋಡುತ್ತಾ, ಆರೆಸ್ಸೆಸ್ ಪ್ರತಿಪಾದಿಸುವ ಇತಿಹಾಸವನ್ನು ಕಾದಂಬರಿಯ ರೂಪದಲ್ಲಿ ತಂದು ಓದುಗರಿಗೆ ಹಂಚಿದ್ದಾರೆ. 'ಕವಲು' ಕಾದಂಬರಿಯೂ ಮನುವಾದಿ ಹಿಂದುತ್ವದಲ್ಲಿ ಮಹಿಳೆಯ ಪಾತ್ರವನ್ನು ಗುರುತಿಸುವಂತಹದು. ಶಿಕ್ಷಿತ ಆಧುನಿಕ ಮಹಿಳೆಯರನ್ನು ವ್ಯಭಿಚಾರಿಗಳೆಂದು, ವಂಚಕಿಯರೆಂದು ಬಹಿರಂಗವಾಗಿಯೇ ಘೋಷಿಸುವ ಕಾದಂಬರಿ. ಇವೆಲ್ಲವನ್ನೂ ಅವರ ಕಾದಂಬರಿಗಳ ಒಳಗಿಳಿದು ಶೋಧಿಸಿ ತೆಗೆಯಬೇಕಾದ ಅಗತ್ಯವೇನೂ ಇಲ್ಲ. ಭೈರಪ್ಪರ ಕಾದಂಬರಿಗಳು ಯಾವ ಚಳುವಳಿಗೆ ಪೂರಕವಾಗಿ ಹುಟ್ಟಿಕೊಂಡಿವೆ ಎನ್ನುವ ಸತ್ಯ ಎಲ್ಲರಿಗೂ ಗೊತ್ತಿರುವಂತಹದು. ಹೀಗಿದ್ದರೂ ಸಾರ್ವಜನಿಕ ವೇದಿಕೆಯಲ್ಲಿ ಬಹಿರಂಗವಾಗಿ "ನನ್ನದು ಶುದ್ಧ ಸಾಹಿತ್ಯ. ಯಾವ ಚಳವಳಿಯ ಹಿಂದೆಯೂ ನಾನಿಲ್ಲ" ಎಂದು ಹೇಳಬೇಕಾದರೆ ಒಂದೋ ಅವರು ಕನ್ನಡದ ಓದುಗರನ್ನು ಸಂಪೂರ್ಣ ಮೂರ್ಖರೆಂದು ತಿಳಿದುಕೊಂಡಿದ್ದಾರೆ ಅಥವಾ ಅವರು ತಮ್ಮೊಳಗೆ ಉಳಿಸಿಕೊಂಡ ಅಲ್ಪಸ್ವಲ್ಪ ಲಜ್ಜೆಯನ್ನೂ ಕಳೆದುಕೊಂಡಿದ್ದಾರೆ.

.. .. ..

ಬಹುಶಃ ಇದೀಗ ಭೈರಪ್ಪ ಓದುಗರ ಗೊಂದಲವನ್ನು ನಿವಾರಿಸಬೇಕು. ತಾವು ಯಾವುದೇ ಚಳವಳಿಯಲ್ಲಿ ಗುರುತಿಸಿಲ್ಲ ಎಂದಾದರೆ ಧರ್ಮಶ್ರೀ, ತಬ್ಬಲಿಯು ನೀನಾದ ಮಗನೆ, ದಾಟು, ಆವರಣ ಕವಲು ಹೇಗೆ ಹುಟ್ಟಿತು? ಇದನ್ನು ಯಾವ ರೀತಿಯಲ್ಲಿ ಶುದ್ಧ ಸಾಹಿತ್ಯ ಎಂದು ಕರೆಯುತ್ತೀರಿ? ಗೋಮಾಂಸ ಅಥವಾ ಮಾಂಸಾಹಾರ ಪಾಶ್ಚಾತ್ಯರದ್ದೇ ಆಗಿದ್ದರೆ, ಪರ್ವ ಕಾದಂಬರಿಯಲ್ಲಿ ಪಾಂಡವ, ಕೌರವರು ಮಾಂಸಾಹಾರ ಅದರಲ್ಲೂ ಗೋಮಾಂಸವನ್ನು ಸೇವಿಸುತ್ತಿದ್ದರು ಎಂದು ಬರೆದುದರ ಅರ್ಥವೇನು? ಇವೆರಡರಲ್ಲಿ ಯಾವುದು ನಿಜ? ಕನ್ನಡ ಸಾಹಿತ್ಯ ವಲಯವನ್ನು ಸದ್ಯದ ದಿನಗಳಲ್ಲಿ ಆವರಿಸಿಕೊಂಡಿರುವ ಜಡತೆ, ಓಲೈಕೆ, ಪ್ರಭುಸ್ತುತಿ ಇತ್ಯಾದಿಗಳ ಪರಿಣಾಮವಾಗಿ ಬರಹಗಾರರು ಹೆಚ್ಚು ಹೆಚ್ಚು ಕಿವುಡರಂತೆಯೂ ಕುರುಡರಂತೆಯೂ ನಟಿಸುತ್ತಿದ್ದಾರೆ ಮತ್ತು ಇದರ ಲಾಭವನ್ನು ಭೈರಪ್ಪನಂತಹ ಸಮಯಸಾಧಕ ರಾಜಕೀಯ ಕಾದಂಬರಿಕಾರರು ಬಹಿರಂಗವಾಗಿ ತಮ್ಮದಾಗಿಸಿಕೊಳ್ಳುತ್ತಿದ್ದಾರೆ ಎಂದಷ್ಟೇ ಹೇಳಬೇಕಾಗುತ್ತದೆ.

ಸಂಭ್ರಮ-ಸಂಕಟ ಒಳಗೊಳ್ಳದ ಗ್ರಹಿಕೆಯ ಕ್ರಮ ಅಕ್ರಮ........ ಪುಟ 9 ರಿಂದ

ಸಂಸ್ಕೃತಿಗಳ ವಿನ್ಯಾಸಗಳಲ್ಲಿ ಸಂಭವಿಸಬೇಕಾದರೆ ಸಾಹಿತಿಗಳಿಗೆ ಸಾಮಾಜಿಕ ಮತ್ತು ರಾಜಕೀಯ ಪ್ರಜ್ಞೆ ಬೇಕು. ಇಲ್ಲಿ ಒಂದು ವಿವೇಕವೂ ಇರಬೇಕು. ಸಾಮಾಜಿಕ ಪ್ರಜ್ಞೆಯೆಂದರೆ ಜಾತಿವಾದಪರ ಪ್ರಜ್ಞೆಯಲ್ಲ; ರಾಜಕೀಯ ಪ್ರಜ್ಞೆಯೆಂದರೆ ರಾಜಕೀಯಪಕ್ಷ ಪರ ಪ್ರಜ್ಞೆಯಲ್ಲ. ವಿವಿಧ ಸಾಮಾಜಿಕ-ರಾಜಕೀಯಸೈದ್ಧಾಂತಿಕತೆಗಳನ್ನು ಮನುಷ್ಯರ ಸಂವೇದನೆಯಾಗಿ ರೂಪಾಂತರಿಸಿಕೊಳ್ಳುವ ಪ್ರಕ್ರಿಯಾತ್ಮಕ ಪ್ರಜ್ಞೆ ನಮಗೆ ಬೇಕು. ಯಾಕೆಂದರೆ, ನಾವು ಬದುಕುತ್ತಿರುವ, ಬರೆಯುತ್ತಿರುವ ಸಮಾಜದಲ್ಲಿ ಸಾಮಾಜಿಕ ಸ್ತರಗಳಿವೆ; ರಾಜಕೀಯ ಸ್ವರಗಳಿವೆ.
ಸಮಾಜದ ಬದುಕನ್ನು ಬಿಟ್ಟು ಸಾಹಿತಿ ಇರಲು ಸಾಧ್ಯವಿಲ್ಲವಾದ್ದರಿಂದ ಸಾಮಾಜಿಕ ಮತ್ತು ರಾಜಕೀಯ ಪ್ರಜ್ಞೆಯಿಂದ ದೂರವುಳಿಯುವುದೆಂದರೆ ದಂತಗೋಪುರದ ಬಂಧಿಯಾಗುವುದೆಂದೇ ಅರ್ಥ.

--*-*-*

ಸಾಮಾಜಿಕ- ರಾಜಕೀಯ ಪ್ರಜ್ಞೆ

ಸಾಮಾಜಿಕ-ರಾಜಕೀಯ ಪ್ರಜ್ಞೆಯು ಸಾಹಿತ್ಯದ ಸೃಜನಶೀಲ ಸ್ವಾತಂತ್ರ್ಯವನ್ನು ಕಸಿಯುತ್ತದೆಯೆಂಬುದು ಒಂದು ಹುಸಿವಾದ ಎಂದೇ ನಾನು ಹೇಳಬಯಸುತ್ತೇನೆ. ಅಷ್ಟೇಕೆ ಸಾಮಾಜಿಕ-ರಾಜಕೀಯ ಪ್ರಜ್ಞೆ ಮತ್ತು ಸಿದ್ಧಾಂತಗಳ ಗೊಡವೆ ಬೇಡ ಎನ್ನುವುದು ಕೂಡ ಇನ್ನೊಂದು ಸಿದ್ಧಾಂತವೇ ಆಗಿರುತ್ತದೆ.

ಸಾಮಾಜಿಕ-ರಾಜಕೀಯ ಸೈದ್ಧಾಂತಿಕ ಪ್ರಜ್ಞೆಯೆಂಬುದು ಮಲಿನಗೊಳಿಸುವ ಪ್ರಕ್ರಿಯೆ ಎಂದೂ ಸಾಹಿತ್ಯವೆಂದರೆ ಸಾಂಪ್ರದಾಯಿಕ ಪರಿಶುದ್ಧತೆಯುಳ್ಳದ್ದೆಂದೂ ಭಾವಿಸಿದವರು ಮಾತ್ರ ಸೈದ್ಧಾಂತಿಕ ಪ್ರಜ್ಞೆಯ ವಿರುದ್ಧವಾಗಿ ಮಾತಾಡಲು ಸಾಧ್ಯ. ಸಾಹಿತ್ಯದ ಪರಿಶುದ್ಧ ಪರಿಕಲ್ಪನೆಯವರಿಗೆ ಪ್ಯಾಬ್ಲೊನೆರೂಡರ

ಪ್ರತಿಪಾದನೆಯಲ್ಲಿ ಉತ್ತರವಿರುವುದನ್ನು ಇಲ್ಲಿ ಉಲ್ಲೇಖಿಸುತ್ತೇನೆ: 'ಸಾರಿನ ಕಲೆ ಅಂಟಿದ ಬಟ್ಟೆ, ನಿರ್ಲಕ್ಷ್ಯ ನಡವಳಿಕೆಗಳಿಂದ ಕೊಳಕಾದ ಶರೀರ, ಚರ್ಮದ ಸುಕ್ಕುಗಳು, ಪ್ರಜ್ಞೆ ಮತ್ತು ಕನಸುಗಳು, ಕಾಣ್ಕೆ ಮತ್ತು ಮುನ್ನೋಟಗಳು, ಜನಪದ ಕಥಾ ವಿಷಯಗಳು, ಪ್ರಾಣಿ ಪಕ್ಷಿಗಳು, ರಾಜಕೀಯ ನಿಷ್ಠೆ, ನಿರಾಕರಣೆ ಮತ್ತು ಸಮರ್ಥನೆಗಳು- ಇವೇ ಮುಂತಾದ ವಸ್ತುಗಳಿಂದ ಮಲಿನವಾದೊಂದು ಅಶುದ್ಧ ಕಾವ್ಯ (Impure poetry) ನಮ್ಮದಾಗಲಿ' - ಇದು ಪ್ಯಾಬ್ಲೊ ನೆರೂಡ ಅವರು ತಮ್ಮ 'Impure poetry' ಎಂಬ ಲೇಖನದ ಮೂಲಕ 'ಶುದ್ಧ ಕಾವ್ಯ' ಕಲ್ಪನೆಗೆ ಕೊಟ್ಟ ಉತ್ತರರೂಪಿ ಸಿದ್ಧಾಂತ.

ನಮ್ಮ ಸಮಾಜದ ಸಂದರ್ಭದಲ್ಲಂತೂ ಪರಿಶುದ್ಧವೆಂಬ ಪರಿಕಲ್ಪನೆಯ ಬೇರುಗಳು ಸಾಮಾಜಿಕ ಶ್ರೇಷ್ಠತೆಯ ಶ್ರೇಣಿಯಲ್ಲಿವೆ. ಅಂದರೆ ನಮ್ಮ ಸಾಮಾಜಿಕ ಸಂರಚನೆಯ ಕೊಳಕು ಕಲ್ಪನೆಗಳಾದ ಜಾತಿ ಮತ್ತು ವರ್ಣಗಳ ಮೇಲು-ಕೀಳಿನ ತಾರತಮ್ಯವು ಶುದ್ಧ ಅಶುದ್ಧಗಳ ಮನೋಧರ್ಮವನ್ನು ಬೆಳೆಸಿದೆ. ಶುದ್ಧ-ಅಶುದ್ಧ ಮನೋಧರ್ಮಕ್ಕೂ ಶ್ರೇಷ್ಟ-ಕನಿಷ್ಟಗಳ ತಾರತಮ್ಯಕ್ಕೂ ಒಳ ಸಂಬಂಧವಿದೆ. ಈ ಜಡ ಮೂಲ ಒಳ ಸಂಬಂಧವು ಸಾಂಸ್ಕೃತಿಕವಾದಾಗ ಸಾಹಿತ್ಯ ಸೃಷ್ಟಿಯು ಗರ್ಭಗುಡಿಯ ಶಿಲ್ಪವಾಗಿ ಬಿಡುತ್ತದೆ. ಹೀಗಾಗಿ ಅಸಮಾನತೆಯ ಹಿಂಸೆ ಅನುಭವಿಸಿದ ಜಾತಿ, ವರ್ಣ, ಮತ್ತು ವರ್ಗ ಮೂಲ ದಮನಿತರ ಆಶಯಗಳು ಈ ಗರ್ಭಗುಡಿಗೆ ಪ್ರವೇಶ ಮಾಡುವುದನ್ನು ಪಾವಿತ್ರ್ಯಭಂಗವೆಂಬಂತೆ ನೋಡಲಾಗುತ್ತದೆ. ದಮನಿತ ವಲಯದ ಪ್ರತಿಭೆಗಳು ಮತ್ತು ಅವರ ಪರವಾದ ಪ್ರಗತಿಪರರು ಸಾಮಾಜಿಕ ರಾಜಕೀಯ ಪ್ರಜ್ಞೆಯನ್ನು ಪ್ರತಿಪಾದಿಸುತ್ತಿದ್ದು, ಶುದ್ಧಸಾಹಿತ್ಯವಾದಿಗಳ ಶ್ರೇಷ್ಟತೆಯ ಕಲ್ಪನೆಯಲ್ಲಿ ಕೆಲಸ ಮಾಡುವ ವರ್ಣ ಮತ್ತು ವರ್ಗದ ಬೇರುಗಳು ಬೇರೆಯದೇ ಕತೆಯನ್ನು ಹೇಳುತ್ತವೆ. ಸಾಹಿತ್ಯದ ಶ್ರೇಷ್ಟತೆಯು ಒಂದು ಶೋಧವೇ ಹೊರತು ಮುಕ್ತಾಯದ ಮೋಕ್ಷಸ್ಥಿತಿಯಲ್ಲ. ಆದ್ದರಿಂದ ಹುಸಿಶ್ರೇಷ್ಟತೆ ಮತ್ತು ಹುಸಿಶುದ್ಧತೆಗಳಿಂದ ವಿಮೋಚನೆಗೊಂಡ ಮನಸ್ಸು ಮಾತ್ರ ಮನುಷ್ಯತ್ವದ ಮೂಲ ಬೇರುಗಳನ್ನು ಬಲಗೊಳಿಸುತ್ತದೆ. ಈ ಮನುಷ್ಯತ್ವದ ಪ್ರಜ್ಞೆಯೇ ಸಾಮಾಜಿಕ ಮತ್ತು ರಾಜಕೀಯ ಪ್ರಜ್ಞೆಯಾಗಬೇಕಾಗಿದೆ. ಸಾಹಿತ್ಯ ಮತ್ತು ಸಾಹಿತಿಗಳಿಗೆ ಸಾಮಾಜಿಕ ರಾಜಕೀಯ ಪ್ರಜ್ಞೆ ಬೇಕಿಲ್ಲವೆಂದು ಪ್ರತಿಪಾದಿಸುವವರಲ್ಲೂ ಪ್ರಜ್ಞಾಪೂರ್ವಕ ಅಥವಾ ಅಪ್ರಜ್ಞಾಪೂರ್ವಕವಾಗಿ ಅದೇ ಪ್ರಜ್ಞೆ ಇರುವುದಕ್ಕೆ ಉದಾಹರಣೆಗಳಿವೆ. ಇದಕ್ಕೆ ಒಂದು ಉತ್ತಮ ಉದಾಹರಣೆಯಾಗಿ ಪ್ರಸಿದ್ಧ ಲೇಖಕರಾದ ಶ್ರೀ ಎಸ್.ಎಲ್. ಭೈರಪ್ಪನವರ ಮತ್ತು ಡಾ. ಯು.ಆರ್. ಅನಂತಮೂರ್ತಿಯವರ ನಿಲುವನ್ನೂ ಪ್ರಸ್ತಾಪಿಸಬಹುದು.

ಸಾಮಾಜಿಕ-ರಾಜಕೀಯ ನಿಲುವುಗಳಲ್ಲಿ ಕೆಲವರದು ಪ್ರಗತಿಗಾಮಿಯಾದರೆ ಇನ್ನೂ ಕೆಲವರದು ಪ್ರತಿಗಾಮಿ. ಇದು ಜಡತೆ ಮತ್ತು ಚಲನಶೀಲತೆಗಳ ನಿರಂತರ ನಡಿಗೆ. ಯಾರು ಜಡವಿರೋಧಿ ಸಾಮಾಜಿಕ-ರಾಜಕೀಯ ನಿಲುವುಗಳನ್ನು ಪ್ರತಿಪಾದಿಸುತ್ತಾರೋ ಅಂಥವರ ಸಾಹಿತ್ಯವನ್ನು ಪೂರ್ವಾಗ್ರಹದಿಂದ ನೋಡುವ ಪ್ರವೃತ್ತಿ ನಮ್ಮಲ್ಲಿದೆ. ಇಂತಹ ಪೂರ್ವಾಗ್ರಹದ ಪಾಪದ ಕೂಸುಗಳಲ್ಲಿ ನಾನೂಒಬ್ಬ. ವಿಶೇಷವಾಗಿ ನವ್ಯ ಸಾಹಿತ್ಯ ಮತ್ತು ವಿಮರ್ಶಾ ವಲಯವೂ ನಮ್ಮಂಥವರ ಸಾಹಿತ್ಯವನ್ನು ಹಿಂದೆ ಪೂರ್ವಾಗ್ರಹದಿಂದ ನೋಡಿದೆ. ದಲಿತ ಮತ್ತು ಬಂಡಾಯ ಸಾಹಿತ್ಯ ಚಳವಳಿಗಳು ಸಂಭವಿಸದೆ ಇದ್ದಿದ್ದರೆ ಶ್ರೇಷ್ಟತೆಯ ಸೊಕ್ಕಿನಲ್ಲಿ ಅನೇಕರ ಪ್ರತಿಭಾ ಭ್ರೂಣ ಹತ್ಯೆಯಾಗುತ್ತಿತ್ತು. ಹೊಸ ಬರಹಗಾರರ ಆತ್ಮವಿಶ್ವಾಸವನ್ನೇ ನಾಶ ಮಾಡಲಾಗುತ್ತಿತ್ತು. ಆದರೆ ಪ್ರಗತಿಪರ ಚಳವಳಿಗಳು ಹೊಸಬರ ಬರೆಯುವ

ಬಯಕೆ ಬತ್ತದಂತೆ ನೋಡಿಕೊಂಡವು. ಇದರ ಫಲವಾಗಿ ಸಾಮಾಜಿಕ ರಾಜಕಾರಣದ ಅನೇಕ ಆಯಾಮಗಳು ಸಾಹಿತ್ಯದಲ್ಲಿ ಬಯಲುಗೊಂಡವು. ಬಯಲಿಗೆ ಹೊಸ ಅರ್ಥ ಮತ್ತು ಆಯಾಮ ಕೊಟ್ಟವು. ಅನೇಕರ ಪೂರ್ವಾಗ್ರಹಗಳು ಬದಲಾದವು.

--*-*-*

'ವಿಮರ್ಶಾ ವರ್ಣಾಶ್ರಮ'

ನಾನಿಲ್ಲಿ ಹೇಳುತ್ತಿರುವ 'ವಿಮರ್ಶಾ ವರ್ಣಾಶ್ರಮ' ಸಾಮಾಜಿಕ ವ್ಯವಸ್ಥೆಯ ವರ್ಣಾಶ್ರಮವಲ್ಲ. ಆದರೆ ಸಾಮಾಜಿಕ ವರ್ಣಾಶ್ರಮದಲ್ಲಿ ಕೆಲವರನ್ನು ಹೊರಗಿಟ್ಟಂತೆಯೇ ಪ್ರಗತಿಪರ ವಿಚಾರಧಾರೆಯ ಸಾಹಿತ್ಯ ಮತ್ತು ಸರಳ ನಿರೂಪಣಾ ವಿಧಾನದ ಜನಪ್ರಿಯ ಸಾಹಿತ್ಯವನ್ನು ಹೊರಗಿಡುವ ಶ್ರೇಷ್ಟತೆಯ ಸೊಕ್ಕಿನ ವಿಮರ್ಶಾ ಪ್ರವೃತ್ತಿಯನ್ನು 'ವಿಮರ್ಶಾ ವರ್ಣಾಶ್ರಮ'ವೆಂದು ಕರೆಯುತ್ತಿದ್ದೇನೆ.

ಈ 'ವಿಮರ್ಶಾ ವರ್ಣಾಶ್ರಮ'ದ ವ್ಯಾಪ್ತಿಗೆ ಮಹಿಳೆಯರ ಜನಪ್ರಿಯ ಸಾಹಿತ್ಯವನ್ನು ಅತ್ಯುತ್ಸಾಹದಿಂದ ಸೇರಿಸಲಾಗಿದೆ! ಮಹಿಳೆಯರು ಬರೆದದ್ದು 'ಅಡುಗೆ ಮನೆ ಸಾಹಿತ್ಯ' ಎಂದು ಹಿಂದೊಮ್ಮೆ ಕೆಲ ನವ್ಯವಿಮರ್ಶಕರು ಹೀಗಳೆದದ್ದನ್ನು ಇಲ್ಲಿ ನೆನೆಯಬಹುದು. ಮಹಿಳೆಯರದು 'ಅಡುಗೆ ಮನೆ ಸಾಹಿತ್ಯ'

ಎಂದಾಗ ನವ್ಯದ ಕೆಲವರದು 'ಮಲಗೊ ಮನೆ ಸಾಹಿತ್ಯ' ಎಂದರೆ ಹೇಗಿರುತ್ತದೆ? ಮಲಗೊ ಮನೆ ಸಾಹಿತ್ಯ ಬರೆದವರಿಗೆ ಅಡುಗೆ ಮನೆ ಸಾಹಿತ್ಯದ ಕಷ್ಟ ಅರ್ಥವಾಗುವುದಿಲ್ಲ. ಹಾಗೆಂದು ಮಹಿಳೆಯರು ಬರೆದದ್ದೆಲ್ಲ ಉತ್ತಮ ಎಂದು ನಾನು ಹೇಳುವುದಿಲ್ಲ. ಆದರೆ ಮಹಿಳೆಯರನ್ನು ಅಡುಗೆ ಮನೆಯಲ್ಲಿ ಬಂಧಿಸಿಟ್ಟ ಸಾಮಾಜಿಕ ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳದೆ, ಅವರ ಸಾಹಿತ್ಯದ ಕೊರತೆಗಳನ್ನು ಪಟ್ಟಿ ಮಾಡುವ ಪ್ರವೃತ್ತಿ ಅರೆ-ಬರೆ ವಿಮರ್ಶೆ ಮಾತ್ರವಾಗುತ್ತದೆ. ಮಹಿಳೆಯರನ್ನು ಅಡುಗೆ ಮನೆಗೆ ಮಿತಿಗೊಳಿಸಿದ ಚಾರಿತ್ರಿಕ ಸನ್ನಿವೇಶವನ್ನು ಅರ್ಥ ಮಾಡಿಕೊಳ್ಳಬೇಕಾದರೆ ವಿಮರ್ಶೆಗೆ ಸಾಮಾಜಿಕ-ರಾಜಕಾರಣದ ಅರಿವು ಅಗತ್ಯವಾಗುತ್ತದೆ. ಇಲ್ಲಿ ಸಾಮಾಜಿಕ ರಾಜಕೀಯ ಪ್ರಜ್ಞೆಯು ಸಮಾಜ, ಸಾಹಿತ್ಯ,

ಸಂಸ್ಕೃತಿಗಳನ್ನು ಅರ್ಥಮಾಡಿಕೊಳ್ಳುವ ಪ್ರೇರಕವಾಗಿ ಕೆಲಸ ಮಾಡುತ್ತದೆ. ಸಾಮಾಜಿಕ ರಾಜಕಾರಣದ ಅರಿವಿನ ಅಭಾವವೇ ಪ್ರಗತಿಶೀಲ, ದಲಿತ-ಬಂಡಾಯ ಮತ್ತು ಮಹಿಳೆಯರ ಸಾಹಿತ್ಯವನ್ನು ಶುದ್ಧ ಹಾಗೂ ಶ್ರೇಷ್ಟವೆಂಬ 'ವಿಮರ್ಶಾ ವರ್ಣಾಶ್ರಮ' ದೃಷ್ಟಿಯಿಂದ ನೋಡುವಂತೆ ಮಾಡಿ ಅನ್ಯಾಯ ಮಾಡಲಾಗಿದೆ. ಸಾಹಿತ್ಯವನ್ನು ಅದರ ನಿರೂಪಣಾ ಶೈಲಿ ಮತ್ತೂ ಶಿಲ್ಪದ ಜೊತೆಗೆ ಅಂದಂದಿನ ಸಾಮಾಜಿಕ

ಸಂದರ್ಭದಲ್ಲೂ ಇಟ್ಟು ನೋಡಿದಾಗ ವಿಮರ್ಶೆಗೂ ವಿಶೇಷ ವ್ಯಾಪ್ತಿ ಲಭ್ಯವಾಗುತ್ತದೆ.

ಮಾನವೀಯತೆಯು ಸಾರ್ವಕಾಲಿಕ ಮೌಲ್ಯವಾದ್ದರಿಂದ ದೂರವನ್ನು ಸಮೀಪ ಮಾಡುವ ಆಶಯವಿಲ್ಲದಿದ್ದರೆ ನಾವೆಂಥ ಸಾಹಿತಿಗಳು? ನಾವೆಂಥ ಸಂಸ್ಕೃತಿ ಸಂಪನ್ನರು? ಕಡೆಗೆ ನಾವೆಂಥ ಮನುಷ್ಯರು? ನಾವು ಸಾಹಿತ್ಯ ಹಾಗೂ ಸಾಂಸ್ಕೃತಿಕ ಮನುಷ್ಯರೇ ಆಗಿದ್ದಲ್ಲಿ ಜನರಿಗೆ ಸಮೀಪವಾಗಬೇಕು; ಜನರಿಗೆ ಜವಾಬ್ದಾರರಾಗಬೇಕು. ನಾನು ಕೆಲವೊಮ್ಮೆ ಪ್ರಸ್ತಾಪಿಸಿರುವ ಚಿಂತಕ ಪ್ಲಖನೋವ್ ಮಾತನ್ನು ಇಲ್ಲಿ ಮತ್ತೆ ಉಲ್ಲೇಖಿಸುತ್ತೇನೆ. ಪ್ಲಖನೋವ್ ಪ್ರಕಾರ 'ನಾವು ಕಲಾಕಾರರು ಜನರಿಂದ ಗೌರವ, ಮನ್ನಣೆಗಳನ್ನು ಬಯಸುತ್ತೇವೆ. ಜನರು ನಮ್ಮಿಂದ ಜವಾಬ್ದಾರಿಯನ್ನು ಬಯಸುತ್ತಾರೆ'. ಪ್ಲಖನೋವ್ ಮಾತನ್ನು ಒಪ್ಪುವ ನಾನು-ಸಾಂಸ್ಕೃತಿಕ ಕ್ಷೇತ್ರದ ನಾವು, ಜನರ ಜೊತೆಗಿದ್ದು ನಿಜದ ನಡೆ ನುಡಿಗಳ ನಿಲುವುಗಳನ್ನು ಜವಾಬ್ದಾರಿಯುತವಾಗಿ ಅಭಿವ್ಯಕ್ತಿಸಬೇಕು ಎನ್ನುತ್ತೇನೆ.

ವಿಮರ್ಶೆಯೆನ್ನುವುದು ವಕಾಲತ್ತಲ್ಲ; ವಿಮರ್ಶಕರು ವಕೀಲರಲ್ಲ; ಸಾಹಿತಿಗಳು ಕಕ್ಷಿದಾರರಲ್ಲ; ಓದುಗರು ಸಾಕ್ಷಿದಾರರಲ್ಲ.; ಸಾಹಿತ್ಯ ಕೋರ್ಟಿನ ಕಟ್ಟಡವಲ್ಲ, ಆದರೆ ಹಾಗೆಂದು ಭ್ರಮಿಸಿದವರು ವಿಮರ್ಶೆಯ ಹೆಸರಿನಲ್ಲಿ ವಿಪರ್ಯಾಸ ಮತ್ತು ವಿರೋಧಾಭಾಸಗಳನ್ನು 'ಸೃಷ್ಟಿ' ಮಾಡಿದ್ದಾರೆ.

ವಿಮರ್ಶೆಯ ವಿಪರ್ಯಾಸದಿಂದ ಉಂಟಾಗುವ ವಿರೋಧಾಭಾಸಗಳು ಕುವೆಂಪು ಅವರಂತಹ ಶಿಖರ ಪ್ರತಿಭೆಯನ್ನೂ ಕಾಡಿವೆ. ಕುವೆಂಪು ಅವರ 'ಶೂದ್ರ ತಪಸ್ವಿ' ನಾಟಕ ಕುರಿತಂತೆ ಬಂದ ಪ್ರತಿಕ್ರಿಯೆಗಳನ್ನು ಇಲ್ಲಿ ನೆನೆಯಬಹುದು.

--*-*-*

ಧರ್ಮ, ಧಾರ್ಮಿಕತೆ, ಭಾರತೀಯತೆ

ಧರ್ಮ ಮತ್ತು ಧಾರ್ಮಿಕತೆಯ ನಡುವೆ ಕಂದಕ ನಿರ್ಮಾಣವಾಗಿದೆ. ಸಾಂಸ್ಥಿಕ ಧರ್ಮವು ಶಾಸ್ತ್ರಗಳ ಶಸ್ತ್ರಾಗಾರದಲ್ಲಿ ಕೂತು ಆಡಳಿತ ನಡೆಸತೊಡಗಿದೆ. ಧಾರ್ಮಿಕತೆಯೆನ್ನುವುದು ಸಾಂಸ್ಥಿಕವಲ್ಲ, ಶಾಸ್ತ್ರವೂ ಅಲ್ಲ. ಮನುಷ್ಯ ಧಾರ್ಮಿಕವಾಗುವುದಕ್ಕೆ ಮಡಿಮಂತ್ರಗಳು ಬೇಕಾಗಿಲ್ಲ. ಧಾರ್ಮಿಕತೆಗೆ ದಳ್ಳಾಳಿಗಳು ಬೇಕಾಗಿಲ್ಲ. ಧಾರ್ಮಿಕತೆಯುಳ್ಳವರು ಬೇಡರ ಕಣ್ಣಪ್ಪನಂತೆ, ಶಬರಿಯಂತೆ, ಕಾಯಕನಿಷ್ಠ ವಚನಕಾರರಂತೆ, ಕುಮಾರವ್ಯಾಸನ ಧರ್ಮವ್ಯಾಧನಂತೆ, ಶಾಸ್ತ್ರಗಳ ಹಂಗಿಲ್ಲದ ಭಕ್ತರಾಗುತ್ತಾರೆ. ಭಕ್ತಿಗೆ ಬೈಲಾ ಬೇಕಾಗಿಲ್ಲ. ಮಡಿಮೀರಿದ ಮನಸ್ಸು ಬೇಕು. ಆದರೆ ಸಾಂಸ್ಥಿಕ ಧರ್ಮವು ಸ್ಥಾವರಗಳ ಸ್ಥಾಪನೆಗಾಗಿ ಸಂಘರ್ಷಕ್ಕೂ ಸಿದ್ಧವಾಗುತ್ತದೆ, ಸಿದ್ಧವಾಗುತ್ತಿದೆ. ಇದು ಎಲ್ಲ ಸಾಂಸ್ಥಿಕ ಧರ್ಮಗಳ ಜಡ ನಡೆಯಾಗಿದೆ. ಇನ್ನು ಸಂಸ್ಕೃತಿಯನ್ನು ಧರ್ಮಕ್ಕೆ ಸಮೀಕರಿಸಿ, ಧರ್ಮವೇ ಸಂಸ್ಕೃತಿ ಎಂಬಂತೆ ಪ್ರಚುರ ಪಡಿಸಲಾಗುತ್ತಿದೆ. ಸಂಸ್ಕೃತಿಯೆನ್ನುವುದು ಎಲ್ಲ ಧರ್ಮ, ಕಲೆ, ಕಸುಬು, ವಿಚಾರ, ಆಚಾರಗಳ ವೈವಿಧ್ಯವನ್ನು ಒಳಗೊಂಡ ಪರಿಕಲ್ಪನೆ. ಸಂಸ್ಕೃತಿಯು ಜನರ ಜೀವನ ವಿಧಾನ. ಹೀಗಾಗಿ ನಮ್ಮಲ್ಲಿ ಬಹು ಸಂಸ್ಕೃತಿಗಳಿವೆ. ಸಂಸ್ಕೃತಿಗಳ ಭಾಗವಾಗಿ ಧರ್ಮಗಳೂ, ಧಾರ್ಮಿಕತೆಗಳೂ ಇವೆ. ಆದ್ದರಿಂದ ಧರ್ಮವೇ ಸಂಸ್ಕೃತಿಯಲ್ಲ, ಸಂಸ್ಕೃತಿಯೊಳಗೆ ಧರ್ಮಗಳು ಮತ್ತು ಧಾರ್ಮಿಕತೆ ಇರುತ್ತವೆ.

ಭಾರತೀಯತೆ ಎನ್ನುವುದು ಸನಾತನ ಕಾಲದಿಂದ ಸಮಕಾಲೀನದವರೆಗೆ ಎಲ್ಲವನ್ನೂ ಒಳಗೊಂಡ ಬಹುರೂಪಿ ಪರಿಕಲ್ಪನೆ. ಹೊರತಳ್ಳುವುದು ಭಾರತೀಯತೆಯಲ್ಲ ಒಳಗೊಳ್ಳುವುದು ಭಾರತೀಯತೆ. ಸನಾತನತೆ, ಮಧ್ಯಕಾಲೀನತೆ, ಆಧುನಿಕತೆಗಳೆಲ್ಲ ಸೇರಿದ್ದು ಭಾರತೀಯತೆ. ನಮ್ಮ ಸಾಹಿತ್ಯ ಬಹುರೂಪಿ ಅಭಿವ್ಯಕ್ತಿಯನ್ನು ನಿರಂತರವಾಗಿ ಸಾಧಿಸುತ್ತ ಬಂದಿದೆ. ಇಂದಿಗೂ 'ಸರ್ವಜನಾಂಗದ ಶಾಂತಿಯ ತೋಟ'ದ ನೋಟವನ್ನು ಒಳಗೊಂಡಿದೆ. ವೈವಿಧ್ಯಮಯ ಅಭಿವ್ಯಕ್ತಿ ಸಂವೇದನೆಗಳನ್ನು ಕನ್ನಡಕ್ಕೆ ಕೊಟ್ಟಿದೆ. ಹಿಂದಿನಿಂದ ಜೈನ, ವಚನ, ವೈದಿಕಾದಿ ಧಾರ್ಮಿಕ ಮೂಲದಿಂದಲೇ ಮನುಷ್ಯರ ಮೂಲ ಸಂವೇದನೆಗಳನ್ನು ಕಟ್ಟಿಕೊಟ್ಟರೆ, ಇಪ್ಪತ್ತನೇ ಶತಮಾನದಲ್ಲಿ ದಲಿತ ಸಂವೇದನೆ, ಮುಸ್ಲಿಂ ಸಂವೇದನೆ, ಸ್ತ್ರೀ ಸಂವೇದನೆಗಳ ವೈವಿಧ್ಯ ಬಯಲುಗೊಂಡಿದೆ. ಕನ್ನಡಕ್ಕೆ ಕ್ರೈಸ್ತರ ಕೊಡುಗೆಯೂ ದಾಖಲಾರ್ಹವಾಗಿದೆ.

ಕನ್ನಡ ಸಾಹಿತ್ಯವು ಏಕಕಾಲಕ್ಕೆ ಸ್ಥಳೀಯವೂ ರಾಷ್ಟ್ರೀಯವೂ ಅಂತರರಾಷ್ಟ್ರೀಯವೂ ಆಗುವ ಸಂವೇದನಾ ಶಕ್ತಿಯನ್ನು ಹೊಂದಿದೆ. ವಿಶೇಷವಾಗಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ನಮ್ಮ ಸಮಕಾಲೀನ ಸ್ಥಳೀಯ ಬದುಕು ಸಶಕ್ತವಾಗಿ ಮೂಡಿಬಂದಿರುವುದನ್ನು ಕಾಣಬಹುದು. ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪ್ರತಿಸ್ಪಂದಿಸಿ ರಾಷ್ಟ್ರೀಯ ಸಂವೇದನೆಗೆ ಸಾಕ್ಷಿಯಾಗಿರುವುದನ್ನು

ನೋಡಬಹುದು. ಗಾಂಧಿ, ಅಂಬೇಡ್ಕರ್ ಅವರ ಕುರಿತು ಬಂದಿರುವ ನೂರಾರು ಕವನಗಳು ಕನ್ನಡ ಸಾಹಿತ್ಯದ ರಾಷ್ಟ್ರೀಯ ಸ್ಪಂದನೆಗೆ ಸಾಕ್ಷಿಯಾಗಿವೆ. ಅಂತೆಯೇ ಅಂತರರಾಷ್ಟ್ರೀಯ ವಿದ್ಯಮಾನಗಳು ಸ್ಥಳೀಯವಾಗಿ, ರಾಷ್ಟ್ರೀಯವಾಗಿ ಮಾಡಿದ ಪ್ರಭಾವ ಪರಿಣಾಮಗಳು ನಮ್ಮ ಸಾಹಿತ್ಯದಲ್ಲಿ ಬಂದಿವೆ. ಬೆಂಜಾಮಿನ್ ಮೊಲಾಯಿಸ್ ಎಂಬ ಕ್ರಾಂತಿಕಾರಿ ಕಪ್ಪು ಕವಿ ನಿಧನರಾದಾಗ ಕನ್ನಡದಲ್ಲಿ ಮೂವತ್ತಕ್ಕೂ ಹೆಚ್ಚು ಕವಿತೆಗಳು ಹುಟ್ಟಿದವು. ನೆಲ್ಸನ್ ಮಂಡೆಲ ಬಿಡುಗಡೆಯಾದಾಗ ಕನ್ನಡವೂ ಸಂಭ್ರಮಿಸಿತು; ಕವಿತೆಯಾಯಿತು. ಇದು ಕನ್ನಡತೆ; ಇದೇ ಭಾರತೀಯತೆ.

--*-*-*

ಸೌಹಾರ್ದ-ಸಂವಾದ

ಧರ್ಮಕಾರಣ ಮತ್ತು ರಾಜ ಕಾರಣದ ಭಾಗವಾಗಿದ್ದುಕೊಂಡೇ ತಂತಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ವಿವಿಧ ವಿಧಾನಗಳಲ್ಲಿ ಉಳಿಸಿಕೊಂಡ ಅನೇಕ ಉದಾಹರಣೆಗಳನ್ನು ಗಾಂಧಿ, ಗೋರಾ, ಅಂಬೇಡ್ಕರ್ ಹಾಗೂ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಕಾಣಬಹುದು. ಈ ಮೂಲಕ ಪ್ರಸ್ತುತ ಸಮಕಾಲೀನ ಸಂದರ್ಭದಲ್ಲಿ ನಾವು ಕಲಿಯಬೇಕಾದ ಸ್ವಾತಂತ್ರ್ಯ ಮತ್ತು ಸಂವಾದದ ಪಾಠ ಸಾಕಷ್ಟಿದೆ. ಸಾಹಿತ್ಯ, ಧರ್ಮ, ಸಂಸ್ಕೃತಿ, ರಾಜಕಾರಣವೇ ಮುಂತಾದ ಎಲ್ಲ ಕ್ಷೇತ್ರಗಳಲ್ಲೂ ಅಭಿಪ್ರಾಯ ಸ್ವಾತಂತ್ರ್ಯ ಮತ್ತು ಸಂವಾದಕ್ಕೆ ಮನ್ನಣೆ ನೀಡುವ ಮಾದರಿ ಹಿಂದೆಂದಿಗಿಂತ ಇಂದು ಮುಖ್ಯವಾಗಿದೆ. ಇಲ್ಲಿ

ಫ್ರಾನ್ಸ್‌ನ ಚಿಂತಕ ವಾಲ್ಟೇರ್ ಹೇಳಿದ ಒಂದು ಮಾತು ಉಲ್ಲೇಖನೀಯ: 'ನಿನ್ನ ಯಾವ ಮಾತನ್ನೂ ನಾನು ಒಪ್ಪುವುದಿಲ್ಲ. ಆದರೆ, ನಿನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯವನ್ನು ನನ್ನ ಕೊನೆಯ ಉಸಿರು ಇರುವವರೆಗೂ ಸಮರ್ಥಿಸುತ್ತೇನೆ.' - ವಾಲ್ಟೇರ್ ಅವರ ಈ ಮಾತು ನಮ್ಮ ದೇಶದ, ಅಷ್ಟೇಕೆ ವಿಶ್ವದ ಮನದ ಮಾತಾದರೆ, ಸಂವಾದ ಮತ್ತು ಸ್ವಾತಂತ್ರ್ಯಗಳು ಅರ್ಥಪೂರ್ಣವಾಗುತ್ತವೆ. ಆದರೆ ನಾನು ಹಿಂದೆಯೇ ಪ್ರಸ್ತಾಪಿಸಿದಂತೆ ಪ್ರಸಿದ್ಧ ಪರಿಕಲ್ಪನೆಗಳನ್ನೇ ಅಪವ್ಯಾಖ್ಯಾನಕ್ಕೆ ಈಡುಮಾಡಲಾಗುತ್ತಿದೆ. ಸ್ವಾತಂತ್ರ್ಯದ ಪರಿಕಲ್ಪನೆಗೂ ಇದೇ ಗತಿ ಒದಗುತ್ತಿದೆ.

ಜನರ ಬದುಕುವ ಸ್ವಾತಂತ್ರ್ಯಕ್ಕೆ ಬದ್ಧವಾಗಿರುವ ಸಾಮಾಜಿಕ, ರಾಜಕೀಯ ಪ್ರಜ್ಞೆ ನಮ್ಮದಾಗಬೇಕು. ಅದೇ ಸಾಮಾಜಿಕ ಸಂಭ್ರಮ; ಅದೇ ರಾಜಕೀಯ ಸಂಭ್ರಮ; ಅದೇ ಸಾಹಿತ್ಯ ಸಂಭ್ರಮ. ಇದೇ ನನ್ನ ಆಶಯ. ●

ರೆಸಾರ್ಟ್ ನಲ್ಲಿ ಮಾರಾಮಾರಿ – ರಾಜ್ಯದ ರಾಜಕಾರಣದ ಕುಸಿತ

ಬಿಡದಿ ಈಗಲ್ಟನ್ ರೆಸಾರ್ಟ್ನಲ್ಲಿ ವಿಜಯನಗರ (ಹೊಸಪೇಟೆ) ಶಾಸಕ ಆನಂದ್ ಸಿಂಗ್ ಮೇಲೆ ಕಂಪ್ಲಿ ಶಾಸಕ ಜೆ.ಎನ್. ಗಣೇಶ್ ತೀವ್ರ ಹಲ್ಲೆ ನಡೆಸಿದ್ದು ರಾಜ್ಯದ ರಾಜಕಾರಣದ ಮಟ್ಟ ಕುಸಿದು ಪಾತಾಳ ಮುಟ್ಟಿದ್ದರ ಪ್ರತೀಕ. ಅವರು ಹಲ್ಲೆ ನಡೆಸಲು ದೊಣ್ಣೆ, ಹೂಕುಂಡ ಮುಂತಾದವನ್ನು ಬಳಸಿದ್ದರು ಎನ್ನಲಾಗಿದೆ. ರೆಸಾರ್ಟಿಗೆ ಹೋದ ಮರುದಿನ ಪರಸ್ಪರ ವಾಗ್ವಾದ ನಡೆದು, ತಡರಾತ್ರಿ ಹಲ್ಲೆಯಲ್ಲಿ ಕೊನೆಗೊಂಡಿದೆ ಎನ್ನಲಾಗಿದೆ. ಈಗ ಆಸ್ಪತ್ರೆಗೆ ದಾಖಲಾಗಿರುವ ಆನಂದ ಸಿಂಗ್ ಕೊಲೆ ಯತ್ನದ ಆಪಾದನೆ ಮಾಡಿ ದೂರು ಕೊಟ್ಟಿದ್ದು ಮತ್ತು ಗಣೇಶ್ ತಲೆಮರೆಸಿಕೊಂಡಿರುವುದು ಕಾಂಗ್ರೆಸ್ ಗೆ ತೀವ್ರ ಇರುಸು ಮುರಿಸಿನ ವಿಷಯವಾಗಿದೆ. ಈಗಾಗಲೇ ಕಾಂಗ್ರೆಸಿನ ಅತೃಪ್ತ ಶಾಸಕರ ಮೇಲೆ ಬಿಜೆಪಿ ಬೀಸಿದ ಬಲೆಯಿಂದ ಕಾಂಗ್ರೆಸ್ ತತ್ತರಗೊಂಡಿದೆ. ಮುಜುಗರಕ್ಕೂ ಒಳಗಾಗಿದೆ. ಈ ಪ್ರಕರಣದಿಂದ ಈ ಇಬ್ಬರೂ ಶಾಸಕರ ಮತ ಕಳೆದುಕೊಳ್ಳುವ ಅಪಾಯವೂ ಇದೆ. ದೂರದ ಗುರುಗ್ರಾಮದಲ್ಲಿ ತನ್ನದೇ ರೆಸಾರ್ಟ್ ವಾಸ್ತವ್ಯದಿಂದ ವ್ಯಾಪಕ ಟೀಕಗೆ ಒಳಗಾಗಿದ್ದ ಬಿಜೆಪಿಗೆ, ಕಾಂಗ್ರೆಸ್ ರೆಸಾರ್ಟ್ ವಾಸ್ತವ್ಯವೇ ಒಂದು ಅಸ್ತ್ರ ಕೊಟ್ಟಂತಾಗಿತ್ತು. ಈ ಹಲ್ಲೆ ಪ್ರಕರಣ ಬ್ರಹ್ಮಾಸ್ತ್ರವಾಗಬಹುದು.





ಈ ಹಲ್ಲೆ ಪ್ರಕರಣಕ್ಕೂ ಬಿಜೆಪಿಯ 'ಆಪರೇಷನ್ ಕಮಲ'ಕ್ಕೂ ಸಂಬಂಧವೂ ಇದೆ ಎನ್ನಲಾಗಿದೆ. ಬಿಜೆಪಿಯು ಇತ್ತೀಚೆಗೆ ನಡೆಸಿದ 'ಆಪರೇಷನ್ ಕಮಲ'ದ ಸಂದರ್ಭದಲ್ಲಿ, ಒಂದು ತಂಡದೊಂದಿಗೆ ಜೆ.ಎನ್. ಗಣೇಶ್ ಹಾಗೂ ಭೀಮಾ ನಾಯ್ಕ ಅವರು ಮುಂಬೈಗೆ ತೆರಳಿದ್ದರು. ಒಂದು ಹಂತದಲ್ಲಿ ಬಿಜೆಪಿ ಸೇರಲು ನಿರ್ಧರಿಸಿದ್ದ ಆನಂದ್ ಸಿಂಗ್ ಕೊನೆಯ ಕ್ಷಣದಲ್ಲಿ ಹಿಂದೆ ಸರಿದಿದ್ದಾರೆ. ಅಷ್ಟೇ ಅಲ್ಲ, ಮುಂಬೈಗೆ ತೆರಳಿದ ಈ ಕಾಂಗ್ರೆಸ್ ಸದಸ್ಯರ ಬಗ್ಗೆ ಪಕ್ಷದ ವರಿಷ್ಠರಿಗೆ ಮಾಹಿತಿ ನೀಡಿದ್ದಾರೆ. ಇದರಿಂದ ಗಣೇಶ್, ಭೀಮಾ ನಾಯ್ಕ ತೀವ್ರ ಮುಜುಗರಕ್ಕೆ ಒಳಗಾಗಿದ್ದರು. ಇದೇ ರೆಸಾರ್ಟಿನಲ್ಲಿ ತೀವ್ರ ವಾಗ್ವಾದಕ್ಕೆ ಕಾರಣವಾಗಿ ಹಲ್ಲೆಯಲ್ಲಿ ಕೊನೆಗೊಂಡಿದೆ, ಎನ್ನಲಾಗಿದೆ.

ಆನಂದ್ ಜೊತೆಗೆ ಈ ಇಬ್ಬರೂ ಶಾಸಕರ ಮುಸುಕಿನ ಗುದ್ದಾಟ ಆರಂಭವಾಗಿದ್ದು ಇತ್ತೀಚಿನ ಬೆಳವಣಿಗೆ ಏನಲ್ಲ. ವಿಧಾನಸಭೆ ಚುನಾವಣೆ ನಡೆದ ನಂತರದಿಂದಲೂ ಇದ್ದೇ ಇದೆ. ಬಿ.ಎಂ.ಎಂ. ಗಣಿ ಕಂಪನಿಯ ವಿಚಾರದಲ್ಲಿ ಆನಂದ್ ಹಾಗೂ ಭೀಮಾ ನಾಯ್ಕ ನಡುವೆ ಬಿರುಕು ಉಂಟಾಗಿತ್ತು. ಇವರು ಮತ್ತು ಆನಂದ ಸಿಂಗ್ ಪರಸ್ಪರರ ಕ್ಷೇತ್ರದಲ್ಲಿ ಮೂಗು ತೂರಿಸಿ ಘರ್ಷಣೆಗೆ ಕಾರಣವಾಗಿತ್ತು. ಅವರ ಬೆಂಬಲಿಗರ ನಡುವೆ ಹಲವು ಬಾರಿ ಘರ್ಷಣೆಯೂ ಆಗಿತ್ತು.

ಹಲ್ಲೆ ಪ್ರಕರಣ ಎಲ್ಲಿ ಹೋಗಿ ನಿಲ್ಲುತ್ತದೆ ಎಂಬುದರ ಮೇಲೆ, ಮೈತ್ರಿ ಸರಕಾರದ ಭದ್ರತೆಯೂ ಅವಲಂಬಿಸಿದೆ ಎಂದರೆ ತಪ್ಪಾಗಲಾರದು.

4 ವರ್ಷಗಳಿಂದ ಅವೈಜ್ಞಾನಿಕ ಚಟುವಟಿಕೆಗ....... ಪುಟ 16 ರಿಂದ

ನಡೆಯುತ್ತಿತ್ತು. ಅದನ್ನು ಹೈಟೆಕ್ ರೂಪದಲ್ಲಿ ಪತಂಜಲಿ ಕಂಪೆನಿ ಜನರಿಗೆ ಮಂಕುಬೂದಿ ಎರಚುತ್ತಿದೆ ಎಂದು ಅವುಗಳ ನಿಜಬಣ್ಣವನ್ನು ವಿಡಿಯೋ ರೆಕಾರ್ಡಿಂಗ್ ಮತ್ತು ಪ್ರಾಯೋಗಿಕವಾಗಿ ವಿವರಿಸಿದರು.

ಭಾರತದ ವೈದ್ಯಕೀಯ ರಂಗದಲ್ಲಿ ಭಾರಿ ಕ್ರಾಂತಿಕಾರಿ ಬದಲಾವಣೆ ತಂದ ಯಲ್ಲಪ್ಪಘಡ ಸುಬ್ಬರಾವ್ ಈ ದೇಶಕ್ಕೆ ಆದರ್ಶ ಆಗಲಿಲ್ಲ. ಮಾತ್ರವಲ್ಲ ಅವರ ಹೆಸರೂ ಕೂಡ ಬಹಳ ಜನರಿಗೆ ಗೊತ್ತಿಲ್ಲ. ಕ್ಯಾನ್ಸರ್ ರೋಗಕ್ಕೆ ಕಿಮೋಥೆರಪಿ, ಆನೆಕಾಲು ರೋಗಕ್ಕೆ ಮದ್ದನ್ನು ಕಂಡು ಹಿಡಿಯುವ ಅನೇಕ ಸಾಂಕ್ರಾಮಿಕ ರೋಗಗಳಿಂದ ಈ ದೇಶ ಮುಕ್ತವಾಗಿ ನಡೆಯಲು ಬುನಾದಿ ಹಾಕಿಕೊಟ್ಟವರು. ಆದರೆ ಬೂದಿ ಕೊಟ್ಟು ಜನರನ್ನು ಮಂಕುಬೂದಿ ಎರಚುವ ಸತ್ಯಸಾಯಿಬಾಬ ಈ ದೇಶಕ್ಕೆ ಮಹಾಪುರುಷ, ಎಲ್ಲ ರಾಜಕಾರಣಿಗಳ ಆರಾಧ್ಯ ದೈವ. ಇದು ಈ ದೇಶಕ್ಕಂಟಿರುವ ಅಜ್ಞಾನ ಎಂದ ಅವರು ಸಾಯಿಬಾಬ ಬೂದಿ ಹಂಚಿ ಕೋಟ್ಯಾಂತರ ರೂಗಳನ್ನು ಸಂಗ್ರಹಿಸಿದ ಆತನ ಜೀವನ ಶೈಲಿ ಸನ್ಯಾಸಿಗಿಂತ ವಿಲಾಸಿ ಜೀವನದಲ್ಲಿ ಉತ್ತುಂಗವಾಗಿತ್ತು. ಚಿನ್ನದ ಕಿರೀಟ, ಚಿನ್ನದ ಸಿಂಹಾಸನ ಆತನ ಆಸ್ತಿ ಇವೆಲ್ಲವೂ ಶ್ರೀಮಂತರಿಗೆ ಪವಾಡ ಎನ್ನುವ ಮೋಸದಿಂದ ವಾಚು, ಚೈನು, ಉಂಗುರ ಬಡವರಿಗೆ ಬೂದಿ ಹಂಚಿ ಸಂಪಾದಿಸಿದ ಅಕ್ರಮಗಳು ಎಂದ ಅವರು ಪ್ರಶ್ನೆ ಮಾಡುವ ಮನೋಭಾವ ಬೆಳೆಯುವವರೆಗೂ ಇಂತಹ ಬಾಬಾಗಳು ಜನರನ್ನು ದೋಚುತ್ತಲೇ ಇರುತ್ತಾರೆ ಎಂದು ವಿವರಿಸಿದರು. ಇಂದು ನಿಧನರಾದ ಸಿದ್ದಗಂಗಾ ಮಠದ ಸ್ವಾಮೀಜಿ ಪವಾಡಗಳಿಗೆ ಬಲಿ ಬೀಳದೆ ಸನ್ಯಾಸ ಧರ್ಮಕ್ಕೆ ಪೂರಕವಾಗಿ ಸರಳವಾಗಿ ಬದುಕಿ ಸಾಮಾಜಿಕ ಸೇವೆ ಮಾಡಿದರು ಎಂದರು.

ಜನರ ಪ್ರಶ್ನೆಗೆ ಉತ್ತರಿಸಿದ ಅವರು ವಾಸ್ತು ಎಂಬುದು ಯಾವ ವಿಜ್ಞಾನವೂ ಅಲ್ಲ, ವಾಸ್ತು ವಿನ್ಯಾಸವೂ ಅಲ್ಲ. ಅವೆಲ್ಲ ವ್ಯಾಪಾರಿ ಲಕ್ಷಣಗಳಿಂದ ಕೂಡಿದ ಮೂಢನಂಬಿಕೆ ಮತ್ತು ಪುರೋಹಿತಶಾಹಿಗಳಿಗೆ, ಕಾರ್ಪೊರೇಟ್ ಕಂಪನಿಗಳಿಗೆ ಹಣ ತರುವ ಧಂದೆ ಎಂದರು. ದೇವರು–ದೆವ್ವ ಮೈಮೇಲೆ ಬರಲು ನಾಲ್ಕು ಕಾರಣಗಳು ಇವೆ. ಒಂದು ವಿಟಮಿನ್ ಕೊರತೆಯಿಂದಾಗುವ ದೈಹಿಕ ಕಾರಣ, ಎರಡನೆಯದು ಮಾನಸಿಕ ಪ್ರಕ್ಷೋಭೆಗೆ ಒಳಗಾಗಿ ಭೀತಿಯಿಂದ ಅಪ್ಪಿಕೊಳ್ಳುವ ಮಾನಸಿಕ ಕಾರಣ. ಮೂರನೆಯದಾಗಿ ಸುಪ್ತಮನಸಿನ ಅತೃಪ್ತ ಭಾವನೆಗಳ ದಕ್ಕಿಸಿಕೊಳ್ಳುವ ಭ್ರಾಮಕ ಕಾರಣ ಮತ್ತು ಹಣ ಮಾಡುವ ಧಂಧೆಯ ಭಾಗವಾಗಿ ಧರ್ಮಲೂಟಿ ಕಾರಣ ಎಂದು ವಿವರಿಸಿದರು.

ಯೋಗ ವೈಜ್ಞಾನಿಕವಾಗಿ ಒಂದು ವ್ಯಾಯಾಮವೇ ಅಲ್ಲ, ಅದರ ಮೂಲಕ ಹೇಳುವ ಆರೋಗ್ಯ ಬಲವರ್ಧನೆ, ಕ್ಯಾನ್ಸರ್ ನಿವಾರಣೆ, ಅಸ್ತಮಗಳಿಗೆ ರಾಮಬಾಣ, ಸಂಧಿ ವಾತ, ಹೃದಯಾಘಾತ ರಕ್ಷಣೆ ಇವೆಲ್ಲವುಗಳಿಗೆ ಆಧಾರವಿಲ್ಲ. ಇದು ಕೂಡ ಆರೋಗ್ಯದ ಮತ್ತು ವ್ಯಾಯಾಮದ ಹೆಸರಲ್ಲಿ ನಡೆಸುವ ಧಂದೆ ಎಂದ ಅವರು ಜಿಮ್, ಆಟಗಳು, ವಾಕಿಂಗ್, ನಿಯಮಿತ ಆಹಾರ ಸೇವನೆಗಳು ವ್ಯಾಯಾಮದ ಭಾಗವಾಗಿವೆ ಎಂದರು. ಬರಿ ಕೈಯಲ್ಲಿ ಆಪರೇಷನ್ ಮಾಡುವ, ಚೈನು ಕೊಡುವ, ಇನ್ನು ಅನೇಕ ಬಾಬಾಗಳು ಪವಾಡ ಎಂದು ಬಿಂಬಿಸುವ ಚಟುವಟಿಕೆಗಳನ್ನು ಬಯಲು ಮಾಡಿ ವೈಜ್ಞಾನಿಕ ಕಾರಣ ತಿಳಿಸಿದರು.

ಹಸಿರಭೂಮಿ ಪ್ರತಿಷ್ಠಾನದ ಖಜಾಂಚಿ ಹಾಗೂ ನಿಟ್ಟೂರು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಮಂಜುನಾಥ್ ಸಂವಾದ ಉದ್ಘಾಟಿಸಿ ಮಾತನಾಡಿ ದೇಶ ಇಂದು ಎದುರಿಸುತ್ತಿರುವ ಅನಕ್ಷರತೆ, ಅಜ್ಞಾನ, ಬಡತನ ಮತ್ತು ಮೂಢನಂಬಿಕೆಗಳಿಂದ ಹೊರಬರಲು ವೈಜ್ಞಾನಿಕ ಮನೋಧರ್ಮ ಬೆಳಸಿಕೊಳ್ಳಬೇಕು ಎಂದರು. ಮೂಢನಂಬಿಕೆಯ ಭಯದಿಂದ ಬಿಡುಗಡೆ ಹೊಂದಲು ನೆಲ–ಜಲ ಸಂರಕ್ಷಣೆ ಮಾಡುವ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಕರೆನೀಡಿದರು.

'ಶ್ರಮ' ಸಮಾಜ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಅಧ್ಯಕ್ಷ ಧರ್ಮೆಶ್ ಅಧ್ಯಕ್ಷತೆ ವಹಿಸಿದ್ದರು. ಅಹಮದ್ ಹಗರೆ ಕಾರ್ಯಕ್ರಮದ ನಿರ್ವಹಣೆ ನಡೆಸಿದರು ಟ್ರಸ್ಟಿನ ಕಾರ್ಯದರ್ಶಿ ನವೀನ್‌ಕುಮಾರ್ ವಂದಿಸಿದರು. •

ರಕ್ಷಣಾ ನೌಕರರ ಮುಷ್ಕರ: ಎಲ್ಲ ರಕ್ಷಣಾ ಘಟಕಗಳು 3 ದಿನಗಳ ಕಾಲ ಸ್ಥಬ್ಧ

ರಕ್ಷಣಾ ವಲಯದ ಉದ್ದಿಮೆಗಳಲ್ಲಿ ಕೆಲಸ ಮಾಡುತ್ತಿರುವ ಸಿವಿಲಿಯನ್ ನೌಕರರ ಮೂರು ಅಖಿಲ ಭಾರತ ಒಕ್ಕೂಟಗಳು ಜನವರಿ 23ರಿಂದ 25 ರ ವರೆಗೆ ಮೂರು ದಿನಗಳ ಮುಷ್ಕರಕ್ಕೆ ಕರೆ ನೀಡಿದ್ದು, ಅದು ಸಂಪೂರ್ಣ ಯಶಸ್ವಿಯಾಗಿದೆ ಎಂದು ವರದಿಯಾಗಿದೆ. ಶಸ್ತ್ರಾಸ್ತ್ರಗಳ(ಆರ್ಡಿನೆನ್ಸ್) ಕಾರ್ಖಾನೆಗಳು, ನಾವಿಕ ಡಾಕ್‌ಯಾರ್ಡ್‌ಗಳು, ಸ್ಟೇಶನ್ ವರ್ಕ್‌ಶಾಪ್‌ಗಳು, ಸೇನಾ ಡಿಪೋಗಳು ಮುಂತಾದವುಗಳೆಲ್ಲ ಮುಚ್ಚಿವೆ, ದಿಲ್ಲಿ, ಚೆನ್ನೈ, ಪುಣೆ, ಜಬಲ್‌ಪುರ್, ಕಾನ್ಪುರ, ಮುಂಬೈ, ಆಗ್ರಾ, ಕೊಲ್ಕತಾ ಮುಂತಾದ ಎಲ್ಲ ಪ್ರಮುಖ ಕೇಂದ್ರಗಳ ರಕ್ಷಣಾ ಘಟಕಗಳಲ್ಲಿ ಮುಷ್ಕರ ಅತ್ಯಂತ ಯಶಸ್ವಿಯಾಗಿದೆ ಎಂದು ತಿಳಿದು ಬಂದಿದೆ. ಅಖಿಲ ಭಾರತ ರಕ್ಷಣಾ ನೌಕರರ ಒಕ್ಕೂಟ(ಎಐಡಿಇಎಫ್), ಭಾರತೀಯ ರಾಷ್ಟ್ರೀಯ ರಕ್ಷಣಾ ಕಾರ್ಮಿಕರ ಒಕ್ಕೂಟ(ಐಎನ್‌ಡಿಡಬ್ಲ್ಯುಎಫ್) ಮತ್ತು ಭಾರತೀಯ ಪ್ರತಿರಕ್ಷಾ ಮಜ್ದೂರ್ ಸಂಘ್(ಬಿಪಿಎಂಎಸ್)ನ ಒಟ್ಟು ನಾಲ್ಕು ಲಕ್ಷದಷ್ಟು ಸದಸ್ಯರು ಈ ಮುಷ್ಕರದಲ್ಲಿ ಭಾಗವಹಿಸಿದ್ದಾರೆ.

42 ಆರ್ಡಿನೆನ್ಸ್ ಫ್ಯಾಕ್ಟರಿಗಳು, ಡಿಆರ್‌ಡಿಒ, ಹಲವಾರು ಮಿಲಿಟರಿ ಇಂಜಿನಿಯರಿಂಗ್ ಸರ್ವಿಸ್(ಎಂಇಎಸ್) ಕೇಂದ್ರಗಳು, ಆರ್ಮಿ ಸ್ಟೇಷನ್ ವರ್ಕ್‌ಶಾಪ್‌ಗಳು ಮುಂತಾದವುಗಳನ್ನು ಕ್ರಮೇಣ ಕಳಚಿ ಹಾಕಿ, ಆಮೂಲಕ ದೇಶಿ–ವಿದೇಶಿ ಖಾಸಗಿ ಕುಳಗಳಿಗೆ ಅನುಕೂಲ ಮಾಡಿ ಕೊಡಲು ಹೊರಟಿರುವ ಭಾರತ ಸರಕಾರದ ಕ್ರಮ ಅತ್ಯಂತ ಅಪಾಯಕಾರಿ ಮತ್ತು ಮತ್ತು ವಿನಾಶಕಾರಿ ನಡೆ ಎಂದು ಹೇಳುತ್ತ ಇದನ್ನು ಪ್ರತಿರೋಧಿಸಲು ಈ ವಲಯದ ಮೂರು ಪ್ರಮುಖ ಕಾರ್ಮಿಕ ಒಕ್ಕೂಟಗಳು ಜಂಟಿಯಾಗಿ ಈ ಮುಷ್ಕರಕ್ಕೆ ಕರೆ ನೀಡಿವೆ.

ಮೋದಿ ಸರಕಾರದ ಈ ಕ್ರಮಗಳಿಂದಾಗಿ ಈಗಾಗಲೇ ಸಾರ್ವಜನಿಕ ವಲಯದ ಅರ್ಧದಷ್ಟು ಆರ್ಡಿನೆನ್ಸ್ ಕಾರ್ಖಾನೆಗಳು ಕೆಲಸವಿಲ್ಲದೆ ಮುಚ್ಚುತ್ತಿವೆ. ವಿಮಾನಗಳು, ನೌಕೆಗಳು ಮುಂತಾದವುಗಳಿಗೆ ವಿದೇಶಿ ಕಂಪನಿಗಳೊಂದಿಗೆ ರಕ್ಷಣಾ ಖರೀದಿ ವ್ಯವಹಾರಗಳನ್ನು ಈ ಸರಕಾರ ತರಾತುರಿಯಲ್ಲಿ ಮಾಡುತ್ತಿದ್ದು, ದೊಡ್ಡ ಹಗರಣಗಳು ಮತ್ತು ರಾಷ್ಟ್ರೀಯ ಖಜಾನೆಗೆ ಅಪಾರ ನಷ್ಟಗಳಿಗೆ ದಾರಿ ತೆರೆದು ಕೊಳ್ಳಾಗುತ್ತಿದೆ ಎಂದು ಈ ಮುಷ್ಕರಕ್ಕೆ ಸಂಪೂರ್ಣ ಬೆಂಬಲ ನೀಡುತ್ತ ಸಿಐಟಿಯು ಹೇಳಿದೆ.

ರಕ್ಷಣಾ ಉತ್ಪಾದನೆಯಲ್ಲಿ ಕಳೆದ ಏಳು ದಶಕಗಳಲ್ಲಿ ಕಟ್ಟಿ ಬೆಳೆಸಿದ ಸಮಸ್ತ ದೇಶೀ ಉತ್ಪಾದನಾ ಸಾಮರ್ಥ್ಯದಿಂದಾಗಿ ರಕ್ಷಣಾ ಆವಶ್ಯಕತೆಗಳ 75% ಕ್ಕೂ ಹೆಚ್ಚು ಸಾಮಗ್ರಿಗಳನ್ನು ದೇಶದಲ್ಲಿಯೇ ಉತ್ಪಾದಿಸಲಾಗುತ್ತಿದೆ. ಆದರೆ ಮೋದಿ ಸರಕಾರದ ಇಡೀ ರಕ್ಷಣಾ ಖರೀದಿ ಧೋರಣೆಯು ಇದನ್ನು ಧ್ವಂಸ ಮಾಡುವ ದಿಕ್ಕಿನಲ್ಲಿದೆ. ಇದು ನಮ್ಮ ರಾಷ್ಟ್ರೀಯ ಭದ್ರತೆಯ ವಿರುದ್ಧ ಒಂದು ಪಿತೂರಿಯಲ್ಲದೆ ಬೇರೇನೂ ಅಲ್ಲ, ದೇಶೀ ಸಾಮರ್ಥ್ಯವನ್ನು ಹಾಳುಗೆಡವಿ ನಾವು ಸದಾ ವಿದೇಶಿ ಕಂಪನಿಗಳನ್ನು ಅವಲಂಬಿಸುವಂತೆ ಮಾಡುತ್ತಿದೆ ಎಂದು ಸಿಐಟಿಯು ಹೇಳಿದೆ. ಜನವರಿ 8–9ರ ಸಾರ್ವತ್ರಿಕ ಮುಷ್ಕರದಲ್ಲೂ ಈ ಅಂಶವನ್ನು ಎತ್ತಿ ಹೇಳಲಾಗಿತ್ತು. ಈಗ ಈ ಮೂರು ದಿನಗಳ ಮುಷ್ಕರ ರಾಷ್ಟ್ರೀಯ ಹಿತಗಳನ್ನು ಮತ್ತು ನಿರ್ದಿಷ್ಟವಾಗಿ ರಾಷ್ಟ್ರೀಯ ಭದ್ರತೆಯನ್ನು ರಕ್ಷಿಸುವ ಕ್ರಮ ಎಂದು ಸಿಐಟಿಯು ಅಭಿಪ್ರಾಯ ಪಟ್ಟಿದೆ. ಈ ಮುಷ್ಕರವನ್ನು ಬೆಂಬಲಿಸಿ ಸೌಹಾರ್ದ ಕಾರ್ಯಾಚರಣೆಗಳನ್ನು ನಡೆಸಬೇಕು ಎಂದೂ ಅದು ತನ್ನ ಘಟಕಗಳಿಗೆ ಕರೆ ನೀಡಿತ್ತು.

ಎಸ್‌ಎಫ್‌ಐನ ಪತ್ರಿಕೆಯ ಆನ್‌ಲೈನ್ ಆವೃತ್ತಿ ಆರಂಭ

ಭಾರತ ವಿದ್ಯಾರ್ಥಿ ಫೆಡರೇಶನ್(ಎಸ್‌ಎಫ್‌ಐ)ನ ಕೇಂದ್ರೀಯ ಕಾರ್ಯಕಾರಿ ಸಮಿತಿಯ ಮಾಸಿಕ ಪತ್ರಿಕೆ 'ಸ್ಟುಡೆಂಟ್ಸ್ ಸ್ಟ್ರಗಲ್'ನ ಆನ್‌ಲೈನ್ ಆವೃತ್ತಿಗೆ ಜನವರಿ 23ರಂದು ಸೀತಾರಾಂ ಯೆಚುರಿಯವರು ಚಾಲನೆ ನೀಡಿದರು. ಯೆಚುರಿ ಈ ಹಿಂದೆ ಎಸ್‌ಎಫ್‌ಐನ ಅಧ್ಯಕ್ಷರೂ, 'ಸ್ಟುಡೆಂಟ್ ಸ್ಟ್ರಗಲ್' ಪತ್ರಿಕೆಯ ಸಂಪಾದಕರೂ ಆಗಿದ್ದವರು. ಎಐಕೆಎಸ್‌ನ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ ಮತ್ತು ಎಸ್‌ಎಫ್‌ಐನ ಮಾಜಿ ಪ್ರಧಾನ ಕಾರ್ಯದರ್ಶಿ ವಿಕ್ರಮ್ ಸಿಂಗ್ ಕೂಡ ಕಾರ್ಯಕ್ರಮದಲ್ಲಿ ಹಾಜರಿದ್ದರು. ಎಸ್‌ಎಫ್‌ಐ ಅಧ್ಯಕ್ಷ ವಿ ಪಿ ಸಾನು ಅಧ್ಯಕ್ಷತೆ ವಹಿಸಿದರು. ಪದೆಧಾನ ಕಾರ್ಯದರ್ಶಿ ಮಯೂಖ್ ಬಿಸ್ವಾಸ್ ಸ್ವಾಗತಿಸಿದರು. ಪತ್ರಿಕೆಯ ಸಂಪಾದಕ ನಿತೀಶ್ ನಾರಾಯಣನ್ ಆನ್‌ಲೈನ್ ಆವೃತ್ತಿಯ ಪರಿಕಲ್ಪನೆಯನ್ನು ಪರಿಚಯಿಸಿದರು. ಈಗ ಈ ಆನ್‌ಲೈನ್ ಆವೃತ್ತಿ studentstruggle.in ನಲ್ಲಿ ಲಭ್ಯವಿದೆ.



ರೈತರ ಸಾಲಮನ್ನಾ ಬಗ್ಗೆ ಏಕೆ ಈ ರಂಪಾಟ?

ಸಾಲ ಮನ್ನಾ ಸರಿಯಾದ ಕ್ರಮವಲ್ಲ ಎಂದು ವಾದಿಸುವವರು ಅದೇ ಕೆಲವು ಹಳಸಲು ಮಾತುಗಳನ್ನು ಪುನಃ ಪುನಃ ಹೇಳುತ್ತಾರೆ. ಹೆಚ್ಚಿನ ಮಂದಿ ಹೇಳುವಂತೆ ಕೃಷಿ ಬಿಕ್ಕಟ್ಟಿಗೆ ಸಾಲ ಮನ್ನಾ ಪರಿಹಾರವಲ್ಲ ಎಂಬುದೇನೋ ಸರಿ. ಆದರೆ, ಬಿಕ್ಕಟ್ಟನ್ನು ಪರಿಹರಿಸುವುದು ಸಾಲ ಮನ್ನಾದ ಉದ್ದೇಶವಲ್ಲ, ಸಂಕಷ್ಟಕ್ಕೊಳಗಾದ ರೈತರಿಗೆ ತತ್‌ಕ್ಷಣದ ಪರಿಹಾರ ಒದಗಿಸುವುದು ಅದರ ಉದ್ದೇಶ ಎಂಬುದನ್ನು ಅವರು ಗಮನಿಸುವುದಿಲ್ಲ. ಸಾಲ ಮನ್ನಾದ ಜೊತೆಯಲ್ಲಿ, ಕೃಷಿ ಬಿಕ್ಕಟ್ಟನ್ನು ಪರಿಹರಿಸುವ ಸಲುವಾಗಿ ಕೆಲವು ದೀರ್ಘಕಾಲೀನ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಇಂತಹ ಕ್ರಮಗಳ ಕೊರತೆ ಅಥವಾ ಈ ಕ್ರಮಗಳ ಜಾರಿ ಅತಿ ಅಸಮರ್ಪಕವಾಗಿರುವ ಕಾರಣದಿಂದ ಇಂದಿನ ಬಿಕ್ಕಟ್ಟು ಸೃಷ್ಟಿಯಾಗಿದೆ. ಮೇಲಾಗಿ, ಪರಿಹಾರ ಕ್ರಮಗಳನ್ನು ಸಮರ್ಪಕವಾಗಿ ಜಾರಿ ಮಾಡಿದರೂ ಸಹ ಬೆಳಗಾಗುವುದರಲ್ಲಿ ಬಿಕ್ಕಟ್ಟು ಪರಿಹಾರವಾಗುವುದಿಲ್ಲ. ಅದಕ್ಕೆ ಸ್ವಲ್ಪ ಸಮಯ ಹಿಡಿಯುತ್ತದೆ. ಈ ಅವಧಿಯಲ್ಲಿ, ಸಾಲ ಮನ್ನಾ ರೀತಿಯ ಕ್ರಮಗಳು ರೈತರ ಮಾನ ಮತ್ತು ಜೀವವನ್ನು ಉಳಿಸುತ್ತವೆ.

ಪ್ರೊ. ಸಿ.ಪಿ.ಚಂದ್ರಶೇಖರ್ ಅನು: ಕೆ.ಎಂ.ನಾಗರಾಜ್

ರಾಜಾಸ್ಥಾನ, ಮಧ್ಯಪ್ರದೇಶ ಮತ್ತು ಛತ್ತೀಸ್‌ಘಡ ರಾಜ್ಯಗಳಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರಗಳು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಕೃಷಿ ಸಾಲ ಮನ್ನಾ ಮಾಡುವುದಾಗಿ ಕೊಟ್ಟಿದ್ದ ಭರವಸೆಯನ್ನು ಕಾರ್ಯಗತಗೊಳಿಸುವ ತೀರ್ಮಾನವು ಒಂದು ವಿವಾದವನ್ನು ಉಂಟುಮಾಡಿದೆ. ವಿರೋಧ ಪಕ್ಷವಷ್ಟೇ ಈ ತೀರ್ಮಾನವನ್ನು ವಿರೋಧಿಸುತ್ತಿಲ್ಲ. ಹಾಗೆ ನೋಡಿದರೆ, ಭಾರತೀಯ ಜನತಾ ಪಕ್ಷವು ಆಡಳಿತ ನಡೆಸುತ್ತಿರುವ ಉತ್ತರ ಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಈಗಾಗಲೇ ಸಾಲ ಮನ್ನಾ ಮಾಡಿರುವ ಕಾರಣದಿಂದ, ಅದನ್ನು ಸಾರಾಸಗಟಾಗಿ ವಿರೋಧಿಸುತ್ತಿಲ್ಲ. ಈ ಮೂರೂ ರಾಜ್ಯಗಳಲ್ಲಿ ವಿರೋಧ ಪಕ್ಷವಾಗಿರುವ ಭಾರತೀಯ ಜನತಾ ಪಕ್ಷವು ತನಗೆ ವಿರೋಧವಿರುವುದು ಸಾಲ ಮನ್ನಾದ ಬಗ್ಗೆ ಅಲ್ಲ, ಅದನ್ನು ಜಾರಿ ಮಾಡುತ್ತಿರುವ ವಿಧಾನದ ಬಗ್ಗೆ ಎಂದು ಹೇಳುವ ಮೂಲಕ ರೈತರನ್ನು ವಂಚಿಸುತ್ತಿದೆ. ಸಾರಾಸಗಟಾಗಿ ಸಾಲ ಮನ್ನಾ ವಿರೋಧಿಸುವವರು ಯಾರೆಂದರೆ, ನವ-ಉದಾರವಾದದ ಸಮರ್ಥಕರು. ರೈತರ ಸಾಲ ಮನ್ನಾ ಮಾಡುವ ತೀರ್ಮಾನವು ವಿನಾಶದ ದಾರಿ ಎಂಬುದು ಅವರ ವಾದ.

ಸಾಲ ಮನ್ನಾ ವಿರೋಧಿಸಲು ಕಾರಣಗಳೇನು ಎಂಬುದನ್ನು ತಿಳಿಯುವ ಮೊದಲು, ಈ ಟೀಕಾಕಾರರು ಕಡೆಗಣಿಸಿರುವ ಅಂಶಗಳನ್ನು ಗಮನಿಸಬೇಕಾಗುತ್ತದೆ. ಉದಾರವಾದಿ ನೀತಿಗಳು ಆರಂಭವಾದಾಗಿನಿಂದಲೂ (1991) ನಮ್ಮ ದೇಶದ ಆರ್ಥಿಕ ನೀತಿಗಳು ಅಗಾಧವಾಗಿ ನಗರ ಪಕ್ಷಪಾತಿಯಾಗಿದ್ದ ಕಾರಣದಿಂದಾಗಿ ಕೃಷಿ ಸಾಲ ಮತ್ತು ಅದನ್ನು ಮನ್ನಾ ಮಾಡುವ ಬಗ್ಗೆ ಸಮಸ್ಯೆಗಳು ಉಂಟಾಗಿವೆ.

ಕೃಷಿಯ ಬಗ್ಗೆ ಸರ್ಕಾರಗಳು ಅನೇಕ ರೀತಿಯ ಅಸಡ್ಡೆ ತೋರಿಸಿವೆ. ಕೃಷಿಯ ಮೇಲಿನ ಸಾರ್ವಜನಿಕ ಹೂಡಿಕೆ ಅನೇಕ ವರ್ಷಗಳಿಂದಲೂ ಇಳಿಯುತ್ತಾ ಬಂದಿದೆ. ಬೆಳಕಿಗೆ ಬಂದ ಹೊಸ ಕೃಷಿ ತಂತ್ರಜ್ಞಾನ ಸಂಬಂಧಿತ ಮಾಹಿತಿ ಹಾಗೂ ಉತ್ತಮ ಕೃಷಿ ಪದ್ಧತಿಗಳ ಬಗ್ಗೆ ರೈತರಿಗೆ ತಿಳುವಳಿಕೆ ಕೊಡುವ ಉದ್ದೇಶದಿಂದ ಸರ್ಕಾರ ಒದಗಿಸುತ್ತಿದ್ದ ಕೃಷಿ ವಿಸ್ತರಣಾ ಸೇವೆಗಳನ್ನು ಬರು ಬರುತ್ತಾ ಮೆಲ್ಲ ಮೆಲ್ಲನೆ ನಿಲ್ಲಿಸಲಾಯಿತು. ಅರುವತ್ತರ ದಶಕದಲ್ಲಿ ಹಸಿರು ಕ್ರಾಂತಿ ಸಂಭವಿಸಲು ಕಾರಣವಾಗಿದ್ದ ಕೃಷಿ ಸಂಶೋಧನೆಗೆ ಕೊಟ್ಟಿದ್ದ ಒತ್ತು ಮತ್ತು ಅದಕ್ಕೆ ಒದಗಿಸಿದ ಅಗತ್ಯ ಸಂಪನ್ಮೂಲಗಳನ್ನು ಕ್ರಮೇಣ ಕಡಿಮೆ ಕಡಿಮೆ ಮಾಡುತ್ತಾ ಬರಲಾಗಿದೆ. ಉದಾರವಾದಿ "ಸುಧಾರಣೆಗಳ" ಪ್ರಚೋದನೆಯ ಫಲವಾಗಿ ಜಾರಿಗೆ ಬಂದ ವಿದೇಶ ವ್ಯಾಪಾರ ಒಪ್ಪಂದಗಳು ಮತ್ತು ಅದರ ಜೊತೆಯಲ್ಲೇ ಆಂತರಿಕವಾಗಿ ಕಳಚಿ ಹಾಕಿದ ನಿರ್ಬಂಧಗಳು ಮತ್ತು ಅಳವಡಿಸಿಕೊಂಡ ಏರ್ಪಾಡುಗಳ ಪರಿಣಾಮವಾಗಿ ಕೃಷಿ ಉತ್ಪಾದನಾ ವೆಚ್ಚಗಳು ಏರಿದವು. ಅದೇ ಸಮಯದಲ್ಲಿ, ರೈತರ ಫಸಲಿಗೆ ಸರ್ಕಾರ ನಿಗದಿಮಾಡುತ್ತಿದ್ದ ಬೆಲೆಗಳು ಲಾಭದಾಯಕವಾಗಿರಲಿಲ್ಲ. ಹಾಗಾಗಿ, ಬೇಸಾಯ ಒಂದು ಲಾಭವಿಲ್ಲದ ಉದ್ಯೋಗದಂತಾಗಿ ರೈತರ ಆದಾಯ ಇಳಿಯುತ್ತಾ ಬಂತು.

1950ರ ಮತ್ತು 1960ರ ದಶಕಗಳಲ್ಲಿಯೂ ದೇಶದ ಆರ್ಥಿಕ ನೀತಿಗಳು ನಗರ ಪಕ್ಷಪಾತಿಯಾಗಿಯೇ ಇದ್ದವು. ಇಂತಹ ನಿರ್ಲಕ್ಷ ಮತ್ತು 1960ರ ದಶಕದ ಮಧ್ಯಭಾಗದಲ್ಲಿ ಎದುರಾದ ಸತತ ಬರಗಾಲಗಳ ಪರಿಣಾಮವಾಗಿ ಒಂದು ಕೃಷಿ ಬಿಕ್ಕಟ್ಟು ಉಂಟಾಯಿತು. ಆರ್ಥಿಕ ನೀತಿಗಳಲ್ಲಿ ಕೆಲವು ಬದಲಾವಣೆ ಮತ್ತು ಹಸಿರು ಕ್ರಾಂತಿಯ ತಂತ್ರಜ್ಞಾನ ಅಳವಡಿಕೆಯ ಮೂಲಕ ದೇಶವು ಈ ಬಿಕ್ಕಟ್ಟಿನಿಂದ ಹೊರಬರಲು ಸಾಧ್ಯವಾಯಿತು. ಬ್ಯಾಂಕ್ ರಾಷ್ಟ್ರೀಕರಣದ ನಂತರ, ಕೃಷಿ ಚಟುವಟಿಕೆಗಳಿಗೆ ಕಡಿಮೆ ಬಡ್ಡಿ ಮತ್ತು ಆದ್ಯತೆಯ ಮೇಲೆ ಸಾಲ ಒದಗಿಸಲಾಯಿತು. ಬೀಜ, ರಸಗೊಬ್ಬರಗಳಿಗೆ ಸಬ್ಸಿಡಿ ಒದಗಿಸಲಾಯಿತು. ರೈತರ ಫಸಲಿಗೆ ಲಾಭದಾಯಕವಾದ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಿ ಸರ್ಕಾರವೇ ಅವುಗಳನ್ನು ಕೊಳ್ಳುತ್ತಿತ್ತು. ಇಂತಹ ಕ್ರಮಗಳಿಂದಾಗಿ, ಕೃಷಿ ಉತ್ಪಾದನೆಯ ಮೇಲಿನ ಹೂಡಿಕೆ ಹೆಚ್ಚಿತು ಮತ್ತು ರೈತರ ಆದಾಯವೂ ಸ್ಥಿರವಾಗಿತ್ತು. ಬೆಲೆಗಳು ಏರುತ್ತಿದ್ದ ಆಗಿನ ಪರಿಸ್ಥಿತಿಯಲ್ಲಿ, ಸರ್ಕಾರವು ಕೃಷಿಯ ಮೇಲಿನ ವೆಚ್ಚಗಳನ್ನು ಹೆಚ್ಚಿಸುವುದು ಮತ್ತು ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಒದಗಿಸುವುದು ಅಗತ್ಯವಾಗಿತ್ತು. ಆದರೆ, ಸರ್ಕಾರ ತರುವಾಯ ಅಳವಡಿಸಿಕೊಂಡ ನೀತಿಗಳಿಂದಾಗಿಯೇ ಕೃಷಿ ಬಿಕ್ಕಟ್ಟು ಉಂಟಾಯಿತು. ದೀರ್ಘಕಾಲದಿಂದಲೂ ಬಿಕ್ಕಟ್ಟಿಗೆ ಒಳಗಾದ ಕೃಷಿಕರಿಗೆ ರಕ್ಷಣೆ ಒದಗಿಸಲು ಸರ್ಕಾರ ಈಗ ಅಸಡ್ಡೆ ತೋರುತ್ತಿದೆ. ಅಲ್ಲದೆ, ಹಿಂದೆ ಅನುಸರಿಸಿದ್ದ ದೀರ್ಘ ಕಾಲೀನ ಪರಿಹಾರ ಕ್ರಮಗಳನ್ನು ಅಳವಡಿಸಿಕೊಳ್ಳಲು ಸರ್ಕಾರವು ನಿರಾಕರಿಸುತ್ತಿದೆ. ಹಾಗಾಗಿ, ಕೃಷಿ ಬಿಕ್ಕಟ್ಟು ತೀವ್ರಗೊಳ್ಳುತ್ತಿದೆ ಮತ್ತು ರೈತರ ಸಂಕಷ್ಟಗಳು ಹೆಚ್ಚುತ್ತಿವೆ.


ಕೃಷಿ ಉತ್ಪಾದನಾ ಸಾಮಗ್ರಿಗಳ ಬೆಲೆಗಳು ವಿಪರೀತವಾಗಿ ಏರಿರುವುದು, ಕನಿಷ್ಠ ಬೆಂಬಲ ಬೆಲೆಗಳ ಏರಿಕೆ ಅಸಮರ್ಪಕವಾಗಿರುವುದು ಮತ್ತು ಆಹಾರ ಧಾನ್ಯಗಳನ್ನು ಸರ್ಕಾರ ಕೊಳ್ಳುವ ಪ್ರಮಾಣ ಅತ್ಯಂತ ಕಡಿಮೆ ಮಟ್ಟದಲ್ಲಿರುವ ಅಂಶಗಳು ಸದ್ಯದ ಬಿಕ್ಕಟ್ಟಿಗೆ ಕಾರಣವಾಗಿವೆ. ಆದ್ದರಿಂದ, ಕನಿಷ್ಠ ಬೆಂಬಲ ಬೆಲೆ ಸಮಸ್ಯೆಯೇ ಇಂದಿನ ರೈತ ಚಳುವಳಿಯ ಪ್ರಧಾನ ಬೇಡಿಕೆಯಾಗಿರುವುದು ಆಶ್ಚರ್ಯವಲ್ಲ. ಬೆಳೆ ಉತ್ಪಾದನೆಗೆ ತಗಲುವ ಎಲ್ಲ ರೀತಿಯ ಖರ್ಚುಗಳು, ಸ್ವಂತ ಜಮೀನಿನ ಬಾಡಿಗೆ/ಗೇಣಿ, ಬೀಜ, ಗೊಬ್ಬರ, ಕೂಲಿ, ಇಂಧನ, ನೀರು, ಉಪಕರಣಗಳು, ಕುಟುಂಬ ತೊಡಗಿಸಿದ ಶ್ರಮಕ್ಕೆ ತಕ್ಕ ಕೂಲಿ ಮುಂತಾದವುಗಳಿಗೆ ತಗಲುವ ವೆಚ್ಚಗಳಿಗೆ ಅದರ ಶೇ.50ರಷ್ಟನ್ನು ಸೇರಿಸಿದಾಗ ಬರುವ ಮೊತ್ತವೇ ಕನಿಷ್ಠ ಬೆಂಬಲ ಬೆಲೆ ಎಂಬುದು ಸ್ವಾಮಿನಾಥನ್ ಆಯೋಗದ ಶಿಫಾರಸು. ಸರ್ಕಾರಗಳು ಘೋಷಿಸುವ ಬೆಂಬಲ ಬೆಲೆಗಳನ್ನು, ಹಣದ ಮೌಲ್ಯದ ದೃಷ್ಟಿಯಲ್ಲಿ ನೋಡಿದಾಗ, ಅದರಲ್ಲಿ ಹೆಚ್ಚಳ ಇಲ್ಲವೇ ಇಲ್ಲ ಎನ್ನಬಹುದು. ವಾಸ್ತವವಾಗಿ, ರೈತರು ತಮ್ಮ ಫಸಲನ್ನು ಘೋಷಣೆಯಾದ ಬೆಂಬಲ ಬೆಲೆಗಿಂತಲೂ ಬಹಳ ಕಡಿಮೆ ಬೆಲೆಯಲ್ಲಿ ಮಾರುತ್ತಾರೆ, ಏಕೆಂದರೆ, ಧಾನ್ಯ ಖರೀದಿಸುವ ಏಜೆನ್ಸಿಗಳು ಬಹಳ ತಡವಾಗಿ ಪ್ರತ್ಯಕ್ಷವಾಗುತ್ತವೆ. ಹಾಗಾಗಿ, ರೈತರಿಗೆ ಘೋಷಿತ ಬೆಂಬಲ ಬೆಲೆ ಸಿಗುವುದೇ ಇಲ್ಲ.

ಇಂತಹ ಪರಿಸ್ಥಿತಿಯಲ್ಲಿ ರೈತರು ಸಾಲ ತೀರಿಸುವುದು ಅಸಾಧ್ಯವಾಗುತ್ತದೆ. ಒಂದು ವೇಳೆ ಪ್ರಯಾಸಪಟ್ಟು ಸಾಲ ತೀರಿಸಿದರೂ ಅವರ ಕಷ್ಟಗಳು ಇನ್ನಷ್ಟು ಹೆಚ್ಚುತ್ತವೆ. ಸಾಲ ತೀರಿಸಲು ಸಾಧ್ಯವೇ ಇಲ್ಲದಾಗ ರೈತರು ಬಾಕಿದಾರರಾಗಿ ಉಳಿಯುತ್ತಾರೆ. ಈ ಎಲ್ಲ ಕಾರಣಗಳಿಂದ ಕೃಷಿ ಉತ್ಪಾದನೆ ಕುಂಠಿತವಾಗುತ್ತದೆ. ಆದ್ದರಿಂದ, ಕೃಷಿ ಸಾಲ ಮನ್ನಾ ಕ್ರಮವು ರೈತರ ನೋವಿಗೆ ಮಿಡಿಯುವ ಸ್ಪಂದನೆಯಾಗುತ್ತದೆ.

ಉಚಿತವಲ್ಲದ ವಾದಗಳು

ಸಾಲ ಮನ್ನಾ ಸರಿಯಾದ ಕ್ರಮವಲ್ಲ ಎಂದು ವಾದಿಸುವವರು ಅದೇ ಕೆಲವು ಹಳಸಲು ಮಾತುಗಳನ್ನು ಪುನಃ ಪುನಃ ಹೇಳುತ್ತಾರೆ. ಹೆಚ್ಚಿನ ಮಂದಿ ಹೇಳುವಂತೆ ಕೃಷಿ ಬಿಕ್ಕಟ್ಟಿಗೆ ಸಾಲ ಮನ್ನಾ ಪರಿಹಾರವಲ್ಲ ಎಂಬುದೇನೋ ಸರಿ. ಆದರೆ, ಬಿಕ್ಕಟ್ಟನ್ನು ಪರಿಹರಿಸುವುದು ಸಾಲ ಮನ್ನಾದ ಉದ್ದೇಶವಲ್ಲ, ಸಂಕಷ್ಟಕ್ಕೊಳಗಾದ ರೈತರಿಗೆ ತತ್‌ಕ್ಷಣದ ಪರಿಹಾರ ಒದಗಿಸುವುದು ಅದರ ಉದ್ದೇಶ ಎಂಬುದನ್ನು ಅವರು ಗಮನಿಸುವುದಿಲ್ಲ. ಸಾಲ ಮನ್ನಾದ ಜೊತೆಯಲ್ಲಿ, ಕೃಷಿ ಬಿಕ್ಕಟ್ಟನ್ನು ಪರಿಹರಿಸುವ ಸಲುವಾಗಿ ಕೆಲವು ದೀರ್ಘಕಾಲೀನ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಕೃಷಿ ವಲಯದಲ್ಲಿ ಸಾರ್ವಜನಿಕ ಹೂಡಿಕೆ, ಕೃಷಿ ಉತ್ಪಾದನೆ ಹೆಚ್ಚಿಸುವ ಕೆಲವು ಹೊಸ ಹೊಸ ಪದ್ಧತಿಗಳಿಗೆ ಪ್ರೋತ್ಸಾಹಧನ ಒದಗಿಸುವುದು, ಯೋಗ್ಯ ಬೆಂಬಲ ಬೆಲೆಯಲ್ಲಿ ಧಾನ್ಯ ಖರೀದಿಸುವ ವ್ಯವಸ್ಥೆ ಮಾಡುವುದು ಮುಂತಾದ ಕ್ರಮಗಳ ಮೂಲಕ ಕೃಷಿ ಬಿಕ್ಕಟ್ಟನ್ನು ಪರಿಹರಿಸಬಹುದು. ಇಂತಹ ಕ್ರಮಗಳ ಕೊರತೆ ಅಥವಾ ಈ ಕ್ರಮಗಳ ಜಾರಿ ಅತಿ ಅಸಮರ್ಪಕವಾಗಿರುವ ಕಾರಣದಿಂದ ಇಂದಿನ ಬಿಕ್ಕಟ್ಟು ಸೃಷ್ಟಿಯಾಗಿದೆ. ಮೇಲಾಗಿ, ಪರಿಹಾರ ಕ್ರಮಗಳನ್ನು ಸಮರ್ಪಕವಾಗಿ ಜಾರಿ ಮಾಡಿದರೂ ಸಹ ಬೆಳಗಾಗುವುದರಲ್ಲಿ ಬಿಕ್ಕಟ್ಟು ಪರಿಹಾರವಾಗುವುದಿಲ್ಲ. ಅದಕ್ಕೆ ಸ್ವಲ್ಪ ಸಮಯ ಹಿಡಿಯುತ್ತದೆ. ಈ ಅವಧಿಯಲ್ಲಿ, ಸಾಲ ಮನ್ನಾ ರೀತಿಯ ಕ್ರಮಗಳು ರೈತರ ಮಾನ ಮತ್ತು ಜೀವವನ್ನು ಉಳಿಸುತ್ತವೆ.

ವ್ಯಂಗ್ಯಚಿತ್ರ:ಸಂದೀಪ್ ಅಧ್ವರ್ಯ, ಟೈಮ್ಸ್ ಆಫ್ ಇಂಡಿಯ



ನಾಚಿಕೆಗೆಟ್ಟ ನಗರ ಪಕ್ಷಪಾತದ ತರ್ಕವನ್ನು ಬದಿಗಿಟ್ಟು ನೋಡಿದರೂ ಸಹ, ಶ್ರೀಮಂತರು ಮತ್ತು ಕಾರ್ಪೋರೇಟ್‌ಗಳು, ರೈತರ ಸಾಲ ಮನ್ನಾ ಮಾಡಲು ಬೇಕಾಗುವ ಹಣಕ್ಕಿಂತ ಹೆಚ್ಚಿನದನ್ನು ಸರ್ಕಾರದಿಂದ ಪಡೆದಿದ್ದಾರೆ. ಕೃಷಿ ಬಿಕ್ಕಟ್ಟಿನ ಸಂದರ್ಭದಲ್ಲಿ, ಒಮ್ಮೆ-ಮಾತ್ರ ಸಾಲ ಮನ್ನಾ ಮಾಡುವ ಕ್ರಮವನ್ನು ಎಲ್ಲ ರಾಜ್ಯಗಳಿಗೆ ವಿಸ್ತರಿಸಿದರೂ ಸಹ ಗಾಬರಿ ಹುಟ್ಟಿಸುವಷ್ಟು ಮೊತ್ತದ ಹಣ ಬೇಕಾಗುವುದಿಲ್ಲ. ಇಲ್ಲಿರುವ ಸಮಸ್ಯೆ, ನವ-ಉದಾರವಾದದ ಸಮರ್ಥಕರು ಇಷ್ಟಪಡುವ ವಿತ್ತೀಯ ಆಳ್ವಿಕೆ. ಈ ಆಳ್ವಿಕೆಯು ಶ್ರೀಮಂತರು ಮತ್ತು ಕಾರ್ಪೋರೇಟ್‌ಗಳಿಗೆ ತೆರಿಗೆ ವಿನಾಯ್ತಿ ಕೊಡುವ ಕಾರಣದಿಂದ ಮತ್ತು ಸರ್ಕಾರದ ಸಾಲಗಳ ಮೇಲೆ ಕಡಿವಾಣ ಹಾಕುವುದರಿಂದ, ದೀರ್ಘಕಾಲದಿಂದಲೂ ಕೃಷಿ ನಿರ್ಲಕ್ಷಕ್ಕೆ ಒಳಗಾಗಿದೆ. ವಿತ್ತೀಯ ಆಳ್ವಿಕೆಯಿಂದಾಗಿಯೇ ಕೃಷಿ ಬಿಕ್ಕಟ್ಟು ಸೃಷ್ಟಿಯಾಗಿದೆ. ಈ ಆಳ್ವಿಕೆಯನ್ನು ಬೆಂಬಲಿಸಿದ ನವ-ಉದಾರವಾದದ ಸಮರ್ಥಕರು ಈಗ ಈ ಆಳ್ವಿಕೆಯೇ ಸೃಷ್ಟಿಸಿದ ಬಿಕ್ಕಟ್ಟಿನಿಂದ ಸಂತ್ರಸ್ತರಾದ ರೈತರಿಗೆ ಪರಿಹಾರ ಒದಗಿಸುವ ಕ್ರಮವನ್ನು ವಿತ್ತೀಯ ವಿವೇಚನೆಯ ನೆಲೆಯಲ್ಲಿ ವಿರೋಧಿಸುತ್ತಿದ್ದಾರೆ.

ತತ್‌ಕ್ಷಣ ಉಪಶಮನ ಒದಗಿಸುವ ಕ್ರಮಗಳಿಗೂ ಮತ್ತು ದೀರ್ಘಕಾಲದ ಪರಿಹಾರ ಒದಗಿಸುವ ಕ್ರಮಗಳಿಗೂ ಇರುವ ವ್ಯತ್ಯಾಸವನ್ನು ನೀತಿ ನಿರೂಪಕರು ತಿಳಿದಿರುತ್ತಾರೆ. ಜಾಗತಿಕ ತಾಪಮಾನ ಏರಿಕೆಯಂತಹ ಒಂದು ಸಂಕೀರ್ಣ ಸಮಸ್ಯೆಗೆ ಪರಿಹಾರೋಪಾಯ ಕಂಡುಕೊಳ್ಳಲು ಪ್ರಯತ್ನಿಸುತ್ತಿರುವಾಗ, ಮೂಲ ಸಮಸ್ಯೆಯ ಪರಿಹಾರವಲ್ಲ ಎಂದು ಗೊತ್ತಿದ್ದರೂ ಸಹ, ಉಗ್ರ ತಾಪಮಾನದ ಅಡ್ಡ ಪರಿಣಾಮಗಳಿಂದ ತತ್‌ಕ್ಷಣ ರಕ್ಷಿಸಿಕೊಳ್ಳುವ ಕ್ರಮ ಕೈಗೊಳ್ಳಬಾರದು ಎಂದು ಹೇಳಲಾಗದು. ಅದೇ ರೀತಿಯಲ್ಲಿ ರೈತರಿಗೆ ತತ್‌ಕ್ಷಣ ಉಪಶಮನ ಒದಗಿಸುವ ಕ್ರಮಗಳನ್ನು ವಿರೋಧಿಸಲಾಗದು.

ಅಧಿಕೃತ ಸಾಲ ಮನ್ನಾದಿಂದ ಕೆಲವು ರೈತರಿಗಷ್ಟೇ ಲಾಭ, ಲೇವಾದೇವಿದಾರರಿಂದ ಸಾಲ ಪಡೆದ ಸಣ್ಣ ಮತ್ತು ಕಡು ಬಡ ರೈತರಿಗೆ ಪ್ರಯೋಜನವಾಗುವುದಿಲ್ಲ. ಅವರು ಅಧಿಕೃತ ಸಾಲ ಮನ್ನಾದಿಂದ ಹೊರಗುಳಿಯುತ್ತಾರೆ ಎಂಬುದು ಎರಡನೆಯ ಆಕ್ಷೇಪಣೆ. ಇದರಲ್ಲಿ ಸ್ವಲ್ಪ ಮಟ್ಟಿನ ಸತ್ಯವಿದ್ದರೂ ಸಹ, ಎಲ್ಲರಿಗೂ ಅನುಕೂಲವಾಗುವವರೆಗೂ ಯಾರಿಗೂ ಅನುಕೂಲ ಕಲ್ಪಿಸುವಂತಿಲ್ಲ ಎಂದು ಹೇಳುವುದು ಅರ್ಥವಿಲ್ಲದ ಮಾತು. ಸಣ್ಣ ಮತ್ತು ಕಡು ಬಡ ರೈತರನ್ನು ಅಧಿಕೃತ ಸಾಲ ಮನ್ನಾದಿಂದ ಹೊರತುಪಡಿಸಿದಾಗ, ಅಗತ್ಯವಾಗಿ ಮಾಡಬೇಕಾದದ್ದು ಏನೆಂದರೆ, ಒಂದು ಋಣ ಪರಿಹಾರ ಆಯೋಗವನ್ನು ತುರ್ತಾಗಿ ನೇಮಿಸಬೇಕು. ಈ ಆಯೋಗವು ಬಡ ರೈತರ ಸಾಲದ ಮೂಲವನ್ನು ಪರಿಶೀಲಿಸಿ, ಆ ಸಾಲದಲ್ಲಿ ಸಾಧ್ಯವಿದ್ದಷ್ಟು ಭಾಗವನ್ನು ಇತ್ಯರ್ಥಪಡಿಸುವ ವ್ಯವಸ್ಥೆ ಮಾಡಬೇಕು. ಇಂತಹ ಒಂದು ಕ್ರಮವನ್ನು ನಮ್ಮ ದೇಶದ ಕೆಲವು ರಾಜ್ಯಗಳಲ್ಲಿ ಈಗಾಗಲೇ ಜರುಗಿಸಲಾಗಿದೆ.

ವಿತ್ತೀಯ ಪರಿಣಾಮಗಳು

ಪರಿಹಾರ ಒದಗಿಸುವ ಸಾಧ್ಯತೆಗಳ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮೌನವಾಗಿರುತ್ತವೆ. ಏಕೆಂದರೆ, ಅದಕ್ಕೆ ಹಣ ತೆರಬೇಕಾಗುತ್ತದೆ. ಸಾಲ ಮನ್ನಾದ ಹೊರೆಯನ್ನು ಬ್ಯಾಂಕ್‌ಗಳು ಸಂಪೂರ್ಣವಾಗಿ ಹೊರಲಾರವು, ನಿಜ. ಆದರೆ, ಹೊರೆಯ ಒಂದು ಭಾಗವನ್ನು ಹೊರುವಂತೆ ಅವರನ್ನು ಕೇಳಿಕೊಳ್ಳಬಹುದು. ಏಕೆಂದರೆ, ಪಡೆದ ಸಾಲವನ್ನು ರೈತ ಮರು ಪಾವತಿ ಮಾಡದಿದ್ದರೆ ಅದರಿಂದ ಬ್ಯಾಂಕಿಗೆ ನಷ್ಟವಾಗುತ್ತದೆ. ಅದೇ ಕಾರಣದ ಮೇಲೆ ಲೇವಾದೇವಿದಾರರನ್ನೂ ಒಂದಿಷ್ಟು ಭಾರ ಹೊರುವಂತೆ ಕೇಳಿಕೊಳ್ಳಬಹುದು. ಮುಖ್ಯವಾಗಿ, ಕೃಷಿ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ರೈತರ ಸಾಲದ ಹೊರೆ ಇಳಿಸಬೇಕಾದರೆ, ಆ ಸಾಲದ ದೊಡ್ಡ ಭಾಗವನ್ನು ಸರ್ಕಾರ ಹೊರಬೇಕಾಗುತ್ತದೆ.

ಇಂತಹ ಒಂದು ಪ್ರಸ್ತಾಪವನ್ನು ಒಪ್ಪಿಕೊಳ್ಳಲು ಸರ್ಕಾರ ನಿರಾಕರಿಸುತ್ತದೆ. ಏಕೆಂದರೆ, ಈ ಸಾಲದ ಹೊರೆ ಹೊತ್ತುಕೊಂಡರೆ, ಬಜೆಟ್ ಖೋತಾ ಸಮಸ್ಯೆ ಎದುರಾಗುತ್ತದೆ. ಖೋತಾ ಬಜೆಟ್ಟನ್ನು ಹಣಕಾಸು ಬಂಡವಾಳವು ಸುತರಾಂ ಒಪ್ಪುವುದಿಲ್ಲ ಎಂಬ ದೃಷ್ಟಿಕೋನವು ಅದೆಷ್ಟು ವ್ಯಾಪಕವಾಗಿ ವೃತ್ತಿಪರ ಅರ್ಥಶಾಸ್ತ್ರಜ್ಞರು ಮತ್ತು ಮಾಧ್ಯಮ ಪಂಡಿತರುಗಳಲ್ಲಿ ಪ್ರಚಲಿತವಿದೆ ಎಂಬುದನ್ನು ನಂಬಲು ಆಶ್ಚರ್ಯವಾಗುತ್ತದೆ.

ಜನರು ಬಯಸುವ ಇಂತಹ ಒಂದು ಕ್ರಮವನ್ನು ಜಾರಿಗೊಳಿಸಲು ಸರ್ಕಾರಕ್ಕೆ ಇರುವ ಒಂದೇ ದಾರಿ ಎಂದರೆ ಸಾಲ ಮಾಡಬೇಕಾಗುತ್ತದೆ ಎಂದೇ ಊಹಿಸಿಕೊಳ್ಳಲಾಗುತ್ತದೆ. ಇದು ತಳ ಬುಡವಿಲ್ಲದ ತರ್ಕ. ತೆರಿಗೆ ವಸೂಲಿ ಕಟ್ಟುನಿಟ್ಟಾಗಿದ್ದರೆ ಸಾಲ ಮನ್ನಾ ಮಾಡಲು ಬೇಕಾಗುವ ಹಣವನ್ನು ಹೊಂದಿಸಿಕೊಳ್ಳಬಹುದು. ಶ್ರೀಮಂತ ತೆರಿಗೆದಾರರು ಮತ್ತು ಕಾರ್ಪೋರೇಟ್‌ಗಳಿಗೆ ಕೊಟ್ಟಿರುವ ರಿಯಾಯ್ತಿ/ಸಬ್ಸಿಡಿಗಳನ್ನು ಕಡಿತಗೊಳಿಸಿ ಸಂಪನ್ಮೂಲಗಳನ್ನು ಅಧಿಕಗೊಳಿಸಿಕೊಳ್ಳಬಹುದು. ಉದಾ: 2018-19ರ ಬಜೆಟ್ಟಿನಲ್ಲಿ, "ತೆರಿಗೆ ಖರ್ಚುಗಳು" ಎಂಬ ಶಿರೋನಾಮೆಯಲ್ಲಿ ತೋರಿಸಿರುವ ತೆರಿಗೆ ರಿಯಾಯ್ತಿ, ಸಬ್ಸಿಡಿ ಮತ್ತು ವರ್ಗಾವಣೆಗಳಿಂದ 1,33,954 ಕೋಟಿ ರೂ ಆದಾಯ ನಷ್ಟವನ್ನು ತೋರಿಸಲಾಗಿದೆ. ಇದು ಕೇವಲ ಒಂದು ವರ್ಷದಲ್ಲಿ

ಪುಟ 13 ನೋಡಿ

ರೈತರ ಸಾಲ ಮನ್ನಾ ಬಗ್ಗೆ ಏಕೆ ಈ ರಂಪಾಟ?

ಪುಟ 12 ರಿಂದ

ಸರ್ಕಾರ ಶ್ರೀಮಂತರು ಮತ್ತು ಕಾರ್ಪೋರೇಟ್‌ಗಳಿಗೆ ಬಿಟ್ಟುಕೊಟ್ಟಿರುವ ಹಣ.

ಸಂಪತ್ತು ತೆರಿಗೆ ಹಾಕುವ ಮೂಲಕ ಸರ್ಕಾರ ಸಂಪನ್ಮೂಲಗಳನ್ನು ಅಧಿಕಗೊಳಿಸಿಕೊಳ್ಳಬಹುದು. ಉದಾಹರಣೆಗೆ ಹೇಳುವುದಾದರೆ, ಕ್ರೆಡಿಟ್ ಸ್ಯೂಸೆ(ಸ್ವಿಸ್ ಬ್ಯಾಂಕ್) ಪ್ರಕಾರ, ನಮ್ಮ ದೇಶದ ಸಂಪತ್ತಿನ 77% ಭಾಗವನ್ನು, ಶ್ರೀಮಂತರ ಪಟ್ಟಿಯಲ್ಲಿರುವ ಮೇಲಿನ 10% ಮಂದಿ ಹೊಂದಿದ್ದಾರೆ. ಇವರ ಮೇಲೆ ಒಂದಿಷ್ಟು ತೆರಿಗೆ ಹೇರಿದರೂ ಸಾಕು, ಸಾಲ ಮನ್ನಾ ಮಾಡಲು ಬೇಕಾಗುವಷ್ಟು ಹಣವನ್ನು ಹೊಂದಿಸಿಕೊಳ್ಳಬಹುದು. ಇದೇ ಉತ್ತರ, ಸಾಲ ಮನ್ನಾ ಎಂದಕೂಡಲೇ "ಹಣ ಎಲ್ಲಿದೆ?" ಎಂದು ಕೇಳುವವರಿಗೆ.

ವಾಸ್ತವವಾಗಿ ಹೇಳುವುದಾದರೆ, ವಿತ್ತೀಯ ವಿವೇಚನೆ ಮತ್ತು ಹಣ ಜೋಪಾನ ಮಾಡಿಕೊಳ್ಳುವಿಕೆಯ ಮೇಲೆ ಒತ್ತು ಕೊಡುವ ಅಂಶವೇ ನಗರ ಪಕ್ಷಪಾತದ ಒಂದು ಅತ್ಯಂತ ಕೆಟ್ಟದಾದ ನಿದರ್ಶನ. ಶ್ರೀಮಂತರು ಮತ್ತು ಕಾರ್ಪೋರೇಟ್‌ಗಳೇ ತೆರಿಗೆ ಮನ್ನಾ ಮತ್ತು ತೆರಿಗೆ ರಿಯಾಯ್ತಿ ಪಡೆಯತ್ತಾರೆ. ಹಲವು ಹತ್ತು ಬೃಹತ್ ಸವಲತ್ತುಗಳನ್ನು ಪಡೆದಿರುವವರು ಇವರೇ. 2018ರ ಮಾರ್ಚ್31ಕ್ಕೆ ಕೊನೆಗೊಂಡ ಹತ್ತು ವರ್ಷಗಳ ಅವಧಿಯಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳು 4,00,584 ಕೋಟಿ ರೂ ಸಾಲ ವಜಾ ಮಾಡಿವೆ. ಸ್ವಲ್ಪ ಹೆಚ್ಚು ಕಡಿಮೆ ಈ ಎಲ್ಲ ಸಾಲವೂ ಕಾರ್ಪೋರೇಟ್‌ಗಳದ್ದೇ. ಸಾಲ ವಜಾ ಮಾಡಿದ ಕ್ರಮವನ್ನು ಕೇವಲ ತಾಂತ್ರಿಕ ಎಂದು ಹೇಳಲಾಗಿದೆ. ಈ ರೀತಿಯಲ್ಲಿ ವಜಾ ಮಾಡಿದ ಸಾಲಗಳನ್ನು ವಸೂಲು ಮಾಡಿದ ನಿದರ್ಶನಗಳು ಇವೆ ಎಂಬುದಕ್ಕೆ ಪುರಾವೆಯೇ ದೊರೆತಿಲ್ಲ. ಸಾಲದ ಹೆಸರಿನಲ್ಲಿ ಸಾರ್ವಜನಿಕ ಹಣವನ್ನು ಶ್ರೀಮಂತ ಪ್ರವರ್ತಕರು ವರ್ಗಾವಣೆ ಮಾಡಿಕೊಳ್ಳುತ್ತಾರೆ ಮತ್ತು ಶಿಕ್ಷೆಯಿಂದಲೂ ಬಚಾವಾಗುತ್ತಾರೆ. ಕೆಲವೊಮ್ಮೆ ತಮ್ಮ ಹಿಡಿತಕ್ಕೆ ಮೀರಿದ ಬದಲಾವಣೆಗಳು ಆರ್ಥಿಕ ವಾತಾವರಣದಲ್ಲಿ ಉಂಟಾದಾಗ ಕಾರ್ಪೋರೇಟ್‌ಗಳ ಸಾಲಕ್ಕೆ ಅದರ ಪ್ರವರ್ತಕರು ಅಥವಾ ಆಡಳಿತ ಮಂಡಳಿ ಹೊಣೆಗಾರರಾಗುವುದಿಲ್ಲ ಎಂಬ ಮಾತನ್ನು ಸರ್ಕಾರದ ಆರ್ಥಿಕ ಸಮೀಕ್ಷೆಯೇ ಹೇಳುವಾಗ, ನಿದ್ದೆ ಬಂದವನಿಗೆ ಹಾಸಿಗೆ ಹಾಸಿ ಕೊಟ್ಟಂತಾಗುತ್ತದೆ.

ಇಂತಹ ನಾಚಿಕೆಗೆಟ್ಟ ಪಕ್ಷಪಾತದ ತರ್ಕವನ್ನು ಬದಿಗಿಟ್ಟು ನೋಡಿದರೂ ಸಹ, ಶ್ರೀಮಂತರು ಮತ್ತು ಕಾರ್ಪೋರೇಟ್‌ಗಳು, ರೈತರ ಸಾಲ ಮನ್ನಾ ಮಾಡಲು ಬೇಕಾಗುವ ಹಣಕ್ಕಿಂತ ಹೆಚ್ಚಿನದನ್ನು ಸರ್ಕಾರದಿಂದ ಪಡೆದಿದ್ದಾರೆ. ರಾಜ್ಯ ಸರ್ಕಾರದ ಅಂದಾಜಿನ ಪ್ರಕಾರ, 34 ಲಕ್ಷ ಮಂದಿ ರೈತರ 2 ಲಕ್ಷ ರೂ ವರೆಗಿನ ಸಾಲ ಮನ್ನಾ ಮಾಡಲು ಸುಮಾರು 35,000 ಕೋಟಿಯಿಂದ 38,000 ಕೋಟಿ ರೂ ಬೇಕಾಗುತ್ತದೆ. ಛತ್ತೀಸ್‌ಘಡ ಮತ್ತು ರಾಜಾಸ್ತಾನಗಳಿಗೆ ಅನುಕ್ರಮವಾಗಿ, 6,100 ಕೋಟಿ ಮತ್ತು 18,000 ಕೋಟಿ ರೂ ಬೇಕಾಗುತ್ತದೆ. ಕೃಷಿ ಬಿಕ್ಕಟ್ಟಿನ ಸಂದರ್ಭದಲ್ಲಿ, ಒಮ್ಮೆ-ಮಾತ್ರ ಸಾಲ ಮನ್ನಾ ಮಾಡುವ ಕ್ರಮವನ್ನು ಎಲ್ಲ ರಾಜ್ಯಗಳಿಗೆ ವಿಸ್ತರಿಸಿದರೂ ಸಹ ಗಾಬರಿ ಹುಟ್ಟಿಸುವಷ್ಟು ಮೊತ್ತದ ಹಣ ಬೇಕಾಗುವುದಿಲ್ಲ.

ಇಲ್ಲಿರುವ ಸಮಸ್ಯೆ ಯಾವುದು ಎಂದರೆ, ನವ-ಉದಾರವಾದದ ಸಮರ್ಥಕರು ಇಷ್ಟಪಡುವ ವಿತ್ತೀಯ ಆಳ್ವಿಕೆ. ಈ ಆಳ್ವಿಕೆಯು ಶ್ರೀಮಂತರು ಮತ್ತು ಕಾರ್ಪೋರೇಟ್‌ಗಳಿಗೆ ತೆರಿಗೆ ವಿನಾಯ್ತಿ ಕೊಡುವ ಕಾರಣದಿಂದ ಮತ್ತು ಸರ್ಕಾರದ ಸಾಲಗಳ ಮೇಲೆ ಕಡಿವಾಣ ಹಾಕುವುದರಿಂದ, ದೀರ್ಘಕಾಲದಿಂದಲೂ ಕೃಷಿ ನಿರ್ಲಕ್ಷಕ್ಕೆ ಒಳಗಾಗಿದೆ.

ವಿತ್ತೀಯ ಆಳ್ವಿಕೆಯಿಂದಾಗಿಯೇ ಕೃಷಿ ಬಿಕ್ಕಟ್ಟು ಸೃಷ್ಠಿಯಾಗಿದೆ. ಈ ಆಳ್ವಿಕೆಯನ್ನು ಬೆಂಬಲಿಸಿದ ನವ-ಉದಾರವಾದದ ಸಮರ್ಥಕರು ಈಗ ಈ ಆಳ್ವಿಕೆಯೇ ಸೃಷ್ಠಿಸಿದ ಬಿಕ್ಕಟ್ಟಿನಿಂದ ಸಂತ್ರಸ್ತರಾದ ರೈತರಿಗೆ ಪರಿಹಾರ ಒದಗಿಸುವ ಕ್ರಮವನ್ನು ವಿತ್ತೀಯ ವಿವೇಚನೆಯ ನೆಲೆಯಲ್ಲಿ ವಿರೋಧಿಸುತ್ತಿದ್ದಾರೆ. ●

ಬಿಜೆಪಿ ಸೋಲಿಸಿ–ಸಂವಿಧಾನ ಉಳಿಸಿ

2014ರಲ್ಲಿ ಸಂಸತ್ತನ್ನು ಮೊದಲ ಬಾರಿಗೆ ಪ್ರವೇಶಿಸುವ ಮುನ್ನ ನರೇಂದ್ರ ಮೋದಿಯವರು ಸಂಸತ್ ಭವನದ ಮೆಟ್ಟಿಲಲ್ಲಿ ತಲೆ ಬಾಗಿ ನಮಿಸಿ ಇದು 'ಜನತಂತ್ರದ ಮಂದಿರ' ಎಂದರು. ಆದರೆ ಅದಾದ ನಂತರ ದೇಶ ಕಂಡಿರುವುದು ಆ 'ಜನತಂತ್ರದ ಮಂದಿರ'ದ ಅವಹೇಳನ, ಅದನ್ನು ರೂಪಿಸಿದ ಸಂವಿಧಾನದ ಅವಹೇಳನವನ್ನೇ. ಎನ್‌ಡಿಎ-2 ಸರಕಾರದ ಅಡಿಯಲ್ಲಿ ಕೊನೆಯ ಗಣರಾಜ್ಯ ದಿನಾಚರಣೆಯ ಮುನ್ನಾದಿನ(ಜನವರಿ 25, 2019)ರಂದು ಕಳೆದ ಐದು ವರ್ಷಗಳಲ್ಲಿ ಸಂವಿಧಾನದ ಮೂಲ ನೆಲೆಗಳಿಗೆ ಉಂಟಾಗಿರುವ ಅಪಚಾರಗಳನ್ನು #DefeatBJPSaveConstitution ನಲ್ಲಿ ನೆಟ್ಟಿಗರು ನೆನಪಿಸಿಕೊಂಡರು. ಕಳೆದ ಐದು ವರ್ಷಗಳನ್ನು ನೆನಪಿಸುವ ಆ ಟ್ವೀಟ್‌ಗಳ ಒಂದು ಪಟ್ಟಿ ನಮ್ಮ ಓದುಗರಿಗಾಗಿ ಇಲ್ಲಿದೆ.



ಬಾಯಲ್ಲಿ ಸಂವಿಧಾನ – ಮನದಲ್ಲಿ ಮನುಸ್ಮೃತಿ

● ದೇಶ ಸ್ವತಂತ್ರಗೊಂಡ ಆರಂಭದಲ್ಲೇ, ಆರೆಸ್ಸೆಸ್‌ನ ಮುಖವಾಣಿ 'ಆರ್ಗನೈಸರ್' ಸಂವಿಧಾನದ ಬದಲಿಗೆ ಮನುಸ್ಮೃತಿಯನ್ನು ನಾಡಿನ ಶಾಸನವಾಗಿ ಮಾಡಬೇಕು ಎಂದು ಆಗ್ರಹಿಸಿತ್ತು. ಆ ಶಕ್ತಿಗಳೇ ಈಗ ಸರಕಾರ ನಡೆಸುತ್ತಿವೆ.

● ಅತ್ಯಂತ ದೀರ್ಘ ಅವಧಿಯ ವರೆಗೆ ಆರೆಸ್ಸೆಸ್‌ನ ಮುಖ್ಯಸ್ಥರೂ, ಅದರ ಹೆಚ್ಚಿನ ಸೈದ್ಧಾಂತಿಕ ನೆಲೆಗಳ ಮೂಲ ಸೆಲೆಯೂ ಆಗಿದ್ದ ಗೋಲ್ವಾಲ್ಕರ್, ಜನತಂತ್ರ ಒಂದು ಪಾಶ್ಚಿಮಾತ್ಯ ರಚನೆ, ಅದು ಭಾರತಕ್ಕೆ ಸೂಕ್ತವಲ್ಲ ಎಂದು ಬರೆದಿದ್ದಾರೆ.

● ಆರೆಸ್ಸೆಸ್ ಬಹಳಷ್ಟು ಬ್ರಿಟಿಶ್-ವಿರೋಧಿ ಚಳುವಳಿಗಳಿಂದ, ಉದಾ: ಕಾಯಿದೆ ಭಂಗ ಚಳುವಳಿ, ಆಝಾದ್-ಹಿಂದ್ ಫೌಝ್. ಐಎನ್‌ಎ ವಿಚಾರಣೆಗಳ ಸುತ್ತ ಎದ್ದುಬಂದ ಉತ್ಕ್ರಾಂತಿ, ರಿನ್ ನಾವಿಕರ ಬಂಡಾಯ ಮುಂತಾದವುಗಳಿಂದ ದೂರ ಉಳಿದಿತ್ತು.

ಯೇನಕೇನ ಪ್ರಕಾರೇಣ ಅಧಿಕಾರ ಕಬಳಿಕೆಯ ಪ್ರಕ್ರಿಯೆಯಲ್ಲಿ...

● ಅರುಣಾಚಲ ಪ್ರದೇಶದಲ್ಲಿ 2014ರ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ 11 ಸೀಟುಗಳನ್ನು ಗೆದ್ದಿತ್ತು. ಮುಂದಿನ 2 ವರ್ಷಗಳಲ್ಲಿ ಬಿಜೆಪಿಯ ಸೀಟುಗಳ ಸಂಖ್ಯೆ 48 ಆಯಿತು. ಸಾರಾಸಗಟು ಪಕ್ಷಾಂತರಗಳು, ರಾಜ್ಯಪಾಲರ ಕೃಪೆ ಮತ್ತು ನಾಲ್ವರು ಮುಖ್ಯಮಂತ್ರಿಗಳ ನಂತರ ಅಂತಿಮವಾಗಿ ಅಲ್ಲಿ ಅಧಿಕಾರ ಕಬಳಿಸಿತು.

● ಝಾರ್ಖಂಡ್ ಚುನಾವಣೆಗಳಲ್ಲಿ 81 ವಿಧಾನಸಭಾ ಸ್ಥಾನಗಳಲ್ಲಿ ಬಿಜೆಪಿ 35 ಪಡೆಯಿತು, ಅದರ ಮಿತ್ರ ಪಕ್ಷ ಎಜೆಎಸ್‌ಯು 5ನ್ನು ಪಡೆಯಿತು. ಅಂದರೆ ಬಹುಮತದ ಹತ್ತಿರ ಬಂದರಷ್ಟೇ, ಆದರೆ ಬಹುಮತ ಸಿಗಲಿಲ್ಲ. ಆದರೆ ಅಲ್ಲಿಯೂ ಬಹುಮತ ಸೃಷ್ಟಿ ಆಯಿತು-ಕೆಲವು ಪಕ್ಷೇತರರನ್ನು ಒಲಿಸಿಕೊಂಡು ಮತ್ತು ಝಾರ್ಖಂಡ್ ವಿಕಾಸ್ ಮೋರ್ಚಾದ 8ರಲ್ಲಿ 6 ಶಾಸಕರಿಗೆ ಆಮಿಷವೊಡ್ಡಿ.

● ಗೋವಾದಲ್ಲಿ 2017ರ ವಿಧಾನಸಭಾ ಚುನಾವಣೆಗಳು ಬಿಜೆಪಿಗೆ 40ರಲ್ಲಿ 13 ಸ್ಥಾನಗಳನ್ನಷ್ಟೇ ಕೊಟ್ಟವು. ಆದರೂ ಫಲಿತಾಂಶಗಳು ಪ್ರಕಟವಾದ ನಂತರ ಸಣ್ಣ ಪಕ್ಷಗಳನ್ನೆಲ್ಲ ಕಲೆ ಹಾಕಿ ಒಂದು ಸರಕಾರವನ್ನೇ ಅದು ರಚಿಸಿತು. ಅತಿ ದೊಡ್ಡ ಪಕ್ಷವಾಗಿ ಮೂಡಿ ಬಂದ ಕಾಂಗ್ರೆಸ್ 17 ಸ್ಥಾನಗಳೊಂದಿಗೆ ಪ್ರತಿಪಕ್ಷವಾಗಿ ಕೂತಿದೆ.

● ಮಣಿಪುರದಲ್ಲಿ ಚುನಾವಣೆಗಳಲ್ಲಿ ಬಿಜೆಪಿಗೆ 60ರಲ್ಲಿ 21 ಸ್ಥಾನಗಳು ಸಿಕ್ಕವು, ಕಾಂಗ್ರೆಸಿಗೆ 28 ಸಿಕ್ಕಿತು. ಆದರೆ ಬಿಜೆಪಿ ಎರಡು ಸ್ಥಳೀಯ ಪಕ್ಷಗಳನ್ನು, ಎನ್‌ಪಿಪಿ ಮತ್ತು ಎನ್‌ಪಿಎಫ್ ನ್ನು ಹಾಗೂ ತನ್ನ ಮಿತ್ರಪಕ್ಷ ಎಲ್‌ಜೆಪಿಯಿಂದ ಏಕೈಕ ಶಾಸಕನನ್ನು ತಮ್ಮತ್ತ ಸೆಳೆದು ಸರಕಾರ ರಚನೆಚು ದಾವೆ ಇಟ್ಟಿತು. ರಾಜ್ಯಪಾಲರಾಗಿದ್ದ ಮಾಜಿ ಬಿಜೆಪಿ ಎಂ.ಪಿ. ನಜ್ಮಾ ಹೆಫ್ತುಲ್ಲಾ ನೆರವಿಗೆ ಬಂದರು, ಮೊದಲು ಬಿಜೆಪಿ ನೇತೃತ್ವದ ಮೈತ್ರಿಕೂಟಕ್ಕೆ ಆಹ್ವಾನ ನೀಡಿದರು.

● ಮೇಘಾಲಯದಲ್ಲಿ 2018ರಲ್ಲಿ 60 ಸದಸ್ಯರ ವಿಧಾನ ಸಭೆಯಲ್ಲಿ ಬಿಜೆಪಿ ಕೇವಲ 2 ಸ್ಥಾನಗಳನ್ನು ಪಡೆಯಿತು. ಆದರೆ ಎನ್‌ಪಿಪಿ ಯೊಂದಿಗೆ ಚುನಾವಣಾ ನಂತರ ಮೈತ್ರಿ ರಚಿಸಿಕೊಂಡು ಸರಕಾರದ ಭಾಗವಾಯಿತು. ಇಲ್ಲಿಯೂ ರಾಜ್ಯಪಾಲರು, ಗಂಗಾ ಪ್ರಸಾದ್, ನೆರವಿಗೆ ಬಂದರು. ಇವರು ಬಿಹಾರದ ಮಾಜಿ ಎಂಎಲ್‌ಸಿ.

ಸಂವಿಧಾನದ ಒಕ್ಕೂಟ ತತ್ವದ ಆಶಯಕ್ಕೆ ಸಂಚಕಾರ..

● ಹೊಸ 'ಸರಕು ಮತ್ತು ಸೇವೆಗಳ ತೆರಿಗೆ'(ಜಿಎಸ್‌ಟಿ) ಯಲ್ಲಿ ಯಾವ ಸರಕುಗಳ ಮೇಲೆ ಎಷ್ಟು ತೆರಿಗೆ ಹಾಕಬೇಕು ಎಂಬ ಭಾರತದ ಸಂವಿಧಾನ ರಾಜ್ಯಗಳಿಗೆ ಕೊಟ್ಟಿರುವ ಅಧಿಕಾರ ಉಳಿದಿಲ್ಲ. ಇದನ್ನು ರಾಜ್ಯಗಳು ಈಗ ನಿರ್ಧರಿಸುವಂತಿಲ್ಲ.

● ರಾಜ್ಯಗಳ ಹಣಕಾಸು ಪರಿಸ್ಥಿತಿ ಶೋಚನೀಯವಾಗಿದೆ, ಈಗ ಜಿಎಸ್‌ಟಿ ಹೇರಿಕೆಯೊಂದಿಗೆ ಕೇಂದ್ರ ಸರಕಾರದ ಮೇಲೆ ಅವುಗಳ ಅವಲಂಬನೆ ಇನ್ನೂ ಹೆಚ್ಚಿದೆ. ಈ ವಿನಾಶಕಾರಿ ನಡೆ ಸಂವಿಧಾನದ ಒಕ್ಕೂಟ ಸ್ವರೂಪದ ಉಲ್ಲಂಘನೆಯಾಗಿದೆ.

● ಕಲ್ಯಾಣ ನಿಧಿಗಳಲ್ಲಿ ಕಡಿತ ಮೋದಿ ಮತ್ತು ಬಿಜೆಪಿ ಅನುಸರಿಸುತ್ತಿರುವ ನವ-ಉದಾರವಾದಿ ಮೂಢನಂಬಿಕೆಯ ಅಭಿನ್ನ ಅಂಗ. ಇದು ರಾಜ್ಯಗಳ ಹಣಕಾಸು ಸ್ಥಿತಿಯನ್ನು ಹಾಳುಗೆಡವಿದೆ ಮತ್ತು ಅವನ್ನು ದುರ್ಬಲಗೊಳಿಸಿ ಅವನ್ನು ಕೇಂದ್ರ ಸರಕಾರದ ಕೃಪಾ ಕಟಾಕ್ಷಕ್ಕೆ ಒಳಪಡಿಸಿದೆ.

● ಮೋದಿ ಸರಕಾರ 15ನೇ ಹಣಕಾಸು ಆಯೋಗಕ್ಕೆ ಮನಬಂದಂತೆ ವಿಧಿಸಿದ, ದುರ್ಭರ ಅಧ್ಯಯನ ಪರಿಮಿತಿಗಳ ಮೂಲಕ ರಾಜ್ಯಗಳ ಹಣಕಾಸು ಸ್ವಾತಂತ್ರ್ಯವನ್ನು ಇನ್ನಷ್ಟು ಸೀಮಿತಗೊಳಿಸುವ ಯೋಜನೆ ಹಾಕಿಕೊಂಡಿದೆ.

'ಜನತಂತ್ರದ ಮಂದಿರ'ದ ಧ್ವಂಸದತ್ತ..

● 2014ರಲ್ಲಿ ಸಂಸತ್ತನ್ನು 'ಜನತಂತ್ರದ ಮಂದಿರ' ಎಂದು ವರ್ಣಿಸಿದ ನಂತರ ಮೋದಿ ಸರಕಾರ ಅದನ್ನು ತಿರಸ್ಕಾರದಿಂದ ಕಂಡಿದೆ. ಉದಾ: 2018ರಲ್ಲಿ ಸಂಸತ್ತಿನಲ್ಲಿ ಕೇಂದ್ರ ಬಜೆಟನ್ನು ಯಾವುದೇ ಚರ್ಚೆಯಿಲ್ಲದೆ ನುಗ್ಗಿಸಿಕೊಂಡು ಹೋಯಿತು. ಹೀಗಾದದ್ದು ಸ್ವತಂತ್ರ ಭಾರತದಲ್ಲಿ ಮೊದಲ ಬಾರಿ.

● ಒಂದು ಅವಿಶ್ವಾಸ ಠರಾವಿಗೆ ಅವಕಾಶ ಕೊಡಲಿಲ್ಲ, ಅಧಿವೇಶನವನ್ನು ಬಿಜೆಪಿಗೆ ಸೇರಿದ ಲೋಕಸಭಾಧ್ಯಕ್ಷರು ಮುಂದೂಡಿದರು.

● ಸುಪ್ರಿಂ ಕೋರ್ಟಿನ ಮುಖ್ಯ ನ್ಯಾಯಾಧೀಶರ ಮೇಲೆ ದೋಷಾರೋಪಣೆ ಮಾಡುವ ಠರಾವನ್ನು ರಾಜ್ಯಸಭಾ ಅಧ್ಯಕ್ಷರು ಏಕಪಕ್ಷೀಯವಾಗಿ ವಜಾ ಮಾಡಿದರು. ಠರಾವು ಸರಿಯೋ ತಪ್ಪೋ ಎಂಬುದನ್ನು ನಿರ್ಧರಿಸುವ ಅಧಿಕಾರ ಅವರಿಗೆ ಇಲ್ಲದಿದ್ದರೂ ಹೀಗೆ ಮಾಡಿದರು.

● ಮೋದಿ ಸರಕಾರ 'ಆಧಾರ್' ಸಂಬಂಧಿತ ಕಾನೂನುಗಳನ್ನು ಕೂಡ ಕೈಚಳಕದಿಂದ 'ಪಾಸು' ಮಾಡಿಕೊಂಡಿತು-ಕೊನೆ ಗಳಿಗೆಯಲ್ಲಿ ಹಣಕಾಸು ಮಸೂದೆಗಳೊಂದಿಗೆ ಕಳ್ಳತನದಿಂದ ತೂರಿಸಿ.

ಸಂಸ್ಥೆಗಳ ಅಧಿಕಾರಗಳಿಗೂ ಕತ್ತರಿಯ ಪ್ರಯತ್ನ......

● ಮೋದಿ ಸರಕಾರ, ಇತರ ಸಂಸ್ಥೆಗಳಂತೆ ರಿಝರ್ವ್ ಬ್ಯಾಂಕಿನ ಸ್ವಾತಂತ್ರ್ಯವನ್ನೂ ಬುಡಮೇಲು ಮಾಡಲು ಮತ್ತು ಧ್ವಂಸ ಮಾಡಲು ಪ್ರಯತ್ನಿಸಿತು. ವಿನಾಶಕಾರಿ ನೋಟುರದ್ಧತಿಯನ್ನು ಆರ್‌ಬಿಐ ಮಂಡಳಿಯ ಗಂಟಲಲ್ಲಿ ತೂರಿತು. ಕರೆನ್ಸಿ ನಿರ್ವಹಣೆ ಆರ್‌ಬಿಐನ ಜವಾಬ್ದಾರಿ .ಆದರೆ ಮೋದಿ ಗುಪ್ತಯೋಜನೆ ನಡೆಸಿ , ಕೆಲವು ಗಂಟೆಗಳ ಮೊದಲಷ್ಟೇ ಆರ್‌ಬಿಐ ಮಂಡಳಿಗೆ ತಿಳಿಸಿದರು.

● ಮೋದಿ ಎಲ್ಲ ಸಂಸ್ಥೆಗಳು ತನ್ನ ಯೋಚನೆಗೆ ಹೊಂದಿಕೊಳ್ಳುವಂತೆ ಮಾಡಲು ಅಲ್ಲೆಲ್ಲ ಆರೆಸ್ಸೆಸ್ ಸಿದ್ಧಾಂತಿಗಳನ್ನು ನೇಮಿಸುವ ಎಂದಿನ ತಂತ್ರವನ್ನು ಅನುಸರಿಸಿದರು. ಒಬ್ಬ ಸುವಿದಿತ ಆರೆಸ್ಸೆಸ್ ಸಿದ್ಧಾಂತಿ ಎಸ್.ಗುರುಮೂರ್ತಿಯವರನ್ನು ಈಗ ಆರೆಸ್ಸೆಸ್ ಮಂಡಳಿಯಲ್ಲಿ ಸೇರಿಸಲಾಗಿದೆ.

● ಸಾರ್ವಜನಿಕ ವಲಯದ ಬ್ಯಾಂಕುಗಳನ್ನು ಸಾಲ ಹಿಂದಿರುಗಿಸದೆ ಲೂಟಿ ಹೊಡೆದ ಕಾರ್ಪೊರೇಟ್‌ಗಳಿಗೇ ಇನ್ನಷ್ಟು ಹಣ ಒದಗಿಸಲು ಮೋದಿ ಸರಕಾರ ಆರ್‌ಬಿಐನ ಮೀಸಲು ನಿಧಿಗೆ ಕೈಹಾಕ ಬಯಸಿತು- ಇದು ಆರ್‌ಬಿಐ ಗವರ್ನರ್ ಬದಲಾವಣೆಯ ಹಿಂದಿರುವ ಸಂಗತಿ

● ಮೋದಿ ಸರಕಾರ ಬ್ಯಾಂಕಿಂಗೇತರ ಹಣಕಾಸು ಕಂಪನಿ(ಎನ್‌ಬಿಎಫ್‌ಸಿ)ಗಳಿಗೆ ವಿಧಿಸಿದ ಬಂಡವಾಳ ಸಮರ್ಪಕತೆಯ ನಿಯಮಾವಳಿಗಳನ್ನು ಸಡಿಲಗೊಳಿಸುವಂತೆ ಆರ್‌ಬಿಐನ್ನು ಬಲವಂತ ಮಾಡಿತು. ಕಾರ್ಪೋರೇಟ್ ಲೂಟಿ ಮತ್ತು ಪರಾರಿಗೆ ನೆರವು ನೀಡುವ ಮೋದಿ ಸರಕಾರದ 'ಆತುರ ಆರ್‌ಬಿಐ ನೊಂದಿಗೆ ಸರಕಾರದ ತಿಕ್ಕಾಟದ ಪ್ರಮುಖ ಕಾರಣಗಳಲ್ಲಿ ಒಂದು. ಇದೇ ಉರ್ಜಿತ್ ಪಟೇಲ್ ರಾಜೀನಾಮೆಗೆ ಹಾದಿ ಮಾಡಿಕೊಟ್ಟಿತು.



ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳಬೇಕೆಂದು ಬಯಸುವವರು ತಮ್ಮ ಸ್ವಾತಂತ್ರ್ಯಗಳನ್ನು ಒಬ್ಬ ಮಹಾನ್ ವ್ಯಕ್ತಿಯ ಚರಣಗಳಲ್ಲಿ ಕೂಡ ಅರ್ಪಿಸಿ ಬಿಡಬಾರದು. ಅಥವ ತಮ್ಮ ಸಂಸ್ಥೆಗಳನ್ನು ಬುಡಮೇಲು ಮಾಡಲು ಆತನಿಗೆ ಅವಕಾಶ ಮಾಡಿಕೊಡುವ ಅಧಿಕಾರಗಳನ್ನು ಕೊಡಬಾರದು ಎಂಬ ಜೆ.ಎಸ್.ಮಿಲ್‌ರವರು ಕೊಟ್ಟ ಎಚ್ಚರಿಕೆಯನ್ನು ಪಾಲಿಸಬೇಕಾಗಿದೆ........ಈ ಎಚ್ಚರಿಕೆ ಬೇರಾವ ದೇಶಕ್ಕಿಂತಲೂ ಭಾರತ-ಕ್ಕೆ ಬಹಳ ಅಗತ್ಯ. ಏಕೆಂದರೆ ಭಾರತದಲ್ಲಿ ಭಕ್ತಿಮಾರ್ಗ ಅಥವ ವ್ಯಕ್ತಿಪೂಜೆ ರಾಜಕೀಯದಲ್ಲಿ ತನ್ನ ಪಾತ್ರ ವಹಿಸುತ್ತದೆ. .. ಧರ್ಮದ ಕ್ಷೇತ್ರದಲ್ಲಿ ಭಕ್ತಿಯು ಮುಕ್ತಿಯ ಒಂದು ಮಾರ್ಗವಾಗಿರಬಹುದೇನೋ. ಆದರೆ ರಾಜಕೀಯದಲ್ಲಿ ಭಕ್ತಿ ಅಥವ ವ್ಯಕ್ತಿಪೂಜೆ ಖಂಡಿತವಾಗಿಯೂ ಅಧಃಪತನದತ್ತ ಮತ್ತು ಅಂತಿಮವಾಗಿ ಸರ್ವಾಧಿಕಾರದತ್ತ ಒಯ್ಯುತ್ತದೆ.

–ಸಂವಿಧಾನ ಸಭೆಯ ಕೊನೆಯ ಅಧಿವೇಶನದಲ್ಲಿ ಬಾಬಾಸಾಹೇಬ್ ಅಂಬೇಡ್ಕರ್

ಬಿಹಾರ: ಬೃಂದಾ ಸಹನೀ ಯನ್ನು ಬಲಿ ತೆಗೆದುಕೊಂಡು ‘ಒಕ್ಕಲೆಬ್ಬಿಸುವ ಕಾರ್ಯಾಚರಣೆ’ಯಾಗಿಬಿಟ್ಟ ‘ದಾಖಲ್ ದೇಹಾನಿ’



ಕಳೆದ ಸಂಚಿಕೆಯಲ್ಲಿ ಈ ಪುಟದಲ್ಲಿ ಪ್ರಕಟವಾದ ವರದಿಯಲ್ಲಿ ಹೇಳಿದಂತೆ ದಲಿತರ ಭೂಮಿ ಹೋರಾಟವನ್ನು ವಿಫಲಗೊಳಿಸಲು ಪಟ್ಟಭದ್ರ ಹಿತಾಸಕ್ತಿಗಳು ಎಸೆದ ಪೆಟ್ರೋಲ್ ಬಾಂಬ್‌ನಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಬೃಂದಾ ಸಹನೀ ಜನವರಿ 20ರ ಮುಂಜಾನೆ ಪಟ್ನಾ ಆಸ್ಪತ್ರೆಯಲ್ಲಿ ಅಸು ನೀಗಿದರು.

ಜನವರಿ 22ರಂದು ರೂನಿ ಸೈದ್‌ಪುರ್‌ನಲ್ಲಿ ಆಕೆಯ ಮೇಲೆ ಪೆಟ್ರೋಲ್ ಬಾಂಬ್ ಬಿದ್ದ ಜಾಗದಲ್ಲೇ ಶ್ರದ್ಧಾಂಜಲಿ ಅರ್ಪಿಸುವ ‘ಸಹಸಂಕಲ್ಪ’ ದಿನವನ್ನು ಆಚರಿಸಲಾಯಿತು. ಇದರಲ್ಲಿ ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷರಾಗಿರುವ ಅಶೋಕ ಧವಳೆಯವರೇ ಸ್ವತಃ ಭಾಗವಹಿಸಿದರು. ಇವರಲ್ಲದೆ ಬಿಹಾರ ರಾಜ್ಯ ಸಿಪಿಐ(ಎಂ) ಕಾರ್ಯದರ್ಶಿ ಅವಧೇಶ್ ಕುಮಾರ್, ರಾಜ್ಯ ಮಹಿಳಾ ಸಮಿತಿಯ ಅಧ್ಯಕ್ಷೆ ನೀಲಮ್ ಮತ್ತು ಇತರ ಸಿಪಿಐ(ಎಂ), ಸಿಪಿಐ ಮತ್ತು ಆರ್‌ಜೆಡಿ ಮುಖಂಡರು ಭಾಗವಹಿಸಿ



ಶ್ರದ್ಧಾಂಜಲಿ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಸಭೆಯ ನಂತರ ಮುಖಂಡರು ವಿಂದಾ ಅವರ ಕುಟುಂಬದವರನ್ನು ಭೇಟಿಯಾದರು.

ಸ್ಥಳೀಯ ರೈತ ಮುಖಂಡ ದೇವೇಂದ್ರ ಯಾದವ್ ನೇತೃತ್ವದಲ್ಲಿ ಭೂಮಿತಿ ಮೀರಿದ ಜಮೀನಿನ ಪಟ್ಟಾವನ್ನು ಅಲ್ಲಿ ಬಹಳ ಕಾಲದಿಂದ ನೆಲೆಸಿರುವ ದಲಿತ ಕುಟುಂಬಗಳಿಗೆ ನಿರಾಕರಿಸುವ ಹೊಸ ಬಿಡಿಒ ನ ಹುನ್ನಾರವನ್ನು ಪ್ರತಿಭಟಿಸಿ ಜನವರಿ 11ರಿಂದ 51 ದಲಿತ ಕುಟುಂಬಗಳು ಭಾಗವಹಿಸಿದ್ದ ಅನಿರ್ದಿಷ್ಟ ಕಾಲದ ಧರಣಿ ಆರಂಭವಾಯಿತು. ಜನವರಿ 18ರಂದು ಮಾತುಕತೆ ನಡೆಯಿತು. ಆದರೆ ಅದು ವಿಫಲವಾಯಿತು. ಈ ಮಾತುಕತೆಯಿಂದ ಹಿಂದಿರುಗುವಾಗ ಅವರ ಮೇಲೆ ಎಸೆದ ಪೆಟ್ರೋಲ್ ಬಾಂಬ್‌ನಲ್ಲಿ ಮೂವರು ಗಾಯಗೊಂಡಿದ್ದರು.

ಭೂಗಳ್ಳರ ಜತೆಗೆ ಶಾಮೀಲಾಗಿರುವ ಬಿಡಿಒ ಮತ್ತು ಆತನೊಂದಿಗೆ ಕೈಜೋಡಿಸಿದವರ ಮೇಲೆ ಮೇಲೆ ಸೆಕ್ಷನ್ 302ರ ಅಡಿಯಲ್ಲಿ ಕೇಸು ನಡೆಸಬೇಕು, ಧರಣಿಯಲ್ಲಿ ಭಾಗವಹಿಸಿದ್ದಕ್ಕಾಗಿ ಬಂಧಿಸಲಾದ ಕುಟುಂಬಗಳಿಗೆ 10ಲಕ್ಷ ರೂ. ಪರಿಹಾರ ಮತ್ತು ತಲಾ ಒಬ್ಬರಿಗೆ ಸರ್ಕಾರಿ ನೌಕರಿ ಹಾಗೂ ತಕ್ಷಣವೇ 316 ಕುಟುಂಬಗಳಿಗೆ ಮನೆ ಪಟ್ಟಾ ನೀಡಬೇಕು ಎಂದು ರಾಜ್ಯ ಸಿಪಿಐ(ಎಂ) ಆಗ್ರಹಿಸಿದೆ.

ಭೂಸುಧಾರಣೆ ಕುರಿತಂತೆ ಡಿ. ಬಂದೋಪಾಧ್ಯಾಯ ವರದಿಯನ್ನು ಮೂಲೆಗುಂಪು ಮಾಡಿದ ನಿತೀಶ್ ಕುಮಾರ್ ಸರಕಾರ ಬಡರೈತರನ್ನು ಮರುಳು ಮಾಡಲು ‘ಆಪರೇಶನ್ ದಾಖಲ್-ದೆಹಾನಿ’ ಆರಂಭಿಸಿತು. ಇದರ ಘೋಷಿತ ಉದ್ದೇಶ ಸರಕಾರೀ, ಸರ್ವೋದಯ ಮತ್ತು ಭೂಮಿತಿ ಮೀರಿದ ಜಮೀನುಗಳನ್ನು ಅದಕ್ಕೆ ಅರ್ಹರಾದವರಿಗೆ ಹಂಚುವುದು. ಆದರೆ ವಾಸ್ತವವಾಗಿ ಇದು ಭೂಗಳ್ಳರು, ಪಟ್ಟಭದ್ರರು ಹೊಸ ‘ಫಲಾನುಭವಿ’ಗಳನ್ನು ಸೃಷ್ಟಿಸಿ ಹೊಸ ಇಂತಹ ಜಮೀನುಗಳಲ್ಲಿ ಈಗಾಗಲೇ ಬಹಳ ವರ್ಷಗಳಿಂದ ನೆಲೆಸಿದ್ದ ಬಡವರನ್ನು, ದಲಿತರನ್ನು ಒಕ್ಕಲೆಬ್ಬಿಸುವ ಕಾರ್ಯಾಚರಣೆಯಾಗಿ ಬಿಟ್ಟಿದೆ. ಮೇಲೆ ಹೇಳಿದ ಸೀತಾಮಡಿ ಜಿಲ್ಲೆಯ ರೂನಿ ಸೈದ್‌ಪುರ್‌ನಲ್ಲಿ ಬೃಂದಾ ಸಹನೀ ಅವರನ್ನು ಬಲಿ ತೆಗೆದುಕೊಂಡ ಘಟನೆ ಇದಕ್ಕೆ ಒಂದು ಉದಾಹರಣೆ.

ಶ್ರದ್ಧಾಂಜಲಿ ಸಭೆಯಲ್ಲಿ ಮಾತಾಡುತ್ತ ಎಐಕೆಎಸ್ ಅಧ್ಯಕ್ಷ ಅಶೋಕ ಧವಳೆಯವರು ನಿತೀಶ್ ಕುಮಾರ್ ಸರಕಾರವನ್ನು ಬಲವಾಗಿ ಟೀಕಿಸುತ್ತ, ಈ ಮುಖ್ಯಮಂತ್ರಿ ಅತ್ಯಂತ ಸಮಯಸಾಧಕ ವ್ಯಕ್ತಿಯಾಗಿ ಬಿಟ್ಟಿದ್ದಾರೆ, ಭೂಸುಧಾರಣೆ ಕುರಿತಂತೆ ತಾನೇ ನೇಮಿಸಿದ ಆಯೋಗದ ವರದಿಯನ್ನು ಭೂಮಾಲಕ ಲಾಬ್ಬಿಯ ಒತ್ತಡಕ್ಕೆ ಮಣಿದು ಕಸದ ಬುಟ್ಟಿಗೆ ಹಾಕಿರುವ ವ್ಯಕ್ತಿ ಈತ ಎಂದು ಹೇಳಿದರು. ಈಗ ಈ ಸರಕಾರ ಕ್ರಿಮಿನಲ್ ಚಟುವಟಿಕೆಗಳಲ್ಲಿ ತೊಡಗಿರುವ ಭೂಮಾಫಿಯಾದೊಂದಿಗೆ ಕೈಜೋಡಿಸಿದ್ದು, ಇವರ ವಿರುದ್ಧ ಹೋರಾಟಕ್ಕೆ ಎಐಕೆಎಸ್ ಸಂಪೂರ್ಣ ಬೆಂಬಲ ಕೊಡುತ್ತದೆ ಎಂದು ಅವರು ಭರವಸೆ ನೀಡಿದರು. ಬೃಂದಾ ಸಹನೀ ಮತ್ತು 316 ದಲಿತ ಕುಟುಂಬಗಳು ನ್ಯಾಯ ಪಡೆಯುವಂತಾಗಲು ಕಿಸಾನ್ ಸಭಾ ಮತ್ತು ಸಿಪಿಐ(ಎಂ) ಸರ್ವ ಪ್ರಯತ್ನ ನಡೆಸುವುದಾಗಿ ಅವಧೇಶ್ ಕುಮಾರ್ ಮತ್ತು ರೈತ ಮುಖಂಡ ಲಲ್ಲನ್ ಚೌಧುರಿ ಹೇಳಿದರು.



ತ್ರಿಪುರಾದಲ್ಲೂ ‘ಘರ್ ವಾಪ್ಸಿ’ ಹಾವಳಿ –ಧಾರ್ಮಿಕ ಸ್ವಾತಂತ್ರ್ಯದ ಮೇಲೆ ಹಲ್ಲೆ

ತ್ರಿಪುರಾದಲ್ಲಿ ಬಿಜೆಪಿ ಸರಕಾರ ಬಂದ ಮೇಲೆ ಹಿಂದು ಜಾಗರಣ್ ಮಂಚ್, ಭಜರಂಗ ದಳ ಮತ್ತಿತರ ಹಿಂದುತ್ವ ಸಂಘಟನೆಗಳು ಹುಟ್ಟಿಕೊಂಡು ಉತ್ತರಪ್ರದೇಶ, ಬಿಹಾರಗಳಂತೆ ಇಲ್ಲೂ ಧಾರ್ಮಿಕ ಸ್ವಾತಂತ್ರ್ಯದ ಮೇಲೆ ಹಲ್ಲೆಗಳು ಆರಂಭವಾಗಿವೆ. ಅಲ್ಪಸಂಖ್ಯಾತ ಸಮುದಾಯಗಳ ಧಾರ್ಮಿಕ ಚಟುವಟಿಕೆಗಳಿಗೆ ಅಡ್ಡಿ ಒಡ್ಡಲಾಗುತ್ತಿದೆ. ಇತ್ತೀಚೆಗೆ ಉನಕೋಟಿ ಜಿಲ್ಲೆಯ ಕೈಲಾಶ್‌ಹಾಟ್ ಸಬ್ ಡಿವಿಶನ್‌ನ ಜೊಲಾಯ್ ಗ್ರಾಮ ಪಂಚಾಯತ್ ಪ್ರದೇಶದಲ್ಲಿ 23 ಬುಡಕಟ್ಟು ಕುಟುಂಬಗಳ 98 ಜನರನ್ನು ಬಲವಂತವಾಗಿ ಧರ್ಮಪರಿವರ್ತನೆ ಮಾಡಿರುವ ಘಟನೆ ವರದಿಯಾಗಿದೆ. ಒರಾಂಗ್ ಮತ್ತು ಮುಂಡ ಬುಡಕಟ್ಟುಗಳಿಗೆ ಸೇರಿರುವ ಈ ಕುಟುಂಬಗಳು ಹಲವು ತಲೆಮಾರುಗಳಿಂದ ಕ್ರೈಸ್ತ ಧರ್ಮವನ್ನು ಆಚರಿಸುತ್ತಿದ್ದರು. ಜನವರಿ 20ರಂದು ಹಿಂದೂ ಜಾಗರಣ್ ಮಂಚ್ ಮಂದಿ ಇವರನ್ನೆಲ್ಲ ಬಲವಂತವಾಗಿ ಒಂದೆಡೆ ಸೇರಿಸಿ ‘ಜಗ್ಯ’(ಯಜ್ಞ) ನಡೆಸಿ ಇವರೆಲ್ಲ ಹಿಂದೂಗಳು ಎಂದು ಸಾರಿದರು.

ಗಣಮುಕ್ತಿ ಪರಿಷದ್ ಮತ್ತು ಇತರ ಪ್ರಗತಿಪರ ಸಂಘಟನೆಗಳು ಈ ಘಟನೆಯನ್ನು ಖಂಡಿಸಿದ್ದು ಈ ಬಗ್ಗೆ ತನಿಖೆ ನಡೆಸಬೇಕು, ಜನಗಳು ಸೌಹಾರ್ದದ ವಾತಾವರಣದಲ್ಲಿ ತಮ್ಮ ಧಾರ್ಮಿಕ ಆಚರಣೆಗಳನ್ನು ನಡೆಸುವಂತೆ ಆಗಬೇಕು ಎಂದು ಆಗ್ರಹಿಸಿವೆ.

ಜ.19ರ ಸರ್ಕಾರಿ ಬ್ರಿಗೇಡ್ ಪಿಕ್ನಿಕ್ ನಂತರ ಫೆ.3ರ ‘ಜನತೆಯ ಬ್ರಿಗೇಡ್’’ರ್‍ಯಾಲಿ ಟಿಎಂಸಿ ಭಯೋತ್ಪಾದನೆಯನ್ನೂ ಲೆಕ್ಕಿಸದೆ ಪಶ್ಚಿಮ ಬಂಗಾಲದಲ್ಲಿ ಭರದ ಸಿದ್ಧತೆ

ಫೆಬ್ರುವರಿ 3 ರಂದು ಕೊಲ್ಕತಾದ ಐತಿಹಾಸಿಕ ಬ್ರಿಗೇಡ್ ಮೈದಾನದಲ್ಲಿ ಬೃಹತ್ ರ್‍ಯಾಲಿಗೆ ರಾಜ್ಯಾದ್ಯಂತ ಭರದ ಸಿದ್ಧತೆ ನಡೆಯುತ್ತಿದೆ. ಟಿಎಂಸಿ ಹಿಂಸಾಚಾರದಿಂದ ಪೀಡಿತ, ಪ್ರಜಾಪ್ರಭುತ್ವದ ಮರಣಶಯ್ಯೆಯೆನಿಸಿರುವ ಹೂಗ್ಲಿ ಜಿಲ್ಲೆಯ ಆರಾಂಬಾಗ್, ಗೋಘಟ, ಖಿನಕುಲ್‌ನಲ್ಲಿ, ಪೂರ್ವ ಮೇದಿದನಿಪುರ ಜಿಲ್ಲೆಯ ನಂದಿಗ್ರಾಂನಲ್ಲಿ, ಉತ್ತರ 24 ಪರಗಣ ಜಿಲ್ಲೆಯ ಶಶಾನ್ ಪ್ರದೇಶದಲ್ಲಿ ಸಾವಿರಾರು ಕೆಂಬಾವುಟಗಳ ರ್‍ಯಾಲಿ ರಾಜ್ಯದ ಪ್ರತಿಪರ ಜನವಿಭಾಗಗಳಲ್ಲಿ ಹೊಸ ಹುಮ್ಮಸ್ಸು ಮೂಡಿಸಿದೆ ಎಂದು ‘ಗಣಶಕ್ತಿ’ ವರದಿ ಮಾಡಿದೆ. ಈ ಪ್ರದೇಶಗಳಲ್ಲಿ ಸಿಪಿಐ(ಎಂ) ಮತ್ತು ಎಡಶಕ್ತಿಗಳ ಬಗ್ಗೆ ಮಾತಾಡುವುದೇ ದೊಡ್ಡ ಅಪಾಯ ಎಂದು ಬಗೆಯಲಾಗಿತ್ತು. ಟಿಎಂಸಿ ಗೂಂಡಾಗಳವಿವಿಧ ಪ್ರಕಾರಗಳ ‘ದಂಡ’ಗಳಿಗೆ ತುತ್ತಾಗಬೇಕಿತ್ತು. ಇಂತಹ ಪರಿಸ್ಥಿತಿ ಬದಲಾಗುತ್ತಿರುವ ಸಂಕೇತವನ್ನು, ಭಯೋತ್ಪಾದನೆಯ ಅಕ್ಷವನ್ನು ಬೇಧಿಸುವ ಜನತೆಯ ದೃಢನಿರ್ಧಾರವನ್ನು ಈ ಪ್ರದೇಶಗಳಲ್ಲಿ ನಡೆದ ಎರಡು ರ್‍ಯಾಲಿಗಳು ಪ್ರದರ್ಶಿಸುತ್ತಿವೆ ಎಂದು ವರದಿಯಾಗಿದೆ.

ಆರಾಂಬಾಗ್- ಗೋಘಟ್ ಕಳೆದ ವರ್ಷ ಪಂಚಾಯತ್ ಚುನಾವಣೆಗಳಲ್ಲಿ 100% ಟಿಎಂಸಿ ಗೆಲುವನ್ನು ಕಂಡ ಪ್ರದೇಶ. ಏಕೆಂದರೆ ಎಡರಂಗದ ಅಭ್ಯರ್ಥಿಗಳು ಸ್ಪರ್ಧಿಸಲೂ ಬಿಡದ ಹಿಂಸಾಚಾರ ಮಯವಾಗಿ ಬಿಟ್ಟ ಪ್ರದೇಶವಾಗಿತ್ತು. ಇಲ್ಲಿ ನಡೆದ ನಡೆದ ಬೃಹತ್‌ರ್‍ಯಾಲಿಯ ನೇತೃತ್ವವನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರೂ, ಎಡರಂಗದ ಅಧ್ಯಕ್ಷರೂ ಆಗಿರುವ ಬಿಮನ್ ಬಸು ವಹಿಸಿದ್ದರು. ಹಿರಿಯ ಎಡರಂಗ ಮುಖಂಡರೇ ಸ್ವತಃ ರ್‍ಯಾಲಿಯ ನೇತೃತ್ವ ವಹಿಸಿರುವ ಸುದ್ದಿ ಮತ್ತಷ್ಟು ಜನಸಾಮಾನ್ಯರು ಈ ಕೆಂಬಾವುಟ್ ಲಾಂಗಹ್ ಮಾರ್ಚ್‌ನಲ್ಲಿ ಭಾಗವಹಿಸುವಂತೆ ಮಾಡಿದೆ ಎಂದು ಹೇಳಲಾಗಿದೆ.

“ನಾವೆಲ್ಲ ಮಾತ್ರವಲ್ಲ, ಇನ್ನಷ್ಟು ಮಂದಿ ಫೆಬ್ರುವರಿ 3ರ ಜನತಾ ರ್‍ಯಾಲಿಯಲ್ಲಿ ಭಾಗವಹಿಸುತ್ತೇವೆ. ಜನವರಿ19ರ ರ್‍ಯಾಲಿಯ ಹೆಸರಲ್ಲಿ ನಡೆದ ಸರ್ಕಾರಿ ಪ್ರಾಯೋಜಿತ ಪಿಕ್ನಿಕ್‌ಗೆ ತದ್ವಿರುದ್ಧವಾಗಿ ಎಡರಂಗ ಕರೆ ಕೊಟ್ಟಿರುವ ಫೆಬ್ರುವರಿ 3ರ ರ್‍ಯಾಲಿ ‘ಜನತಾ ಬ್ರಿಗೇಡ್’ ಆಗಲಿದೆ” ಎಂದು ರ್‍ಯಾಲಿಯಲ್ಲಿ ಭಾಗವಹಿಸಿದ ಬೀದಿ ಬದಿ ವ್ಯಾಪಾರಿ ಅನಿಲ್ ರಾಯ್ ‘ಗಣಶಕ್ತಿ’ ವರದಿಗಾರ ಪ್ರಶ್ನೆಗೆಉತ್ತರಿಸುತ್ತ ಹೇಳಿದರು.

ಅತ್ತ ಟಿಎಂಸಿ ಮತ್ತು ಬಿಜೆಪಿ ಕೂಡ ಸುಮ್ಮನಿಲ್ಲ, ತಮ್ಮೆಲ್ಲ ಹಿಂಸಾಚಾರೀ ಶಕ್ತಿಯನ್ನು ಪ್ರದರ್ಶಿಸುವಲ್ಲಿ ಕೈಜೋಡಿಸಿದ್ದಾರೆ, ರ್‍ಯಾಲಿಯಲ್ಲಿ ಬಾಗವಹಿಸಿದವರ ರಾತ್ರಿ ಊಟಕ್ಕೆ ಸಿದ್ದಪಡಿಸಿದ್ದ ಆಹಾರವನ್ನು, ಪಾತ್ರೆಪಡಗಗಳನ್ನು ಧ್ವಂಸ ಮಾಡಿದ್ದಾರೆ. ಆದರೂ ಕೆಂಬಾವುಟದ ಕಾರ್ಯಕರ್ತರ ಮುನ್ನಡೆಯ ತಡೆಯಲು ವಿಫಲರಾಗಿದ್ದಾರೆ.

ಟಿಎಂಸಿ ಮತ್ತು ಬಿಜೆಪಿ ಎರಡೂ ಪಕ್ಷಗಳು ಕೃಷಿಯಲ್ಲಿ ನಿರತರಾಗಿರುವ ಜನಗಳ ಬಗ್ಗೆ ಒಂದೇ ರೀತಿಯ ಆಕ್ರಾಮಕ ನಿಲುವನ್ನು ಮುಂದುವರೆಸುತ್ತಿದ್ದಾರೆ ಎಂದು ಬಿಮನ್ ಬಸು ಹೇಳಿದರು. ಆಳುವ ಪಕ್ಷದ ಗೂಂಡಾಗಿರಿಯಲ್ಲಿ ಪೋಲೀಸ್ ಮತ್ತು ಆಡಳಿತದ ಶಾಮೀಲಿನಿಂದಾಗಿ ಇಡೀ ಪಶ್ಚಿಮ ಬಂಗಾಲ ಪ್ರಜಾಪ್ರಭುತ್ವದ ಮರಣಶಯ್ಯೆಯಲ್ಲಿದೆ. ಇದರಿಂದ ಎದ್ದು ಬರಲು ಒಂದು ಬಲಿಷ್ಟ ಆಂದೋಲನದ ಅಗತ್ಯ ಇದೆ ಎಂಬುದನ್ನು ಜನರು ಅರಿತುಕೊಳ್ಳುತ್ತಿದ್ದಾರೆ ಎಂದು ಮುಂದುವರೆದು ಅವರು ಹೇಳಿದರು.

ಈ ಬಾರಿ ಸಾಮಾಜಿಕ ಜಾಲತಾಣದಲ್ಲಿ ‘ಜನತೆಯ ಬ್ರಿಗೇಡ್’ ಎಂದು ಭರದ ಪ್ರಚಾರಾಂದೋಲನ ನಡೆಯುತ್ತಿದೆ.



ಕಳೆದ 37 ದಿನಗಳಿಂದ ಅಮೆರಿಕದ ಸರಕಾರ 'ಬಂದ್' ಆಗಿದೆ! ಸುಮಾರು 8 ಲಕ್ಷ ಫೆಡರಲ್ (ಕೇಂದ್ರ) ಸರಕಾರದ ನೌಕರರಿಗೆ ವೇತನ ಕೊಡಲು ಸಾಧ್ಯವಿಲ್ಲದೆ ಆಯಾ ಇಲಾಖೆಗಳು ಬಂದ್ ಆಗಿವೆ. ಹೆಚ್ಚಿನ ಇಲಾಖೆಗಳು ಸಾರ್ವಜನಿಕ ಸೇವೆಯಲ್ಲಿ ತೊಡಗಿದ್ದು ಈ ಎಲ್ಲಾ ಸೇವೆಗಳು ಬಂದ್ ಆಗಿವೆ. ಅಧ್ಯಕ್ಷ ಟ್ರಂಪ್ ಅಮೆರಿಕಾ–ಮೆಕ್ಸಿಕೊ ಗಡಿಯಲ್ಲಿ 5.7 ಶತಕೋಟಿ ಡಾಲರ್ ಮೌಲ್ಯದ ಗೋಡೆಯನ್ನು ನಿರ್ಮಾಣ ಮಾಡಿದರೆ ಮಾತ್ರ, ಹೆಚ್ಚುತ್ತಿರುವ ವಲಸೆ ಬಿಕ್ಕಟ್ಟಿಗೆ ಪರಿಹಾರ ಒದಗಿಸ ಬಹುದಾಗಿದೆ, ಎಂದು ಪುನರುಚ್ಚರಿಸಿದ್ದಾರೆ. ಇದನ್ನು ಸದನದಲ್ಲಿ ಹಲವು ರಿಪಬ್ಲಿಕನ್ನರು ಹಾಗೂ ಡೆಮಾಕ್ರಟರು ಒಪ್ಪುತ್ತಿಲ್ಲ. ಅಲ್ಲಿಯವರೆಗೂ 'ಶಟ್ ಡೌನ್' ಮುಂದುವರಿಸಲಾಗುವುದು; ಮಾತ್ರವಲ್ಲದೆ, ತುರ್ತುಪರಿಸ್ಥಿತಿ ಯನ್ನು ಘೋಷಿಸಲಾಗುವುದು ಎಂದಿದ್ದಾರೆ ಅಧ್ಯಕ್ಷ ಟ್ರಂಪ್. ಅವರ ವಲಸೆಗಾರ–ವಿರೋಧಿ ನೀತಿಗೆ ವ್ಯಾಪಕ ವಿರೋಧವಿದೆ. ಇದು ಸದನದಲ್ಲೂ ಪ್ರತಿಬಿಂಬಿತವಾಗಿದೆ.

'ಮೆಕ್ಸಿಕೊ ಗೋಡೆ'ಯ ಗರ ಬಡಿದ ಅಮೆರಿಕಾ

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಕಳೆದ 37 ದಿನಗಳಿಂದ ಅಮೆರಿಕದ ಸರಕಾರ 'ಬಂದ್' ಆಗಿದೆ! ಅಮೆರಿಕದ ಸರಕಾರಕ್ಕೆ ಗರ ಬಡಿದಿದೆ. ಸರಕಾರಿ ಕಚೇರಿಗಳು, ಸೇವೆಗಳು ಮುಚ್ಚಲಾಗಿದೆ. ಅಮೆರಿಕದ ಸರಕಾರಿ ನೌಕರರು ಮುಷ್ಕರ ಹೂಡಿದ್ದಾರೆ ಎಂದುಕೊಳ್ಳಬೇಡಿ. ಸಾಮಾನ್ಯವಾಗಿ ಎಲ್ಲಾ ದೇಶಗಳಲ್ಲಿ ನೌಕರರು ಮುಷ್ಕರ ಹೂಡಿದಾಗ ಹೀಗಾಗುತ್ತದೆ. ಆದರೆ ಅಮೆರಿಕ 'ಸಾಮಾನ್ಯ' ದೇಶವಲ್ಲವಲ್ಲ! ಅಲ್ಲಿ ಸರಕಾರವೇ ಅಥವಾ ಸರಕಾರದ ಮುಖ್ಯಸ್ಥರಾದ ಅಧ್ಯಕ್ಷರೇ ಮುಷ್ಕರ ಹೂಡಿದ್ದಾರೆ. ಅದೂ ತಮ್ಮದೇ ಪಾರ್ಲಿಮೆಂಟ್ ವಿರುದ್ಧ! ಇದೇನು ಒಗಟಿನಂತಿದೆಯಲ್ಲ ಎನ್ನಬೇಡಿ. ಅಮೆರಿಕದ ಅಧ್ಯಕ್ಷರು ಮಂಡಿಸಿದ ಬಜೆಟನ್ನು ಪಾರ್ಲಿಮೆಂಟು ಒಪ್ಪದಿದ್ದಾಗ ಹೀಗಾಗುತ್ತದೆ. ಈಗಿನ 'ಬಂದ್'ನಲ್ಲಿ ಒಂದು ರೀತಿಯಲ್ಲಿ ಪಾರ್ಲಿಮೆಂಟು ವಿರುದ್ಧ ಅಧ್ಯಕ್ಷರು ಮುಷ್ಕರ ಹೂಡಿದ್ದಾರೆ ಎನ್ನಬಹುದು. ಬಜೆಟಿನಲ್ಲಿ ಮೆಕ್ಸಿಕೊ ಗಡಿಯುದ್ದಕ್ಕೂ ವಲಸೆಗಾರರನ್ನು ಪರಿಣಾಮಕಾರಿಯಾಗಿ ತಡೆಯಲು ಗೋಡೆ ಕಟ್ಟುವ ಅವರ 'ಇಷ್ಟವಾದ' ಯೋಜನೆಗೆ ಹಣ ತೆಗೆದಿಡಲು ಪಾರ್ಲಿಮೆಂಟು ನಿರಾಕರಿಸಿದೆ. ಅಮೆರಿಕದಲ್ಲಿ ಈ ಸರಕಾರಿ ಬಂದ್ ನ್ನು 'ಶಟ್ ಡೌನ್' ಎಂದು ಕರೆಯುತ್ತಾರೆ. ಸುಮಾರು 8 ಲಕ್ಷ ಫೆಡರಲ್ (ಕೇಂದ್ರ) ಸರಕಾರದ ನೌಕರರಿಗೆ ವೇತನ ಕೊಡಲು ಸಾಧ್ಯವಿಲ್ಲದೆ ಆಯಾ ಇಲಾಖೆಗಳು ಬಂದ್ ಆಗಿವೆ. ಹೆಚ್ಚಿನ ಇಲಾಖೆಗಳು ಸಾರ್ವಜನಿಕ ಸೇವೆಯಲ್ಲಿ ತೊಡಗಿದ್ದು ಈ ಎಲ್ಲಾ ಸೇವೆಗಳು ಬಂದ್ ಆಗಿವೆ.

'ಶಟ್ ಡೌನ್' ಎಂದರೇನು ?

ಡಿಸೆಂಬರ್ 21, 2018 ರಂದು ಪ್ರಸಕ್ತ 'ಶಟ್ ಡೌನ್' ಆರಂಭಗೊಂಡಿತು. ಇದು ಅಮೆರಿಕಾದ ಇತಿಹಾಸದಲ್ಲಿಯೇ ಸುದೀರ್ಘ ಕಾಲದ 'ಸರಕಾರಿ ಬಂದ್' ಆಗಿದೆ. ಇದೀಗ (ಪತ್ರಿಕೆ ಮುದ್ರಣಕ್ಕೆ ಹೋಗುವ ಜನವರಿ 25ರ ವರೆಗೂ) 37ನೇ ದಿನಕ್ಕೆ ಕಾಲಿಟ್ಟಿದೆ. ಇದರಿಂದಾಗಿ, ಫೆಡರಲ್ ನ 9 ಇಲಾಖೆಗಳಲ್ಲಿರುವ ಸುಮಾರು 3.80 ಲಕ್ಷ 'ಅತ್ಯವಶ್ಯವಲ್ಲದ' (ನಾನ್–ಕ್ರಿಟಿಕಲ್) ನೌಕರರನ್ನು ಯಾವುದೇ ವೇತನವಿಲ್ಲದೆ ಮನೆಗೆ ಕಳಿಸಲಾಗಿದೆ. ಟ್ರಂಪ್ ಆಡಳಿತವು ಸುಮಾರು 50 ಸಾವಿರದಷ್ಟು ನೌಕರರನ್ನು ವಾಪಸು ಕರೆಸಿಕೊಂಡಿದ್ದರೂ ಸಹಾ, ಅವರಿಗೆ ವೇತನವನ್ನು ಪಾವತಿಸಿಲ್ಲ. ಒಂದು ಕಡೆ 'ಬಂದ್' ಚಾಲ್ತಿಯಲ್ಲಿ ಇದ್ದಾಗಲೆ ವೇತನ ಇಲ್ಲದೆ ಅರೆಕಾಲಿಕ ಕೆಲಸಗಳನ್ನು ಕೂಡಾ ಲಕ್ಷಾಂತರ ಕಾರ್ಮಿಕರು ಮಾಡಿದ್ದಾರೆ. ಮತ್ತೊಂದೆಡೆ, ಸುಮಾರು 4.20 ಲಕ್ಷ 'ಅತ್ಯವಶ್ಯ' (ಕ್ರಿಟಿಕಲ್) ನೌಕರರಿಗೂ ಯಾವುದೇ ಹಣ ಪಾವತಿ ಮಾಡಲು ಸಾಧ್ಯವಿಲ್ಲ. ಆದರೆ ಕೆಲಸಕ್ಕೆ ಹಾಜರಾಗಿ ದುಡಿಯಲು ತಿಳಿಸಲಾಗಿದೆ. ಮುಂದೆ ಬಜೆಟ್ ಮಂಜೂರಾದಾಗ ಅವರ ವೇತನ ಕೊಡಲಾಗುವುದು. ಆದರೆ, ಕಾಂಟ್ರಾಕ್ಟ್ ಕಾರ್ಮಿಕರಿಗೆ ಅದು ಇರುವುದಿಲ್ಲವೆಂದು ಹೇಳಲಾಗಿದೆ.

'ಶಟ್ ಡೌನ್'ನಿಂದಾಗಿ ಇಲಾಖಾವಾರಾಗಿ ಕಡಿತಗೊಳಿಸಿದ ಕಾರ್ಮಿಕರ ಸಂಖ್ಯೆ ಈ ರೀತಿಯಿದೆ. ಕೃಷಿ ಕ್ಷೇತ್ರದ 95,383 ನೌಕರರಲ್ಲಿ ಶೇ.40ರಷ್ಟು ಕಡಿತ ಮಾಡಲಾಗಿದೆ. ಇದರಿಂದಾಗಿ ರೈತರಿಗೆ ಸಾಲ ಕೊಡುವುದನ್ನು ನಿಲ್ಲಿಸಲಾಗಿದೆ. ವಾಣಿಜ್ಯ ಇಲಾಖೆಯಲ್ಲಿ 47,897 ಶೇ.87 ರಷ್ಟು ಕಡಿತ. ಅದೇ ರೀತಿಯಲ್ಲಿ ಹೋಮ್ ಲ್ಯಾಂಡ್ ಸೆಕ್ಯೂರಿಟಿ ಯಲ್ಲಿ



2.328 ಲಕ್ಷದಲ್ಲಿ ಶೇ.13 ರಷ್ಟು ಕಡಿತ, ನಗರಾಭಿವೃದ್ಧಿ ಮತ್ತು ವಸತಿ ಇಲಾಖೆಗಳಲ್ಲಿ, ಶೇ.97 ರಷ್ಟು ಕಡಿತ, ಸಾರಿಗೆಯ 54,230, ಮತ್ತು ನ್ಯಾಯಾಲಯ ಇಲಾಖೆಗಳ 1.14 ಲಕ್ಷದಲ್ಲಿ ಶೇ.17 ರಷ್ಟು ಕಡಿತ, ಹಾಗೂ ಖಜಾನೆ ಇಲಾಖೆಯಲ್ಲಿ 87,267 ಶೇ.83 ರಷ್ಟು. ಒಟ್ಟಾರೆಯಾಗಿ, ಲಕ್ಷಾಂತರ ನೌಕರರನ್ನು ವೇತನವಿಲ್ಲದೆ ಮನೆಗೆ ಕಳುಹಿಸಲಾಗಿದೆ.

ಒಟ್ಟಾರೆಯಾಗಿ, 'ಬಂದ್'ನ ಮೊದಲ ಎರಡು ವಾರಗಳಲ್ಲಿ ಆರ್ಥಿಕ ಬೆಳವಣಿಗೆಯ ಮೇಲೆ ಪರಿಣಾಮ ಬೀರಿ, ಪ್ರತಿ ವಾರ ಶೇ.0.13 ರಷ್ಟು ವೃದ್ಧಿಯ ದರದಲ್ಲಿ ಕಡಿತ ಉಂಟಾಗಿದೆ ಎಂದು ಅಂದಾಜಿಸಲಾಗಿದೆ.

'ಸರಕಾರಿ ಬಂದ್' ಯಾಕೆ, ಹೇಗೆ?

ಸಾಮಾನ್ಯವಾಗಿ ಅಮೆರಿಕದ ಕಾಂಗ್ರೆಸ್ (ಪಾರ್ಲಿಮೆಂಟ್) ನ ಬಜೆಟ್ ನಿಂದ ಫೆಡರಲ್ ಕಾರ್ಯಕ್ರಮಗಳು ನಡೆಯುವುದರಿಂದ, ಇದಕ್ಕೆ ಅಗತ್ಯವಿರುವ ಹಣವನ್ನು ಅಮೆರಿಕಾದ ಕಾಂಗ್ರೆಸ್ ಸೆಪ್ಟೆಂಬರ್ 30 ರ ಒಳಗೆ ತೆರಿಗೆಗಳ ಮೂಲಕವೇ ಸಂಗ್ರಹಿಸುತ್ತದೆ. ಇದಕ್ಕೆ ಕಾಂಗ್ರೆಸ್ ಅನುಮೋದನೆ ನೀಡದಿದ್ದಾಗ "ಸರಕಾರ ಬಂದ್" ಆಗುತ್ತದೆ.

ಈ ಹಿಂದೆಯು ಕೂಡಾ ಅನೇಕ ಬಾರಿ ಸರ್ಕಾರ 'ಬಂದ್' ಆದ ಉದಾಹರಣೆಗಳಿವೆ. 1995 ರ ನವೆಂಬರ್ 13 ರಿಂದ ನವೆಂಬರ್ 19 ರ ವರೆಗೆ, ಡಿಸೆಂಬರ್ 5 ರಿಂದ ಜನವರಿ 6, 1996 ರವರೆಗೆ, ಎರಡು ಬಾರಿ ಸರ್ಕಾರ ಮುಚ್ಚಲ್ಪಟ್ಟಿತ್ತು. ಹಾಗೆಯೇ, ಇದಾದ ನಂತರ, ಅಕ್ಟೋಬರ್ 1, 2013 ರಲ್ಲಿ, 'ಶಟ್ ಡೌನ್' ಆಗಿತ್ತು. ಆ ಸಂದರ್ಭದಲ್ಲಿ, ರಿಪಬ್ಲಿಕನ್–ನಿಯಂತ್ರಿತ ಸದನ, ಬಡವರಿಗೆ ಆರೋಗ್ಯ ವಿಮೆ ಒದಗಿಸುವ ಅಧ್ಯಕ್ಷ ಒಬಾಮಾ ಅವರ 'ಹೆಲ್ತ್ ಕೇರ್' ಮಸೂದೆಯನ್ನು ತಿರಸ್ಕರಿಸಿತು. ಆ ಕಾರಣದಿಂದಾಗಿ ಸರಕಾರ 'ಬಂದ್' ಆಗಿತ್ತು. ಏಪ್ರಿಲ್ 28, ರ 2017 ರಲ್ಲಿಯು ಇದೇ ಕಾರಣದಿಂದಾಗಿ ಮುಚ್ಚಲ್ಪಟ್ಟಿತ್ತು. ಆ ನಂತರ ಜನವರಿ 19, 2018ರಲ್ಲಿ ಮೂರು ದಿನಗಳ ಕಾಲ ಸರಕಾರ 'ಮುಚ್ಚಲ್ಪಟ್ಟಿತ್ತು'. ಹೀಗೆ ಅಮೇರಿಕಾ ಸರ್ಕಾರದ 'ಬಂದ್'ಗೆ ಸಂಬಂಧಿಸಿದಂತೆ ಒಂದು ಇತಿಹಾಸವೇ ಇದೆ.

ಈ ಬಂದ್' ಫೆಡರಲ್ ಇಲಾಖೆಗಳ 'ಅತ್ಯವಶ್ಯ' ಬಜೆಟ್ ನಿಧಿಗಳು, ಮತ್ತು ಅಗತ್ಯ ಸೇವೆಗಳನ್ನು ಒದಗಿಸುವುದನ್ನು ಮುಚ್ಚುವುದಿಲ್ಲ. ರಕ್ಷಣಾ ಸೇವೆಗಳು, ರಾಷ್ಟ್ರೀಯ ಸುರಕ್ಷತಾ ಮತ್ತು ಭದ್ರತೆಗೆ ಒಳಗೊಂಡಿರುವ ಅವಶ್ಯಕ ಸೇವೆಗಳು ತೆರೆದಿರುತ್ತವೆ. ಬಾರ್ಡರ್ ಪ್ರೋಟೆಕ್ಷನ್ ಮತ್ತು ಇಮಿಗ್ರೇಷನ್ಸ್, ವಾಯು ಸಂಚಾರ ನಿಯಂತ್ರಣಗಳು ಮತ್ತು ಸಾರಿಗೆ ಭದ್ರತಾ ಆಡಳಿತವು ಕೂಡಾ ತೆರೆದಿರತ್ತವೆ. ನ್ಯಾಯಾಂಗ ಇಲಾಖೆ ತೆರೆದಿರುತ್ತದೆ. ಆದರೆ ಇಲ್ಲಿನ ಕಾರ್ಮಿಕರಿಗೆ ವೇತನ ಪಾವತಿಯ "ಶಟ್ ಡೌನ್" ಸಮಯದಲ್ಲಿ ಗ್ಯಾರಂಟಿ ಮಾತ್ರ ಇರುವುದಿಲ್ಲ. ಆದರೆ, ಅಂಚೆ ಸೇವೆ ಪ್ರತ್ಯೇಕ ಹಣ ಹೊಂದಿರುವುದರಿಂದ ಮೇಲ್ ಗಳು ಹಾಗೂ ಡೆಲಿವರಿ ಗಳು ತಲುಪುತ್ತವೆ. ಆದರೆ ವಿಳಂಬವಾಗುತ್ತವೆ. ರಾಷ್ಟ್ರೀಯ ಸಾಗರ ಮತ್ತು ವಾಯುಮಂಡಲ ಹೊರತು ಪಡಿಸಿದ ವಾಣಿಜ್ಯ ಮತ್ತು ಶಿಕ್ಷಣ ಮುಚ್ಚಿರುತ್ತದೆ. ವಸತಿ ಮತ್ತು ನಗರಾಭಿವೃದ್ಧಿ, ಒಳಾಂಗಣ, ರಾಷ್ಟ್ರೀಯ ಉದ್ಯಾನವನ ಹೊರತು ಪಡಿಸಿ, ಕಾರ್ಮಿಕರ ಅಂಕಿಅಂಶಗಳ ಕಛೇರಿ ಮತ್ತು ಲೇಬರ್, ನಾಸಾ, ಹೀಗೆ ಹಲವು ಅಗತ್ಯ ಸೇವೆಗಳನ್ನು ಹೊರತು ಪಡೆಸಿ, ಉಳಿದಂತೆ ಎಲ್ಲವೂ ಮುಚ್ಚಿರುತ್ತವೆ.

'ಮೆಕ್ಸಿಕೊ ಗೋಡೆ'ಗಾಗಿ ಟ್ರಂಪ್ ಹಠ

ಅಧ್ಯಕ್ಷ ಟ್ರಂಪ್ ಜನವರಿ 8 ರಂದು ರಾಷ್ಟವನ್ನು ಉದ್ದೇಶಿಸಿ ಮಾತನಾಡಿ, ಅಮೆರಿಕಾ–ಮೆಕ್ಸಿಕೊ ಗಡಿಯಲ್ಲಿ 5.7 ಶತಕೋಟಿ ಡಾಲರ್ ಮೌಲ್ಯದ ಗೋಡೆಯನ್ನು ನಿರ್ಮಾಣ ಮಾಡಿದರೆ ಮಾತ್ರ, ಹೆಚ್ಚುತ್ತಿರುವ ವಲಸೆ ಬಿಕ್ಕಟ್ಟಿಗೆ ಪರಿಹಾರ ಒದಗಿಸ ಬಹುದಾಗಿದೆ, ಎಂದು ತನ್ನ ವಲಸೆ ನೀತಿಯನ್ನು ಪುನರುಚ್ಚರಿಸಿದ್ದಾರೆ. ಇದನ್ನು ಸದನದಲ್ಲಿ ಹಲವು ರಿಪಬ್ಲಿಕನ್ ರು ಹಾಗೂ ಡೆಮಾಕ್ರಟ್ ಸದಸ್ಯರು ಒಪ್ಪುತ್ತಿಲ್ಲ. ಈ ಹಿನ್ನೆಲೆ ಯಲ್ಲಿ ಬಜೆಟ್ ನಲ್ಲಿ 5.7 ಶತಕೋಟಿ ಡಾಲರಿನಷ್ಟು ಹಣ ಒದಗಿಸುವವರೆಗೂ 'ಶಟ್ ಡೌನ್' ಮುಂದುವರಿಸಲಾಗುವುದು; ಮಾತ್ರವಲ್ಲದೆ, ಒಂದು ಹೆಜ್ಜೆ ಮುಂದು ಹೋಗಿ ತುರ್ತುಪರಿಸ್ಥಿತಿ ಯನ್ನು ಘೋಷಿಸಲಾಗುವುದು ಎಂದಿದ್ದಾರೆ ಅಧ್ಯಕ್ಷ ಟ್ರಂಪ್. ಇಂತಹ ಡೋಲಾಯಮಾನ ಸ್ಥಿತಿಗೆ ಬಲಿಯಾಗುತ್ತಿರುವವರು ಅಲ್ಲಿನ ಕಾರ್ಮಿಕರು. ಅದರಲ್ಲೂ ಕಾಂಟ್ರಾಕ್ಟ್ ಮತ್ತು ವಲಸೆಗಾರ ಕೆಲಸಗಾರರು ಎಂಬುದು ವಾಸ್ತವಿಕ. ಅಧ್ಯಕ್ಷ ಟ್ರಂಪ್ ಅವರ ವಲಸೆಗಾರ–ವಿರೋಧಿ ನೀತಿಗೆ ವ್ಯಾಪಕ ವಿರೋಧವಿದೆ. ಇದು ಸದನದಲ್ಲೂ ಪ್ರತಿಬಿಂಬಿತವಾಗಿದೆ.

ಮೆಕ್ಸಿಕೊದೊಂದಿಗಿನ ಯುಎಸ್ ಗಡಿಯು ಅಧಿಕೃತ ಅಂದಾಜಿನಂತೆ ಒಟ್ಟು ಸುಮಾರು 2000 ಮೈಲುಗಳ ಉದ್ದವಿದೆ. ಈಗಾಗಲೇ, ಮೂರನೇ–ಒಂದರಷ್ಟು ತಂತಿ ಗೋಡೆ ಅಥವಾ ತಂತಿ ಬೇಲಿಯನ್ನು, 2006 ರಲ್ಲಿ ಅನುಷ್ಠಾನಕ್ಕೆ ಬಂದ, "ಸೆಕ್ಯೂರಿಟಿ ಫೆನ್ಸ್ ಕಾಯಿದೆ "ಯ ಅನ್ವಯ ನಿರ್ಮಿಸಲಾಗಿದೆ. ಗಡಿ ಪ್ರದೇಶದಲ್ಲಿ ಉಂಟಾಗುವ ಅಡೆ–ತಡೆಗಳು ಹಾಗೂ ಚೆಕ್ ಪಾಯಿಂಟ್ ಹಾಗೂ ಸರಹದ್ದು ವಿಸ್ತರಿಸಲು, ಸುಮಾರು 2.3 ಶತಕೋಟಿ ಡಾಲರ್ ವಿನಿಯೋಗಿಸಿ ಇದನ್ನು ನಿರ್ಮಿಸಲಾಗಿದೆ. ಆದರೆ, ಇದೀಗ ವಲಸೆಗಾರರ ಸಂಖ್ಯೆಯು 83,000 ರಷ್ಟು ಹೆಚ್ಚಾಗಿದೆ ಎಂದು ಸರಕಾರದ ಅಂದಾಜು. ಟ್ರಂಪ್ ಪ್ರಸ್ತಾಪಿಸಿರುವ ಮೆಕ್ಸಿಕೊ–ಅಮೆರಿಕಾದ ಗಡಿಯ 2000 ಮೈಲಿಯ ಗೋಡೆ ನಿರ್ಮಾಣ ಕ್ಕೆ 5.7 ಶತಕೋಟಿ ಡಾಲರಿನಷ್ಟು ವೆಚ್ಚವಾಗುತ್ತದೆ. ಸುಮಾರು 1.44 ಲಕ್ಷ ಮೆಕ್ಸಿಕನ್ ವಲಸೆಗಾರರನ್ನು ತಡೆಯ ಬಹುದಾಗಿದೆ ಎಂದು ಸರಕಾರಿ ಅಂದಾಜು. ಆದರೆ ಗೋಡೆ ನಿರ್ಮಾಣದಿಂದ ಒಟ್ಟಾರೆಯಾಗಿ ವಾರ್ಷಿಕವಾಗಿ ಅಮೆರಿಕದ ಆರ್ಥಿಕತೆಗೆ 4 ಶತಕೋಟಿ ಡಾಲರ್ ಹಾನಿ ಉಂಟಾಗುತ್ತದೆ ಎಂದು ಒಂದು ಅಧ್ಯಯನ ಹೇಳಿದೆ.

ಗೋಡೆ ನಿರ್ಮಿಸುವ ಬದಲು, ಇದೇ ಹಣವನ್ನು ಉದ್ಯೋಗ ಸೃಷ್ಟಿಗೆ ಹಾಗೂ ಇನ್ನಿತರೆ ಅಗತ್ಯ ಸೇವೆಗಳಿಗೆ ವಿನಿಯೋಗಿಸಬಹುದು ಎಂಬ ಅಭಿಪ್ರಾಯಗಳನ್ನು ಅನೇಕ ಆರ್ಥಿಕ ತಜ್ಞರು ವ್ಯಕ್ತ ಪಡಿಸಿದ್ದಾರೆ. ಆದರೆ, ವಲಸೆ ನೀತಿ ಹಾಗೂ ಗೋಡೆ ನಿರ್ಮಾಣ ಟ್ರಂಪ್ ನ ಅಧ್ಯಕ್ಷೀಯ ಚುನಾವಣೆಯ ಪ್ರಮುಖ 'ಆಶ್ವಾಸನೆ' ಆಗಿರುವುದರಿಂದ, ಅವರು ಯಾರದೇ ಅಭಿಪ್ರಾಯಗಳಿಗೆ ಕಿವಿಗೊಡಲು ಸಿದ್ದರಿಲ್ಲ. ಸದನ ಮತ್ತು ಅಧ್ಯಕ್ಷ, ರಿಪಬ್ಲಿಕನ್ ಮತ್ತು ಡೆಮೊಕ್ರಾಟಿಕ್ ಪಕ್ಷಗಳ ನಡುವೆ ಹಲವು ಚೌಕಾಸಿಗಳು ನಡೆಯುತ್ತಿದ್ದರೂ ಇಷ್ಟರವರೆಗಿನ ಹಲವು ಪ್ರಸ್ತಾವಗಳನ್ನು ಸದನ ತಿರಸ್ಕರಿಸಿದೆ. ●



ವೆನೆಜುವೇಲಾದಲ್ಲಿ ಅಮೆರಿಕನ್ ಮಧ್ಯಪ್ರವೇಶ ಖಂಡಿಸಿ: ಯೆಚುರಿ

ಅಮೆರಿಕನ್ ಸರಕಾರ ವೆನೆಜುವೇಲಾದಲ್ಲಿ ರಾಜಕೀಯವಾಗಿ ಮೂಗು ತೂರಿಸಿ ಅಲ್ಲಿನ ವಿರೋಧ ಪಕ್ಷಗಳ ನಾಯಕನನ್ನು ಅಧ್ಯಕ್ಷ ಎಂದು ಮಾನ್ಯತೆ ನೀಡಿರುವುದನ್ನು ಭಾರತ ಸರಕಾರ ಖಂಡಿಸಬೇಕೆಂದು ಒತ್ತಾಯಿಸಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಧಾನಿ ಮೋದಿ ಅವರಿಗೆ ಪತ್ರ ಬರೆದಿದ್ದಾರೆ. ಆ ಮೂಲಕ ಅವರು ವೆನೆಜುವೇಲಾದ ಸ್ವಾತಂತ್ರ್ಯ ಸಾರ್ವಭೌಮತೆಯನ್ನು ಉಲ್ಲಂಘಿಸಿದ್ದಾರೆ. ಈಗಿನ ಅಧ್ಯಕ್ಷ ಮದುರೋ ವಿಧಿಬದ್ಧವಾಗಿ ಚುನಾಯಿತರಾಗಿದ್ದು ಅಂತರ್ರಾಷ್ಟ್ರೀಯ ವೀಕ್ಷಕರೂ ಸಹ ಅದನ್ನು ಒಪ್ಪಿಕೊಂಡಿದ್ದಾರೆ. ಅಮೆರಿಕ ಜತೆ ಜತೆಗೆ ವೆನೆಜುವೇಲಾದ ಮೇಲೆ ಆರ್ಥಿಕ ದಿಗ್ಬಂಧನಗಳನ್ನೂ ಹೇರಿದ್ದು ಮಿಲಿಟರಿ ಮಧ್ಯಪ್ರವೇಶದ ಬೆದರಿಕೆ ಹಾಕುತ್ತಿದೆ. ಭಾರತ ಸರಕಾರ ವೆನೆಜುವೇಲಾದ ಪ್ರಜಾಸತ್ತಾತ್ಮಕ ಹಕ್ಕು, ಪವಿತ್ರವಾದ ಸಾರ್ವಭೌಮತೆಯನ್ನು ಎತ್ತಿ ಹಿಡಿಯಬೇಕೆಂದು ಒತ್ತಾಯಿಸಿದ್ದಾರೆ.

JANASHAKTHI KANNADA VARA PATRIKE JANUARY 28 - FEBRUARY 3, 2019 Price: Rs. 10/- Date of Publication: 25 JANUARY 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283









ದೇವದಾಸಿ ಕಾಯ್ದೆ ಪರಿಣಾಮಕಾರಿಯಾಗಿ ಜಾರಿಯಾಗಬೇಕು: ಬಿ. ಮಾಳಮ್ಮ

ದೇವದಾಸಿ ಪದ್ದತಿ ಆಚರಣೆ ವಿರೋಧಿ ಕಾಯ್ದೆಯನ್ನು ತಿದ್ದುಪಡಿ ಮಾಡಿ, ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಬೇಕು ಎಂದು ಕರ್ನಾಟಕ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ಅಧ್ಯಕ್ಷೆ ಬಿ.ಮಾಳಮ್ಮ ಸರ್ಕಾರವನ್ನು ಆಗ್ರಹಿಸಿದರು.

ಹೊಸಪೇಟೆಯಲ್ಲಿ ಜನವರಿ 19–20ರಂದು ನಡೆದ ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘ ಹಮ್ಮಿಕೊಂಡಿದ್ದ 3ನೇ ರಾಜ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ದೇವದಾಸಿ ಪದ್ಧತಿ ಆಚರಣೆಗೆ ಕುಮ್ಮಕ್ಕು ನೀಡುವವರು ಮತ್ತು ಅದರಲ್ಲಿ ಶಾಮೀಲು ಆಗುವವರ ವಿರುದ್ಧ ಕಾನೂನು ರೀತಿ ಕಠಿಣ ಕ್ರಮ ತೆಗೆದುಕೊಳ್ಳಬೇಕು, ಎಂದರು.

'ರಾಜ್ಯದಲ್ಲಿ ಕೇವಲ 40 ವರ್ಷ ಮೇಲ್ಪಟ್ಟವರಿಗೆ ಮಾಸಾಶನ ನೀಡಲಾಗುತ್ತಿದೆ. ಎಲ್ಲ ದೇವದಾಸಿ ಮಹಿಳೆಯರಿಗೆ ಮಾಸಾಶನ ನೀಡಬೇಕು. 14 ಜಿಲ್ಲೆಗಳಲ್ಲಿ ಮಾತ್ರ ದೇವದಾಸಿಯರ ಜನಗಣತಿಯನ್ನು ಮಾಡಲಾಗಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಮಾಡಬೇಕು. ದೇವದಾಸಿಯರಿಗೆ ತಲಾ 5 ಲಕ್ಷ ರೂ. ಮೌಲ್ಯದ ಮನೆಯನ್ನು ಕಟ್ಟಿಸಿಕೊಡಬೇಕು. ಮಕ್ಕಳ ವಿದ್ಯಾಭ್ಯಾಸಕ್ಕೆ ಅನುದಾನ ಕಲ್ಪಿಸಬೇಕು' ಎಂದು ಒತ್ತಾಯಿಸಿದರು.

ಸಂಘದ ಗೌರವ ಅಧ್ಯಕ್ಷ ಮತ್ತು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಯು.ಬಸವರಾಜ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅಧಿಕಾರಕ್ಕೆ ಬಂದು ಐದು ವರ್ಷಗಳಾದರೂ ಅಚ್ಛೇ ದಿನ ಬರಲಿಲ್ಲ. ಅವರು ಬಡವರ, ಕಾರ್ಮಿಕರ, ದಲಿತರ ಪರವಾಗಿ ಯಾವುದೇ ಯೋಜನೆಗಳನ್ನು ಜಾರಿಗೆ ತರಲಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರರು. ದೇವದಾಸಿ ಮಹಿಳೆಯರು ಸಾವಿರಾರು ವರ್ಷಗಳಿಂದ ದೌರ್ಜನ್ಯಕ್ಕೆ ಒಳಗಾಗಿದ್ದಾರೆ. ಅವರಿಗೆ ಕೇವಲ 1500 ರೂ. ಮಾಸಾಶನ ನೀಡಲಾಗುತ್ತಿದೆ. ಆ ಮೊತ್ತವನ್ನು ರೂ. 5 ಸಾವಿರಕ್ಕೆ ಹೆಚ್ಚಿಸಬೇಕು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಂಘದ ಪ್ರಧಾನ ಕಾರ್ಯದರ್ಶಿ ಟಿ.ವಿ.ರೇಣುಕಮ್ಮ, 'ಹಿಂದೆ ಸರ್ಕಾರ ದೇವದಾಸಿಯರ ಸರ್ವೆ ನಡೆಸಿ, 50 ಸಾವಿರ ದೇವದಾಸಿಯರನ್ನು ಗುರುತಿಸಿತ್ತು. ಉತ್ತರ ಕರ್ನಾಟಕ ಭಾಗದಲ್ಲಿ ಮಾತ್ರ ದೇವದಾಸಿಯರು ಇದ್ದಾರೆ ಎಂದು ವರದಿಯನ್ನು ನೀಡಿತ್ತು. ರಾಜ್ಯದ ಉತ್ತರ ಕನ್ನಡ, ತುಮಕೂರು ಸೇರಿದಂತೆ 15ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ 1 ಲಕ್ಷಕ್ಕೂ ಹೆಚ್ಚು ದೇವದಾಸಿಯರು ಇದ್ದಾರೆ' ಎಂದು ತಿಳಿಸಿದರು.

ಇದಕ್ಕೂ ಮುನ್ನ ನಗರದ ಗಾಂಧಿ ವೃತ್ತದಿಂದ ಅಂಬೇಡ್ಕರ್ ವೃತ್ತದವರೆಗೆ ನೂರಾರು ಮಹಿಳೆಯರು ಮೆರವಣಿಗೆ ನಡೆಸಿದರು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆಗಳನ್ನು ಕೂಗಿದರು.

ವಿವಿಧ ಸಂಘಟನೆಗಳ ಮುಖಂಡರಾದ ಗೋಪಾಲಕೃಷ್ಣ, ಗೀತಾ, ಜಂಬಯ್ಯ ನಾಯಕ, ಆರ್. ಎಸ್. ಬಸವರಾಜ, ಶಕುಂತಲಮ್ಮ, ಆರ್. ಭಾಸ್ಕರ ರೆಡ್ಡಿ, ಯಲ್ಲಮ್ಮ, ಕೆ.ನಾಗರತ್ನಮ್ಮ, ಎಚ್.ಪದ್ಮಾ, ನಾಗರಾಜ, ವೀರೇಶ್, ಸ್ವಾಮಿ, ಹುಲಿಗೆಮ್ಮ, ಮಂಜುನಾಥ, ಕರುಣಾನಿಧಿ, ಬಿಸಾಟಿ ಮಹೇಶ, ಕಲ್ಯಾಣಯ್ಯ, ಕೆ.ಎಂ.ಸಂತೋಷ, ಮುನಿಸ್ವಾಮಿ ಉಪಸ್ಥಿತರಿದ್ದರು. ●

4 ವರ್ಷಗಳಿಂದ ಅವೈಜ್ಞಾನಿಕ ಚಟುವಟಿಕೆಗಳ ಸಾಂಸ್ಥೀಕರಣ ಆಗಿದೆ: ನರೇಂದ್ರ ನಾಯಕ್

ಹೆಚ್.ಆರ್. ನವೀನಕುಮಾರ್

ದೇಶದ ಅಭಿವೃದ್ಧಿ ಎಂದರೆ ಒಂದು ದೇಶ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಎಷ್ಟು ಬೆಳವಣಿಗೆ ಮತ್ತು ಸ್ವಾವಲಂಬನೆ ಸಾಧಿಸಿದೆ ಎಂಬುದರ ಮೇಲೆ ನಿರ್ಧಾರಿತವಾಗುತ್ತದೆ. ಆ ಸಾಧನೆಯನ್ನು ಅಳೆಯಬೇಕಾದರೆ ಆ ದೇಶಕ್ಕೆ ವಿಜ್ಞಾನದಲ್ಲಿ ಎಷ್ಟು ನೊಬೆಲ್ ಬಂದಿದೆ ಎಂಬುದರ ಆಧಾರದಲ್ಲಿ ಅಳೆಯಬೇಕು. ಈ ಹಿನ್ನಲೆಯಲ್ಲಿ ಭಾರತ ದೇಶಕ್ಕೆ ಸ್ವಾತಂತ್ರ್ಯ ಲಭಿಸಿದ ನಂತರ ಒಂದೇ ಒಂದು ನೊಬೆಲ್ ಪಾರಿತೋಷಕ ವಿಜ್ಞಾನ ಕ್ಷೇತ್ರದಲ್ಲಿ ಬಂದಿಲ್ಲ ಇದೊಂದು ಅವಮಾನಕರ ಸಂಗತಿ ಎಂದು ಅಂತರಾಷ್ಟ್ರೀಯ ಖ್ಯಾತಿಯ ವಿಚಾರವಾದಿ ಪ್ರೊ.ನರೇಂದ್ರ ನಾಯಕ್ ಹೇಳಿದರು ಅವರು ' ಹಾಸನದ 'ಶ್ರಮ' ಸಮಾಜ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವು ನಗರದ ನಿವೃತ್ತ ನೌಕರರ ಭವನದಲ್ಲಿ ಆಯೋಜಿಸಿದ್ದ ಪವಾಡಗಳ ಹಿಂದಿರುವ ವೈಜ್ಞಾನಿಕ ಸತ್ಯಗಳ ಕುರಿತು ನರೇಂದ್ರ ನಾಯಕರೊಂದಿಗೆ ಪ್ರಾತ್ಯಕ್ಷಿಕೆ ಮತ್ತು ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು.

ಭಾರತವನ್ನು ಡೋಂಗಿ ಬಾಬಾಗಳು ನಿಯಂತ್ರಣ ಮಾಡುತ್ತಿದ್ದಾರೆ. ಅವರು ಸನ್ಯಾಸ ಧರ್ಮಕ್ಕೆ ವಿರುದ್ಧವಾಗಿ ಪವಾಡಗಳ ಮೂಲಕ ಜನರನ್ನು ವಂಚಿಸಿ ಕೋಟ್ಯಾಂತರ ರೂಗಳ ಆಸ್ತಿ ಮಾಡಿಕೊಂಡು ದೇಶವನ್ನು ಕಗ್ಗತ್ತಲೆಯಲ್ಲಿ ಇಟ್ಟಿದ್ದಾರೆ. ಇಂತಹ ಡೋಂಗಿ ಬಾಬಾಗಳ ಪವಾಡಗಳನ್ನು ಬಯಲಿಗೆಳೆಯುವುದರ ಮೂಲಕ ದೇಶವನ್ನು ಕಂದಾಚಾರಗಳಂತಹ ಮಾನವ ವಿರೋಧಿ ಚಟುವಟಿಕೆಗಳಿಂದ ಮುಕ್ತಗೊಳಿಸಬೇಕು ಎಂದು ವಿವರಿಸಿದ ಅವರು ಮಿಡ್ ಬ್ರೈನ್ ಆಕ್ಟಿವೇಟ್ ಮಾಡುವುದರ ಮೂಲಕ ಜ್ಞಾಪಕ ಶಕ್ತಿಯನ್ನು ವೃದ್ಧಿಸುವ, ಕಣ್ಣುಕಟ್ಟಿ ಬಣ್ಣ ಪತ್ತೆ ಹಚ್ಚುವ ಮತ್ತು ಓದುವ ಮೋಸದ ಧಂದೆ ದೇಶಾದ್ಯಂತ ಬಹಳವಾಗಿ ಎದ್ದಿವೆ. ವೈದ್ಯರುಗಳೆನಿಸಿಕೊಂಡವರಿಂದ ಈ ಅವೈಜ್ಞಾನಿಕ ಕ್ರಿಯೆಗಳು ನಡೆಯುತ್ತಿವೆ ಎಂದು ಆರೋಪಿಸಿದ ಅವರು ಇದೊಂದು ಮೋಸ, ಕಣ್ಣಿಗೆ ಕಟ್ಟುವ ಬಟ್ಟೆ ದೋಷದಿಂದ ಕೂಡಿರುತ್ತದೆ ಮತ್ತು ಮಕ್ಕಳನ್ನು ಸುಳ್ಳು ಹೇಳುವ ಪ್ರಕ್ರಿಯೆಗೆ ಮಾನಸಿಕವಾಗಿ ಒಳಪಡಿಸುತ್ತಾರೆ. ಇದು ಮಾನವ ದ್ರೋಹ ಮಾತ್ರವಲ್ಲ ದೇಶದ್ರೋಹವೂ ಹೌದು ಎಂದು ಖಂಡಿಸಿದ ಅವರು ಈ ಮಿಡ್ ಬ್ರೈನ್ ಆಕ್ಟಿವಿಟಿ ಹಿಂದಿರುವ ಮೋಸವನ್ನು ಪ್ರಾಯೋಗಿಕವಾಗಿ ಬಯಲು ಮಾಡಿದರು. ಕೇರಳ ರಾಜ್ಯದಲ್ಲಿ ಈ ಚಟುವಟಿಕೆ ನಡೆಸುವ ಬಹಳಷ್ಟು ಕೇಂದ್ರಗಳಿದ್ದವು ನಾನು ಕೇರಳ ಪ್ರವಾಸ ಮಾಡಿ ಇದನ್ನು ಬಯಲು ಮಾಡಿದ್ದರಿಂದ ಈಗ ಒಂದೇ ಒಂದು ಅಂಗಡಿಯಿಲ್ಲ ಎಂದರು.





ಅವೈಜ್ಞಾನಿಕ ಚಟುವಟಿಕೆಗಳು ಭಾರತದಲ್ಲಿ ಹಿಂದಿನಿಂದಲೂ ಇವೆ. ಆದರೆ ಅವುಗಳ ಸಾಂಸ್ಥೀಕರಣ ಈಗ್ಗೆ ನಾಲ್ಕು ವರ್ಷಗಳಿಂದ ಹೆಚ್ಚಾಗಿವೆ. ಮಾತ್ರವಲ್ಲ ಪ್ರಭುತ್ವವನ್ನು ನಿಯಂತ್ರಿಸವ ಮಟ್ಟಕ್ಕೂ ಇವು ಬೆಳೆದು ಬಿಟ್ಟಿವೆ. ಇಂತಹ ಶಕ್ತಿಗಳಿಂದಲೆ ವಿಚಾರವಾದ ಮತ್ತು ವಿಚಾರವಾದಿಗಳು ಪ್ರಾಣಕಳೆದುಕೊಳ್ಳುವ ಆತಂಕದಲ್ಲಿದ್ದಾರೆ ಎಂದು ವಿವರಿಸಿದರು.

33 ಖಾಯಿಲೆಗಳಿಗೆ ಗೋಮೂತ್ರ ರಾಮಬಾಣವೆಂದು, ರಾಮಚಂದ್ರಾಪುರದ ಮಠದಿಂದಲೇ ಜನರನ್ನು ದಿಕ್ಕು ತಪ್ಪಿಸುವ ಕೆಲಸ

ಪುಟ 11 ಕ್ಕೆ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**